ಬೆಲೆ ಎರಡು ಆಣೆ

ಕರ್ಮವೀರ

ಮಹಾತ್ಮರ ಮನೋರಂಗ

ಅನುವಾದಕರು:
ಶ್ರೀ. ರಂಗರಾವ ದಿವಾಕರ
ಜೀವನದ ವಿವಿಧ ಸಮಸ್ಯೆಗಳ ಬಗ್ಗೆ ಗಾಂಧೀಜಿಯ ವಿಚಾರಗಳನ್ನು ಅವರ ಭಾಷಣ ಲೇಖನಗಳಿಂದಲೇ ಆಯ್ದು, ಸಂಗ್ರಹಿಸಿದ ಪುಸ್ತಕ.
೩೦೪ ಪುಟ, ಬೆಲೆ: ೪-೮-೦
ಸಾಹಿತ್ಯ ಭಾಂಡಾರ ಹುಬ್ಬಳ್ಳಿ

ಸಂಪಾದಕರು:
ಹ. ರಾ. ಪುರೋಹಿತ, ಎಂ. ಎ.

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

Editor,
H. B. PUROHIT, M. A.

— [ಸಂಪುಟ ೧೯] — ಹುಬ್ಬಳ್ಳಿ ಸೋಮವಾರ ತಾರೀಖು ೧೫—೩—೧೯೪೮ — [ಸಂಚಿಕೆ ೪೬] —

ಉರವಕೊಂಡದ ಮಹಾಸ್ವಾಮಿಗಳು



" ಕನ್ನಡಿಗರು ದ್ವೇಷಾಸೂಯೆಗಳನ್ನು ಬಿಡಬೇಕು, ಒಮ್ಮತದಿಂದ ಕಾರ್ಯಮಾಡಿ ಸುಂದರ ಸ್ವತಂತ್ರ ಕರ್ನಾಟಕ ಪ್ರಾಂತವನ್ನು ಕಟ್ಟಬೇಕು " ಎಂದು ಇತ್ತೀಚೆಗೆ ಧಾರವಾಡ, ಹುಬ್ಬಳ್ಳಿ, ಗದಗುಗಳಲ್ಲಿ ಸಂಚರಿಸಿದ ಶ್ರೀ ಕರಿಬಸವರಾಜೇಂದ್ರರು ಅಪ್ಪಣೆ ಕೊಡಿಸಿದ್ದಾರೆ.

ಕಾವ್ಯ ಸಮೀಕ್ಷೆ

ಬರೆದವರು, ಪ್ರೊ. ತೀ. ನಂ. ಶ್ರೀಕಂಠಯ್ಯನವರು. ಪ್ರಕಾಶಕರು ಕಾವ್ಯಾಲಯ, ಮೈಸೂರು, ಪುಟ ೧೩೪, ಬೆಲೆ ಸಾದಾ ಪ್ರತಿಗೆ ರೂ. ೨ ಕ್ಯಾಲಿಕೋ ಪ್ರತಿಗೆ ರೂ. ೩-೮-೦

'ಕಾವ್ಯ ಸಮೀಕ್ಷೆ'ಯೊಂದು ವಿಮರ್ಶಾಗ್ರಂಥ ಇದರಲ್ಲಿ 'ಕಾಳಿದಾಸನ ನಾಟಕಗಳಲ್ಲಿ ದುರಂತ ವಸ್ತು ವಿನ್ಯಾಸ,' 'ಶಾಕುಂತಲವನ್ನು ಕುರಿತು', 'ಜನ್ನನ ಕಾವ್ಯಗಳಲ್ಲಿ ಪ್ರಣಯ ನಿರೂಪಣೆ', 'ಕನ್ನಡ ಭಾರತದಲ್ಲಿ ಶೃಂಗಾರ ಸನ್ನಿವೇಶಗಳು ಮತ್ತು 'ಮಹಾದೇವಿಯಕ್ಕನ ಕೆಲವು ವಚನಗಳು' ಎಂಬ ೫ ವಿಮರ್ಶೆಗಳಿವೆ. ವಿಮರ್ಶಕನು ಎಂಥವನು? ವಿಮರ್ಶೆ ಯಾವ ರೀತಿಯಲ್ಲಿ ಸಾಗಬೇಕು ಎಂಬುದರ ಅರಿವಿಲ್ಲದೆ ಇಂದು ಲೇಖಕರು ತೊಡಗಲುಬಿಟ್ಟ ಮಾತ್ರ ವಿಮರ್ಶಕನೆಂದೂ, ವಿಮರ್ಶಕನು ಬೇಡಾದವರ ಕೃತಿಯಾದರೆ ದೋಷಾವಿಷ್ಕಾರ ಮಾಡುವುದು ಇಲ್ಲವೆ ಬೇಕಾದವರ ಕೃತಿಯಾದರೆ ಗುಣಾರೋಪ ಮಾಡುವುದು ಇವೇ ತನ್ನ ಕರ್ತವ್ಯವೆಂದೂ ತಿಳಿದಿರುವುದು ನಿಂದ್ಯವಾಗಿದೆ. ಸದಸದ್ವಿವೇಕವನ್ನು ಅಂಥ ಮುಗ್ಧ ಮತ್ತು ಶಠರಲ್ಲಿ, ಈ ಆದರ್ಶ ಗ್ರಂಥವು ಹುಟ್ಟಿಸಬಲ್ಲುದಾಗಿದೆ. ವಿಮರ್ಶಕನ ಸಂಸ್ಕಾರ ಸಂಪನ್ನತೆ, ವಿದ್ವತ್ತೆ, ಅನುಭವ, ರಸಭಾವ ವಿಮರ್ಶನ ಪದ್ಧತಿ, ಗುಣದೋಷ ವಿವೇಕ, ವಾಕ್ಶೈಲಿಯ ನಯ, ವಿನಯ, ಆರ್ಜವಗಳು ಮುಂತಾದ ಸರ್ವವನ್ನೂ ಈ ಪುಸ್ತಕದಲ್ಲಿಯ ೫ ವಿಮರ್ಶಾಪ್ರಬಂಧಗಳಲ್ಲಿ ತುಂಬ ಸ್ಪಷ್ಟವಾಗಿ ಕಾಣಬಹುದು. ಕಾಳಿದಾಸನ ಕೃತಿಗಳ ಆಸ್ವಾದನದಲ್ಲಿ ಸಂಪೂರ್ಣತೆ ಪಡೆದ ಈ ವಿಮರ್ಶಕರು ಆತನ 'ವಿಕ್ರಮೋರ್ವಶೀಯ'ದಲ್ಲಿ ಇರಬೇಕಾಗಿದ್ದ ಅವಿದ್ಧತೆಯನ್ನು ತರ್ಕಬದ್ಧವಾಗಿ, ಹೃದಯಸ್ಪರ್ಶಿಯಾಗಿ, ಮಹಾಕವಿಯ ಬಗ್ಗೆ ಸವಿನಯ ಗೌರವ ಭಾವ ತಾಳಿ ವಿವರಿಸಿರುವುದು ಈ ಐದೂ ವಿಮರ್ಶೆಗಳ ಶಿರೋರತ್ನವೆನಿಸಿದೆ. ಇದೊಂದೇ ಗ್ರಂಥಕರ್ತರ ಆದರ್ಶ ವಿಮರ್ಶಕತ್ವಕ್ಕೆ ನಿಕಷ ಪ್ರಾಯವಾಗಿದೆ. 'ಶಾಕುಂತಲ'ದ ರಸಸನ್ನಿವೇಶವನ್ನು ಬಿಡಿಬಿಡಿಸಿ ಎಸಳೆಸಳಾಗಿ ಬಣ್ಣಿಸಿ ಹೃದಯಂಗಮ ನಿರೂಪಣೆಯಿಂದ ಅದರ ರಸಭಾವಗಳ ತರ್ಕಸರಣಿ, ಪಾತ್ರಗಳ ನಡೆನುಡಿಗಳ ಸಮನ್ವಯ, ಸನ್ನಿವೇಶಗಳ ಔಚಿತ್ಯ ಇತ್ಯಾದ್ಯಂಶಗಳನ್ನು ಈ ಆದರ್ಶ ವಿಮರ್ಶಕರು ರಸಿಕರ ಮುಂದಿಟ್ಟಿದ್ದಾರೆ.


ಕನ್ನಡದ ಸುಪ್ರಸಿದ್ಧ ಕವಿಯಾದ ಜನ್ನನ 'ಯಶೋಧರ ಚರಿತೆ', 'ಅನಂತನಾಥ ಪುರಾಣ'ಗಳಲ್ಲಿಯ ಪ್ರಣಯ ಪ್ರಸಂಗಗಳ ಇತಿಮಿತಿಯನ್ನು ವಿದ್ವನ್ಮಾನ್ಯವಾಗಿ ೩ನೆಯ ಪ್ರಬಂಧದಲ್ಲಿ ಗ್ರಂಥಕರ್ತರು ವಿವೇಚಿಸಿದ್ದಾರೆ. ಮುಂದೆ ಕನ್ನಡ ಭಾರತದಲ್ಲಿಯ ಶೃಂಗಾರ ಸನ್ನಿವೇಶಗಳನ್ನು ಆಯ್ದು ಅವುಗಳಲ್ಲಿಯ ಔಚಿತ್ಯ, ಮಾಧುರ್ಯ, ಪರಿಪಾಕಗಳನ್ನು ವಿಸ್ತಾರವಾಗಿ ಅವರು ವಿಮರ್ಶಿಸಿದ್ದಾರೆ. ಕಡೆಯಲ್ಲಿ ಮಹಾದೇವಿಯಕ್ಕನ ವ್ಯಕ್ತಿತ್ವ ಮತ್ತು ಆದರ್ಶಗಳನ್ನು ಹೊರಗೆಡಹುವ ಉತ್ತಮ ವಚನಗಳನ್ನು ಅವುಗಳ ಅರ್ಥವನ್ನು ವಿವೇಚಿಸಿ ಆವಳ ಲೋಕಸೀಮಾತೀತವಾದ ಉದಾತ್ತ ಗುಣದ ಅನಂತತೆಯನ್ನು ಚೆನ್ನಾಗಿ ನಿರೂಪಿಸಿ ಪುಸ್ತಕವನ್ನು ಮುಗಿಸಲಾಗಿದೆ.

ಮೇಲಿನ ಐದು ಪ್ರಬಂಧಗಳಲ್ಲಿ ಸ್ಥಾಯಿ ಭಾವವಾದ ರತಿಯು ನಾನಾ ಪಾತ್ರಗಳಲ್ಲಿ ನಾನಾ ಸನ್ನಿವೇಶಗಳಲ್ಲಿ ನಾನಾ ವಿಧವಾಗಿ ಹುಟ್ಟಿ, ಬೆಳೆದು ಅವಿಚ್ಛಿನ್ನ ಇಲ್ಲವೆ ಸಂಕುಚಿತ ಪರಿಸ್ಥಿತಿಯಲ್ಲಿ ಕೊನೆಗಾಣುವ ಬಗೆಯನ್ನು ವಿವರಿಸಿರುವುದು ಕಂಡುಬರುತ್ತದೆ. ಇದೇ ಈ ಪ್ರಬಂಧಗಳನ್ನು ಒಂದು ವರ್ಗಕ್ಕೆ ಸೇರಿಸುವ ಸೂತ್ರ. ಇದೊಂದು ಅಮೂಲ್ಯ ವಿಮರ್ಶಾಗ್ರಂಥವೆನ್ನುವುದಕ್ಕಿಂತ ಹೆಚ್ಚಿಗೆ ಹೇಳುವುದು ಅನವಶ್ಯಕ. ಆದುದರಿಂದ ವಿದ್ವಾಂಸರಾದ ರಸಿಕರು ನಾ ಮೊದಲು ತಾ ಮೊದಲೆಂದು ಈ ಪ್ರಬಂಧಗಳನ್ನೋದಿ ಆನಂದಿಸದಿರಲಾರರೆಂದು ನಾವು ನಂಬುತ್ತೇವೆ.

ತೆಂಕನಾಡು

ಸಂಪಾದಕರು, ಶ್ರೀ. ಸೇಡಿಯಾಪು ಕೃಷ್ಣ ಭಟ್ಟ, ಶ್ರೀ. ಪಿ. ಕೆ. ನಾರಾಯಣ, ಶ್ರೀ. ಕಯ್ಯಾರು ಕಿಂಞಣ್ಣ ರೈ, ಶ್ರೀ. ಕೆ. ಶ್ರೀನಿವಾಸ ಶರ್ಮ ಇವರುಗಳು. ಪ್ರಕಾಶಕರು. ಸ್ವಾಗತ ಸಮಿತಿ, ೩೦ನೆಯ ಕನ್ನಡ ಸಾಹಿತ್ಯ ಸಮ್ಮೇಲನ, ಕಾಸರಗೋಡು, ದ. ಕನ್ನಡ. ಪುಟಗಳು ೧/೮ ರಾಯಲ್ ೧೫೫. ಬೆಲೆ ೨ ರೂಪಾಯಿ.

ದಕ್ಷಿಣ ಕನ್ನಡದ ಕಾಸರಗೋಡಿನಲ್ಲಿ ಡಿಸೆಂಬರ ೧೯೪೭ರಲ್ಲಿ ಕೂಡಿದ ೩೦ನೆಯ ಕನ್ನಡದ ಸಾಹಿತ್ಯ ಸಮ್ಮೇಲನದ ಕಾಲಕ್ಕೆ ಈ "ತೆಂಕನಾಡು" ಸ್ವಾಗತ ಸಮಿತಿಯವರಿಂದ ಪ್ರಕಟಿಸಲ್ಪಟ್ಟಿದೆ.



ನಾಡಿನ ಹಿಂದಿನ ಮತ್ತು ಇಂದಿನ ಐತಿಹಾಸಿಕ, ಸಾಂಸ್ಕೃತಿಕ ಮತ್ತು ಸಾಹಿತ್ಯಕ ವೈಶಿಷ್ಟ್ಯಗಳನ್ನು ಎತ್ತಿ ತೋರಿಸಲೆಂದು ಈ ದೊಡ್ಡ ಪುಸ್ತಕವನ್ನು ಪ್ರಕಟಿಸಲಾಗಿದೆ. ಇದರಲ್ಲಿ ಪ್ರಕಟವಾದ ಲೇಖನಗಳು ಆಯಾ ವಿಷಯಗಳನ್ನು ಕುರಿತು ವಿಶೇಷ ವ್ಯಾಸಂಗ ಮಾಡಿದವರೇ ಬರೆದವುಗಳಾಗಿವೆ. ಪ್ರಸಂಗೋಚಿತವಾಗಿ ಅಲ್ಲಲ್ಲಿ ಚಿತ್ರಗಳನ್ನು ಹಾಕಲಾಗಿದೆ. ಸ್ಥಳಾಭಾವದಿಂದ ಪ್ರಕಟಿಸಲಾಗದೆ ಉಳಿದ ದೀರ್ಘ ಲೇಖನ ಒಂದರ ವಿವರವನ್ನು ಪುಸ್ತಕದ ಮುನ್ನುಡಿಯಲ್ಲಿ ನೋಡಿ ತುಂಬ ನಿರಾಶೆಯೆನ್ನಿಸುತ್ತದೆ. ಯಾಕೆಂದರೆ ಆ ಲೇಖನ ಸಂಪಾದಕರ ಪ್ರಯತ್ನಕ್ಕೆ ಕಳಸವಿಡುತ್ತಿತ್ತು.

ಶ್ರೀ. ಗೋವಿಂದ ಪೈ ಅವರ "ತುಳುನಾಡು" ಎಂಬ ಸಂಶೋಧನಾತ್ಮಕವಾದ ೪೮ ಪುಟಗಳುದ್ದದ ಅಗ್ರಲೇಖದ ಸಾಲುಸಾಲಿನಲ್ಲಿಯೂ ಪರಿಶ್ರಮದ ಗುರುತುಗಳನ್ನು ಕಾಣಬಹುದು. ಕತೆ ಕಾದಂಬರಿಗಳ ಓದಿಗೆ ಮಾತ್ರ ಮೆಚ್ಚಿ ರುಚಿಯನ್ನು ಒಗ್ಗು ಮಾಡಿಕೊಂಡವರಿಗೆ ಈ ಬಗೆಯ ಲೇಖನಗಳು ನುರಿಸಲು ಬೇಸರ ಹುಟ್ಟಿಸಬಹುದು. ಆದರೆ ಹಾಗೆಂದು ಆಳವಾದ ಅಭ್ಯಾಸದ ಬಲದಿಂದ ಬರೆದ ಸತ್ವಯುತ ಸಾಹಿತ್ಯ ಸೃಷ್ಟಿಯಾಗದೆ ಹೋದರೆ ಹೇಗೆ? ಉಳಿದ ಲೇಖನಗಳಾದರೂ ಅಭ್ಯಾಸ ಬಲದಿಂದ ಬರೆದವೇ ಆಗಿದ್ದು ಅವುಗಳಿಂದ ಪಂಡಿತ ರಂಜನೆಯಾಗದಿರದು. 'ಕನ್ನಡ ಭಾಷೆಯ ವಿಕಾಸ' ಎಂಬ ಲೇಖನವೂ ತುಂಬ ಉಪಯುಕ್ತವಾಗಿದೆ. ಪುಸ್ತಕದ ಕೊನೆಗೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹೆಜ್ಜೆ ಹಾಕಿದ ದಕ್ಷಿಣ ಕನ್ನಡದ ಎಲ್ಲ ಸಾಹಿತ್ಯಕರ ಪಟ್ಟಿಯಿದೆ. ಪುಸ್ತಕಕ್ಕೆ ಬಳಸಿದ ಕಾಗದ ಹೊದಿಸಿದ ಕವಚ ಅತ್ಯುತ್ತಮವಿದ್ದು ಮುದ್ರಣ ಅದ್ವಿತೀಯವಾಗಿದೆ. ಸಾಹಿತ್ಯ ಸಮ್ಮೇಲನದ ಸಂದರ್ಭದಲ್ಲಿ ಇದನ್ನು ಪ್ರಕಟಿಸಿದ್ದು ಉಚಿತವಾಗಿದೆ. ಕನ್ನಡಿಗರೆಲ್ಲ ಇದರ ಲಾಭ ಪಡೆಯಲಿ.

ಸರ

ಬರೆದವರು, ಶ್ರೀ. ಅಮ್ಮೆಂಬಳ ಶಂಕರ ನಾರಾಯಣ ವಿದ್ವಾನ್. ಪ್ರಕಾಶಕರು ಸಾಧನ ಪ್ರಕಟನಾಲಯ ಧಾರವಾಡ. ಪುಟ ೧೦೪, ಬೆಲೆ ರೂ. ೧॥

'ಸರ'ದಲ್ಲಿ ೫೧ ಕವನಗಳಿವೆ. ಪುಸ್ತಕ ಬಿಡಿಸಿದೊಡನೆ 'ಅರುಣ'ದಲ್ಲಿಯ

ರಕ್ತಾಂಬರ ಸಕ್ತೋದರ
ಕಿರಣದ ಪರಿಪಾಟಿ;
ಕೆಂದಳದಲಿ ಬಿಗಿವಿಡಿದಿಹ
ಹವಳದ ಚೆಲು 'ಚಾಟಿ'

ಎಂಬ ಸೊಲ್ಲಿನ ರಚನೆ ಬ್ರಾಹ್ಮಣನೊಬ್ಬನು ತಾನು ಅತಿ ತುಚ್ಛವರ್ಣದವಳೆಂದೆಣಿಸಿದ ಸ್ತ್ರೀಯನ್ನು ಮದುವೆಯಾಗಿ ಜೊತೆಗೆ ಕರೆತಂದಂತೆನಿಸುತ್ತದೆ. ಪೂರ್ವಾರ್ಧದ ನುಡಿ ಸಂಸ್ಕೃತಕ್ಕೂ ಉತ್ತರಾರ್ಧದ್ದು ತಿಳಿಗನ್ನಡಕ್ಕೂ ಗಂಟುಹಾಕಿದ್ದು ಧೀಮಂತರ ಉದ್ವೇಗಕ್ಕೆ ಕಾರಣವಾಗದಿರದು. 'ಉಷೆ'ಯನ್ನು ಕಡಂರಿ ಅದಕ್ಕಿಂತ ಬಾಲಸಾಹಿತ್ಯದ 'ಬಣ್ಣದ ತಗಡಿನ ತುತ್ತೂರಿ' ಎಂಬ ಪದ್ಯವೇ ಹೆಚ್ಚು ರಸವತ್ತೆನಿಸುತ್ತದೆ.

ಕವಿಯಾದವನಿಗೆ ಪದ ಮೈತ್ರಿಯ ಜ್ಞಾನವಿಲ್ಲದಿರಲಾರದು. ಕೇವಲ ಪಂಡಿತರಿಗೆ ಕೋಶದಲ್ಲಿರುವ ಶಬ್ದಗಳೆಲ್ಲ ಒಂದೇ ಕುಲಕ್ಕೆ ಸೇರಿದವೆಂದೂ ಅವುಗಳನ್ನು ಜಾತಕ ನೋಡದೆ ಮದುವೆಮಾಡಿಬಿಡಬಹುದೆಂದೂ ಎನಿಸಬಹುದು. ಇಂಥದೇ ಪ್ರಮಾದ ಈ ಸಂಗ್ರಹದ ಅನೇಕ ಕವನಗಳಲ್ಲಿ ಕಂಡು ಬರುತ್ತದೆ. ಈ ಕವಿಯು 'ಮೋಹನ ಮುರಲಿ'ಯಲ್ಲಿಯ

ಚಂಚಲ ಕುಂಡಲಮಂಡಿತ ಗಂಡ
ಸ್ಥಲಯುಗ ಸಂಶೋಭಿತ ಮುಖನು,
ನವಿಲಿನಗರಿಯಿಂ ಕಿರೀಟವನಾಂತಿಹ
ವನಮಾಲಿಯು ನಡುನಿಂದಿಹನು

ಎಂಬ ನುಡಿಯನ್ನು ಕಂಡಾಕ್ಷಣ

ಸ್ಮರೇ ಖರಃ ಖಲಃ ಕಾಂತಃ
ಕಾಯಃ ಕೋಪಶ್ಚ ನಃ ಕೃಶಃ।
ಚ್ಯುತೋ ಮಾನೋಽಧಿಕೋ ರಾಗೋ
ಮೋಹೋ ಜಾತೋಽಸವೋ ಗತಾಃ॥

ಎಂಬ ದಂಡಿಯ ಬಂಧದ ಪಾರುಷ್ಯ ಮತ್ತು ಶೈಥಿಲ್ಯಗಳನ್ನು ಪ್ರದರ್ಶಿಸುವ ಉದಾಹರಣೆ

ಪ್ರಕೃತಿಯು ಚೈತನ್ಯವನಾನುತ' ಎಂಬುದನ್ನು ಕೇಳಿದೊಡನೆ ವ್ಯಾಕರಣ ತುದ್ಧವಿದ್ದರೂ ಕರ್ಣಶುದ್ಧವಿಲ್ಲ ಎಂದು ರಸಜ್ಞನೆನ್ನದಿರನು; ಇನ್ನು 'ಚಿತ್ರವನ್ನು ಸಾಧಿಸು' ಮುಂತಾದ ಕನ್ನಡಕ್ಕೆ ಅಸಹಜವಾದ ಪ್ರಯೋಗಗಳು ತುಂಬಿಕೊಂಡಿವೆ. ಇದರ ಮೇಲೆ ವ್ಯಾಕರಣಕ್ಕೆ ಬರೆಕೊಡುವ 'ಸರಿತಟ'ದಂಥ ಪ್ರಯೋಗಗಳೂ ಇವೆ. ಅಲ್ಲದೆ ಇವರ 'ಚೂರ್ಣ ಕುಂತಳ'ವೆಂಬ ಶಬ್ದ ನೇರವಾಗಿ ಅಮರಕೋಶದಿಂದ ತೆಗೆದು ಹಾಗೇ ಮಡಿಯಾಗಿ ಕವನದ ಒಂದು ಸಾಲಿನಲ್ಲಿಟ್ಟಂತೆ ತೋರುತ್ತದೆ. ಇವರ 'ನನ್ನ ಜೀವನದಲ್ಲಿ' ಮೊದಲ ಸೊಲ್ಲಿನಲ್ಲೇ ಛಂದೋವೈಪರೀತ್ಯವಿದೆ. ಹೀಗೆ ಹೇಳುತ್ತ ಹೋದರೆ ಕೇವಲ ದೋಷೋದ್ಘಾಟನೆಯೆನಿಸಬಹುದೆಂಬ ಹೆದರಿಕೆಗೆ ಹೆದರಿ ಇವರ 'ಕೋಪವೇತಕೆ ಮಾನಿನಿ' 'ಸುಖವಿಲ್ಲ' ಸಂಪಾದಿ ಕವಿಗಳ ಗುಣ ಸಂಕೀರ್ತನಪರ ಪದ್ಯಗಳು ಮುಂತಾದವು ಹೊಸ ಭಾವಗಳನ್ನು ಸ್ಪಂದಿಸದಿದ್ದರೂ ಸಹೃದಯರೂಪದಲ್ಲಿ ಕಾವ್ಯ ಪರಿಣಾಮವನ್ನುಂಟು ಮಾಡಬಲ್ಲವಾಗಿವೆ ಎಂದು ಹೇಳದಿರಲಾಗದು.

ಭಾಗ್ಯೋದಯ
(ಸರಲ ಹಿಂದಿಯ ಪಾಕ್ಷಿಕ ಪತ್ರ)

ಸಂಪಾದಕರು, ಕೃಷ್ಣಸ್ವಾಮಿ, ಭಾಗ್ಯೋದಯ ಕಾರ್ಯಾಲಯ, ೩೫೭ ಗೋಲಬಾಜಾರ ಜಬಲಪುರ. ವಾರ್ಷಿಕ ಚಂದಾ ೫॥ ರೂ ಬಿಡಿ ಸಂಚಿಕೆಗೆ ೪ ಆಣೆ.

ಇದು ಹೊಸದಾಗಿ ಹೊರಟ ಪತ್ರಿಕೆ. ಈ ಸಂಚಿಕೆಯೇ ಮೊದಲನೆಯದು. ಇದರಲ್ಲಿ ಬೇರೆ ಬೇರೆ ಲೇಖನ ಕವಿತೆಗಳು ಇವೆ. ಇದರಲ್ಲಿ ಬಳಕೆಯಾದ ಹಿಂದೀ ಭಾಷೆಯು ಸುಲಭವಾಗಿದೆ. ನೌಖಾಲಿ ಯಾತ್ರೆಯಲ್ಲಿಯ ಕೆಲವು ವಿಶೇಷ ಘಟನೆಗಳು, ಕಾಶ್ಮೀರ ಎಂಬ ಲೇಖಗಳು ಚಿಕ್ಕವಿದ್ದರೂ ಹೊಸ ಮಾತುಗಳನ್ನೂ ಪರಿಚಯವನ್ನೂ ಹೇಳುತ್ತವೆ. ೨ ರೇಖಾಚಿತ್ರಗಳು ೯ ಭಾವಚಿತ್ರಗಳು ಅಲ್ಲಲ್ಲಿ ಕೊಡಲಾಗಿವೆ. ಈ ಹೊಸ ಪಾಕ್ಷಿಕವನ್ನು ನಾವು ಹೃತ್ಪೂರ್ವಕ ಸ್ವಾಗತಿಸುತ್ತೇವೆ.

ಉಡುಪಿ ಪಂಚಾಂಗಂ

ಪಂಚಾಂಗಕರ್ತರು, ಶ್ರೀ. ಕೃಷ್ಣದಾಸ ಭಟ್ಟ. ಪ್ರಕಾಶಕರು, ರವಿ ಎಸ್ಟ್ರಾಲಾಜಿಕಲ ಬ್ಯುರೊ, ಕೊಯಿಮತ್ತೂರು. ಪುಟಗಳು ೭೦ ಬೆಲೆ ೬ ಆಣೆಗಳು.

ಶಾಲಿವಾಹನ ಶಕೆ ೧೮೭೦ ಸರ್ವಧಾರೀ ಸಂವತ್ಸರದ ಪಂಚಾಂಗವು. ಸೌರಮಾನ ಪದ್ಧತಿಯಿಂದ ಈ ಪಂಚಾಂಗವು ಸಿದ್ಧವಾಗಿದ್ದು ಇದು ಅದರ ವೈಶಿಷ್ಟ್ಯ. ವಾಡಿಕೆಯ ಎಲ್ಲ ಮಹತ್ವದ ವಿಷಯಗಳೂ ಇದರಲ್ಲಿ ನಿರೂಪಿತವಾಗಿವೆ. ಮುದ್ರಣವು ಚೆನ್ನಾಗಿದೆ. ಬೆಲೆಯೂ ತೀರ ಕಡಮೆ. ಸರ್ವರೂ ಸಂಗ್ರಹಿಸಬಹುದಾಗಿದೆ ಈ ಪಂಚಾಂಗವು ಕನ್ನಡ ತಮಿಳು ಎರಡೂ ಭಾಷೆಗಳಲ್ಲಿ ಪ್ರಸಿದ್ಧವಾಗುತ್ತಿದೆ. ತುಂಬ ಖ್ಯಾತಿವೆತ್ತ ಪಂಚಾಂಗಗಳಲ್ಲಿ ಇದೊಂದು. ಇದನ್ನು ನಾವಾರೂ ಆದರದಿಂದ ಬರಮಾಡಿಕೊಳ್ಳುತ್ತೇವೆ.

ಶ್ರೀ ಚಿದಂಬರ ಪಂಚಾಂಗವಿದು

ಪಂಚಾಂಗಕರ್ತರು, ಜ್ಯೋತಿರ್ವಿದ್ವಾನ್, ಪಂ. ರಾಮಶಾಸ್ತ್ರಿ, ಶ್ರೀ ಗಜಾನನ ಪಾಠಶಾಲಾಧ್ಯಾಪಕ. ಸೂಡಿ ತಾ. ರೋಣ ಪ್ರಕಾಶಕರು, ಶ್ರೀ. ಚಿದಂಬರ ಸೇವಾ ಸಮಿತಿ ಧಾರವಾಡ. ಪುಟಗಳು ೭೮ ಬೆಲೆ ೮ ಆಣೆ.

ಇದು ಶಾಲಿವಾಹನ ಶಕೆ ೧೮೭೦ ಸರ್ವಧಾರಿ ಸಂವತ್ಸರದ ಪಂಚಾಂಗ ಅನೇಕ ಉಪಯುಕ್ತ ವಾಡಿಕೆಯ ವಿಷಯಗಳೊಂದಿಗೆ ೧೮೭೦ನೇ ಶಕೆಯಲ್ಲಿ ನೂತನ ಗೃಹಾರಂಭ, ಗೃಹಪ್ರವೇಶ ಮುಹೂರ್ತಗಳು ಇಡೀ ವರ್ಷದ ಪ್ರತಿನಿತ್ಯದ ಲಗ್ನ ಕೋಷ್ಟಕ ಮೊದಲಾದವನ್ನು ಕೊಡಲಾಗಿದೆ. ಮುದ್ರಣ ಅಂದವಾಗಿದೆ. ಬೆಲೆಯೂ ಸುಲಭ. ಈ ಪಂಚಾಂಗಕ್ಕೆ ನಮ್ಮ ಆದರಪೂರ್ವಕ ಸ್ವಾಗತವಿದೆ.

ನವೋದಯ (ಬಾಪೂ ಸಂಚಿಕೆ)

ಸಂಪಾದಕರು, ಮ. ಶ್ರೀಧರಮೂರ್ತಿ ಚಿತ್ರದುರ್ಗ. ಬಿಡಿ ಸಂಚಿಕೆ ಬೆಲೆ ೨ ಆಣೆ.

ಈ ಸಂಚಿಕೆಯ ರಕ್ಷಾಪತ್ರವು ನಾಲ್ಕು ವರ್ಣಗಳಲ್ಲಿ ಮುದ್ರಿತವಾಗಿದೆ. ಗಾಂಧೀಜಿಯ ಆಕರ್ಷಕವಾದ ರೇಖಾ ಚಿತ್ರವಿದೆ. ಮಹಾತ್ಮಾ ಗಾಂಧಿಯವರನ್ನು ಕುರಿತ ಬೇರೆ ಬೇರೆ ವಿಷಯಗಳಿಂದ ಸಂಚಿಕೆ ಕೂಡಿದೆ. ಪತ್ರಿಕೆಯನ್ನು ಆದರಪೂರ್ವಕ ಸ್ವೀಕರಿಸುತ್ತೇವೆ.

ಕಿತ್ತೂರ ಬಂಡಾಯ

ಸಂಪಾದಕರು ? ಪ್ರಕಾಶಕರು, ಶ್ರೀ. ವೀರಭದ್ರಪ್ಪನವರು ಹಾಲಭಾವಿ, ಕಿತ್ತೂರ ಚೆನ್ನಮ್ಮ ರಾಣಿ ಇತಿಹಾಸ ಮಂಡಲ ಕಚೇರಿ, ಬೈಲಹೊಂಗಲ ಪುಟಗಳು ೧೪೦ ಬೆಲೆ ?

ಪುಸ್ತಕದ ರಕ್ಷಾಪತ್ರದ ಮೇಲೆ ಚೆನ್ನಮ್ಮ ರಾಣಿಯ ವೀರಶ್ರೀಯುಕ್ತ ತ್ರಿವರ್ಣ ಚಿತ್ರವಿದೆ. ಇಂಗ್ಲೀಷ ಮತ್ತು ಕನ್ನಡ ಭಾಷೆಗಳೆರಡೂ ಪುಸ್ತಕದಲ್ಲಿ ಬಳಸಲ್ಪಟ್ಟಿವೆ. ವಿವಿಧ ದೃಷ್ಟಿಕೋನವನಿಟ್ಟುಕೊಂಡು ಕಿತ್ತೂರಿನ ಬಗ್ಗೆಯೂ ಚೆನ್ನಮ್ಮರಾಣಿಯ ಬಗ್ಗೆಯೂ ವಿವಿಧ ಲೇಖಕರ್‍ಯ ಬರಹ ಬರೆದಿದ್ದಾರೆ. ಅಲ್ಲಲ್ಲಿ ಉಪಯುಕ್ತ ಚಿತ್ರಗಳನ್ನು ಸೇರಿಸಲಾಗಿದೆಯಲ್ಲದೆ ಹಳೆಯ ಕಾಗದ ಪತ್ರಗಳ ಪ್ರತಿಲಿಪಿಗಳು ಇದ್ದಕ್ಕಿದ್ದಂತೆ ಮುದ್ರಿತವಾಗಿ ಪುಸ್ತಕಕ್ಕೆ ಒಂದು ಅಮೂಲ್ಯ ಗೌರವ ತಂದಿವೆ. ಕಿತ್ತೂರ ಸಂಸ್ಥಾನದ ಇತಿಹಾಸ, ಕಿತ್ತೂರ ಅರಸರು, ಸಂಗೊಳ್ಳಿ ರಾಯನಾಯಕನ ಬಂಡು, ಐತಿಹಾಸಿಕ ಕಾಗದ ಪತ್ರಗಳು, ಮಲ್ಲಸರ್ಜ ದೇಸಾಯರ ಸ್ಥಾನಬದ್ಧತೆ, ಕನ್ನಡನಾಡಿನ ರಾಣಿ ಕಿತ್ತೂರ ಚನ್ನಮ್ಮ, ಶಿವಲಿಂಗ ರುದ್ರಸರ್ಜನ ದತ್ತಕ ಪ್ರಕರಣ, ಕಿತ್ತೂರ ದೇಸಗತಿ ಇವೇ ಮೊದಲಾದ ಬರೆಹಗಳು ತುಂಬ ಐತಿಹಾಸಿಕ ಕುತೂಹಲತೆಯನ್ನು ಹುಟ್ಟಿಸುವಂತಹವಾಗಿವೆ. ಈ ಪುಸ್ತಕವು ಶ್ರೀ. ಮ. ನಿ. ಪ್ರ. ಸ್ವ. ಚೆನ್ನಬಸವಸ್ವಾಮಿ ಗುರುಸಿದ್ಧಸ್ವಾಮಿ ಕಲ್ಮಠ ಸಂಸ್ಥಾನ ಕಿತ್ತೂರ ಇವರಿಗೆ ಮುಡುಪಾಗಿ ಕೊಡಲಾಗಿದೆ. ಈ ಇತಿಹಾಸ ಮಂಡಲದವರ ಪ್ರಯತ್ನವು ತುಂಬ ಪ್ರಶಂಸಾರ್ಹವಾಗಿದೆ.

Inside Princely India or the Hobbies of His Highness

By a Chambermaid Pages, 209.
Parrique and Co. Publishers, Jani Nivas, Hanuman Rd. Vile Parele East, Bombay.

ಅರಮನೆಯ ಓರ್ವ ಪರಿಚಾರಿಕೆಯು, ರಾಜಮಹಲಿನಲ್ಲಿ ರಾಜಲೋಲುಪಜೀವನವನು ಸ್ವಾನುಭವದಿಂದ ಚಿತ್ರಿಸಿದ್ದಾಗಿ ಹೇಳಿದೆ. ಪುಸ್ತಕದಲ್ಲಿ ಬರುವ ಹೆಸರುಗಳು ಕಾಲ್ಪನಿಕವಾಗಿದ್ದರೂ ಹೇಳುವ ಮಾತೆಲ್ಲ ಕಂಡಂತಹವು ಮತ್ತು ಅನುಭವಿಸಿದಂತಹವು ಎಂದು ಬರೆಹಗಾರರ ಆಶ್ವಾಸನವಿದೆ. ಅರಸರ ಗೌರವ ಗಾಂಭೀರ್ಯದ ತೆರೆಯ ಮರೆಗೆ ಎಂತಹ ಭೀಭತ್ಸ ಚಿತ್ರಗಳಿವೆ ಎಂಬದನ್ನು ಈ ಪುಸ್ತಕದಿಂದ ಅರಿಯಬಹುದಾಗಿದೆ. ಅಭಿಜಾತ ಅಭಿರುಚಿಗೆ ಓದುವಾಗ ಓಕರಿಕೆ ಬಂದರೂ ರಾಜರ ನಿತ್ಯ ಸತ್ಯ ಜೀವನ ಹೇಗಿದೆ ಎಂಬುದನ್ನು ಅರಿವ ದೃಷ್ಟಿಯಿಂದ ಪುಸ್ತಕ ತುಂಬ ಪ್ರಯೋಜನಕಾರಿಯಾಗಿದೆ ಎನ್ನಬೇಕು.

ಆದ ಘಟನೆಗಳನ್ನೆಲ್ಲ ಒಳ್ಳೇ ಸುಸಂಬದ್ಧವಾದ ಕಥೆಯಲ್ಲಿ ಹೆಣೆಯಲಾಗಿದೆ. ಕಥೆಯ ಹೆಣಿಗೆಗಾಗಿ ಎಷ್ಟೋ ಸಲ ಮಂಡಿಸಲ್ಪಟ್ಟ ವಿಷಯ ಕಾಲ್ಪನಿಕವಾಗಿರಬಹುದಾದರೂ ಅಸ್ವಾಭಾವಿಕವೆಂದು ತೋರುವದಿಲ್ಲ. ಇಂಗ್ಲಿಷ ಭಾಷೆ ಸುಲಭವಿದ್ದು ಶೈಲಿ ಮೋಹಕವಾಗಿದೆ.

Basaveswar High School Miscellany (1947) ಪುಟ ೯೦.

ಪ್ರಕಾಶಕರು, ಶ್ರೀ. ಜಿ. ಎಚ್. ಚನ್ನಪ್ಪ, ಬಸವೇಶ್ವರ ಹಾಯಸ್ಕೂಲ ಬಾಗಲಕೋಟೆ

ಇದು ಬಾಗಲಕೋಟೆಯ ಬಸವೇಶ್ವರ ಹಾಯಸ್ಕೂಲಿನಿಂದ ಹೊರಟಿದೆ. ಮುದ್ರಣವು ಅಂದವಾಗಿದ್ದು ಅಲ್ಲಲ್ಲಿ ಸಂಸ್ಥೆಯ ಚಟುವಟಿಕೆಗಳಿಗೆ ಸಂಬಂಧಪಟ್ಟ ಚಿತ್ರಗಳನ್ನು ಹಾಕಲಾಗಿದೆ. ಇದರಲ್ಲಿ ಇಂಗ್ಲೀಷು, ಕನ್ನಡ ಮತ್ತು ಹಿಂದೀ ಹೀಗೆ ಮೂರು ವಿಭಾಗಗಳಿದ್ದು ವಿದ್ಯಾರ್ಥಿಗಳೇ ಹೆಚ್ಚಾಗಿ ಈ ಮೂರು ವಿಭಾಗಗಳಲ್ಲಿ ಲೇಖನ ಕವಿತೆ ಮೊದಲಾದವನ್ನು ಬರೆದಿದ್ದಾರೆ. ಇಂಗ್ಲೀಷ ವಿಭಾಗಕ್ಕೆ ೩೬ ಪುಟಗಳನ್ನೂ ಕನ್ನಡ ವಿಭಾಗಕ್ಕೆ ೩೨ ಪುಟಗಳನ್ನೂ ಹಿಂದೀ ವಿಭಾಗಕ್ಕೆ ೮ ಪುಟಗಳನ್ನೂ ಕೊಟ್ಟಿದ್ದು ೧೧ ಭಾವಚಿತ್ರಗಳಿವೆ. ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಇಂತಹ ಪತ್ರಿಕೆಗಳು ಶಾಲಾ ಸಂಸ್ಥೆಗಳಿಂದ ಹೊರಡುವದು ಅತ್ಯವಶ್ಯ. ಆದರೆ ಅಪಕ್ವ ಕೃತಿಯನ್ನು ಮುದ್ರಿಸುವ ಮೋಹವನ್ನು ವಿದ್ಯಾರ್ಥಿಗಳು ತೊರೆಯಬೇಕು. ಹುಡುಗರ ಬರೆಹಗಳನ್ನು ಶಿಕ್ಷಕರು ಮೊದಲು ತಿದ್ದಬೇಕು.

ವಿವಿಧ ಪ್ರಪಂಚ

ಚೀನೀ ಭಾಷೆಯ ಮೋಜು!

ಚೀನವು ನಮ್ಮ ನೆರೆಯ ನಾಡಾದರೂ ಇಂಗ್ಲಂಡು, ಅಮೇರಿಕ, ಜರ್ಮನಿ ಇತ್ಯಾದಿ ಪಾಶ್ಚಾತ್ಯ ರಾಷ್ಟ್ರಗಳ ವಿಷಯವಾಗಿ ನಾವು ತಿಳಿದ ದ್ದಕ್ಕಿಂತ ಚೀನದ ವಿಷಯವಾಗಿ ತಿಳಿದುಕೊಂಡದ್ದು ಬಹಳ ಕಡಿಮೆ. ಪ್ರಾಚೀನ ಹಿಂದುಸ್ಥಾನಕ್ಕೆ ಚೀನಕ್ಕಿಂತ ಹತ್ತಿರದ ಗೆಳೆಯನಿದ್ದಿಲ್ಲ. ಏಶಿಯಾದ ಭ್ರಾತೃರಾಷ್ಟ್ರಗಳು ಪರಸ್ಪರರನ್ನು ಅರಿತುಕೊಳ್ಳುವದು ಬಹಳ ಅಗತ್ಯ. ಅದುದರಿಂದ ಭಾರತ ಮತ್ತು ಚೀನಗಳ ಸ್ನೇಹದ ಪುನರುಜ್ಜೀವನಕ್ಕೆ ಪರಸ್ಪರ ಜ್ಞಾನವು ಅತ್ಯವಶ್ಯಕ.

ಶ್ರೀ ಪಾರ್ವತೀ ಮೆನನ್ನರು ಚೀನಕ್ಕೆ ಹೋದಾಗ ಚೀನೀ ಭಾಷೆಯನ್ನು ಅಭ್ಯಸಿಸಲಾರಂಭಿಸಿ ಅದರ ವೈಶಿಷ್ಟ್ಯಗಳನ್ನು ಅರಿತರು. ಅವರ ಅನುಭವದ ಪ್ರಕಾರ ಚೀನೀ ಭಾಷೆಯನ್ನು ಕಲಿಯಹೋಗುವವನು ಮೊದಲು ಸಂಗೀತಗಾರನಾಗಿರಬೇಕಂತೆ! ಏಕೆಂದರೆ, ಅವರ ಒಂದು ಪದಕ್ಕೆ ನಾಲ್ಕು ಸ್ವರಗಳಿರುತ್ತವೆ; ನಾಲ್ಕು ಸ್ವರಗಳಲ್ಲಿ ಆ ಶಬ್ದ ನಾಲ್ಕು ಅರ್ಥಗಳನ್ನು ಕೊಡುತ್ತದೆ. ಉದಾತ್ತಾದಿ ಸ್ವರಗಳಿರುವ ವೈದಿಕ ಸಮಾಸಗಳು ಸ್ವರಭೇದದಿಂದ ವರ್ಗಭೇದ ಅರ್ಥಭೇದಗಳನ್ನು ಹೊಂದುವಂತೆ ಏಕಾಕ್ಷರ (Monosyllabic) ಗಳಾದ ಚೀನೀ ಪದಗಳು ಸ್ಥಾನ ಮತ್ತು ಸ್ವರ ವೈಲಕ್ಷಣ್ಯದಿಂದ ಅರ್ಥಾಂತರ ಹೊಂದುತ್ತವೆ.

ಮೊದಲನೆಯದು ಉದಾತ್ತ (Acute, a high-lvel tone), ಎರಡನೆಯದು ಅನುದಾತ್ತ (grave, a down-ward tone), ಮೂರನೆಯದು ಸ್ವರಿತ (Circumflex, a quick upward tone) ಮತ್ತು ನಾಲ್ಕನೆಯದು ಪ್ರಚಯ (Mixed, long-drawn-out upward tone), ಎಂದು ಸ್ವರಗಳ ಸ್ವರೂಪವನ್ನು ಸಾದೃಶ್ಯ ಸಂಬಂಧದಿಂದ ಪರಿಚಯ ಮಾಡಿಕೊಡಬಹುದು. 'ಪಿಂಗ್' ಎಂಬ ಪದಕ್ಕೆ ನಾಲ್ಕು ಸ್ವರಗಳಲ್ಲಿ ಸೈನಿಕ, ರೋಗ, ದೋಸೆ ಮತ್ತು ಮಂಜಿನ ಗಡ್ಡೆ ಎಂಬ ನಾಲ್ಕು ಅರ್ಥಗಳುಂಟು. ಅಮ್ಮ ಎನ್ನುವದಕ್ಕೂ ಕುದುರೆ ಎನ್ನುವದಕ್ಕೂ ಒಂದೇ ಶಬ್ದ, ಹೊಸಬನಿಗೆ ಸ್ವರಭೇದಾಭ್ಯಾಸ ಬಹಳ ಕಠಿಣವಾಗಿ ಪರಿಣಮಿಸುತ್ತದೆ. ಚೀನೀಯರಾದರೋ ನೀರು ಕುಡಿದಂತೆ ಸರಸರ ಮಾತನಾಡಿ ಬಿಡುತ್ತಾರೆ.

ಭಾಷೆಗಳಲ್ಲಿ ಸಾಮಾನ್ಯವಾಗಿ ಎರಡು ವಿಧ: ಪ್ರತ್ಯಯಾದಿಗಳುಳ್ಳವು (Inflexional) ಮತ್ತು ಪ್ರತ್ಯಯ ರಹಿತವುಳ್ಳವು (Agglutinative) ಎಂದು. ಚೀನೀ ಭಾಷೆ ಎರಡನೆಯದರಂತಿದೆ. ಒಂದೊಂದು ಅಕ್ಷರವೆಂದರೆ ಒಂದೊಂದು ಶಬ್ದ ಪದ. ಅಂಥ ಪದಗಳು ಸುಮಾರು ೮೦ ಸಾವಿರ ಇವೆ. ಅಷ್ಟೂ ಶಬ್ದಗಳ ಪರಿಚಯ ಉಳ್ಳವರು ಯಾರೂ ಇಲ್ಲ. [ಚಿಯಾಂಗ್ ಕೈಶೇಕರಿಗೆ ೪೦ ಸಾವಿರ ಚೀನೀ ಪದಗಳ ಪರಿಚಯವಿದೆಯಂತೆ. ವೃತ್ತಪತ್ರಾದಿಗಳಲ್ಲಿ ಸಾಮಾನ್ಯವಾಗಿ ೧೦ ಸಾವಿರ ಅಕ್ಷರಪದಗಳಿರುವವು. ಹೆಚ್ಚೆಂದರೆ ನಾನೂರು ಪದಗಳನ್ನು ಕಲಿತರೆ ಚೀನೀ ಭಾಷೆಯಲ್ಲಿ ವಾಕ್ವ್ಯವಹಾರ ಮಾಡಬಹುದು. ಪ್ರತಿಯೊಂದು ಏಕಾಕ್ಷರಪದವೂ ಗೆರೆಗಳ ಸಂಯೋಗದಿಂದ ಚಿತ್ರಿಸಲ್ಪಡುತ್ತದೆ. ಅದುದರಿಂದಲೆ ಚೀನೀ ಭಾಷೆ ಮೊದಲು ಚಿತ್ರಾರ್ಪಿತ (Pictorial) ವಾಗಿತ್ತೆಂದು ಊಹಿಸಲಾಗಿದೆ. ▭ ಹೀಗೆ ಬರೆದರೆ ಬಾಯಿ. ಉಣ್ಣುವದು ತಿನ್ನುವದು ಮುಂತಾದ ಯಾವ ಶಬ್ದವನ್ನು ಬರೆಯುವುದಾದರೂ ಮೇಲಿನ ಚಿತ್ರಕ್ಕೆ ಸುತ್ತಲೂ ವಿವಿಧ ಕೊಂಬು ಇಳಿ ಏತಗಳನ್ನು ಅಗತ್ಯವಿದ್ದಂತೆ ಕೊಡುತ್ತ ಹೋಗುವದು. /| ಹೀಗೆ ಎರಡು ಕಾಲುಗಳಿಂದ ಮನುಷ್ಯ ಎಂದು ಬರೆಯುವದು. /|| ಇದು ನದಿ. ಬರೆವಣಿಗೆ ಬಲದಿಂದ ಎಡಕ್ಕೆ ಮತ್ತು ಮೇಲಿಂದ ಕೆಳಗೆ.

ಚೀನೀ ವ್ಯಾಕರಣ ಬಹಳ ಸುಲಭ. ಅದರಲ್ಲಿ ಇರುವುದು ಒಂದೇ ಒಂದು ನಿಯಮ!

A sentence should carry meaning and be well-balanced and orderly— ವಾಕ್ಯವೆಂದರೆ ಅರ್ಥವತ್ತಾಗಿಯೂ ಸಮತೂಕವುಳ್ಳದ್ದಾಗಿಯೂ ಕ್ರಮಬದ್ಧವಾದುದಾಗಿಯೂ ಇರಬೇಕು ಎಂಬುದೇ ಆ ನಿಯಮ. ಕ್ರಿಯಾಪದಕ್ಕೆ ಲ ಇಲ್ಲವೆ ಲ್ಯು ಹಚ್ಚಿಬಿಟ್ಟರೆ ಅದಕ್ಕೆ ಭೂತರೂಪ ಬಂದುಬಿಡುತ್ತದೆ! ಚೀನಿಯೊಂದೇ ಭಾಷೆಯಾದರೂ ಅದಕ್ಕೆ ಹಲವಾರು ಉಪಭಾಷೆ ಇಲ್ಲವೆ ವಿಭಾಷೆಗಳಿವೆ. (Dialects). ಪೀಕಿಂಗಿನ ಚೀನಿಯೇ ಅಲ್ಲಿಯ ರಾಷ್ಟ್ರಭಾಷೆ. ಹೇಳಲು ಸಂಗೀತ ಜ್ಞಾನ ಬೇಕಾಗಿರುವಂತೆ ಚೀನಿಯನ್ನು ಬರೆಯಲು ಚಿತ್ರಕಲಾ ಜ್ಞಾನವಿರಬೇಕು. ಅದರ ಚೆಲುವೆ ಚೆಲುವು! ಎಷ್ಟೋ ಕುಟುಂಬಗಳು ಚಿತ್ರಗಳನ್ನಿಟ್ಟಂತೆ ಪ್ರಖ್ಯಾತರ ಹಸ್ತಾಕ್ಷರಗಳನ್ನು ಕನ್ನಡಿಕಟ್ಟು ಹಾಕಿಸಿ ಗೋಡೆಗಳಿಗೆ ತೂಗು ಹಾಕಿರುತ್ತಾರೆ!

ಚೀನೀ ಬರಹಗಾರಿಕೆ ನಮ್ಮ ವಿದ್ಯಾರ್ಥಿಗಳಿಗೊಂದು ಕಲಾದರ್ಶವಾಗಿದೆ; ಕೈಬರಹದ ತಿದ್ದುಪಾಟಿಗೆ ಸ್ಫೂರ್ತಿ ಕೊಡತಕ್ಕದ್ದಾಗಿದೆ. ಚೀನೀಯರ ಕಲಾದೃಷ್ಟಿ ಹೆಸ್ಕ್ರಿಕ್ಕಳ ಪಾಠವನ್ನು ಉಕ್ಕಿನ ಬೂಟುಗಳಲ್ಲಿಟ್ಟು ಚಿಕ್ಕದು ಮಾಡುವವರೆಗೆ ಹೋಗಿದೆಯೆಂಬುದನ್ನು ತಿಳಿದವರಿಗೆ ಅವರು ಕೈಬರಹದ ಬಗ್ಗೆ ಅಷ್ಟು ಲಕ್ಷ್ಯಕೊಡುವದರಲ್ಲಿ ಆಶ್ಚರ್ಯ ಕಾಣದು. ಇಂದು ಸ್ವತಂತ್ರ ಭಾರತದ ಕಲಾಭ್ಯಾಸಿಗಳಿಗೆ, ಭಾಷಾ ವಿದ್ಯಾರ್ಥಿಗಳಿಗೆ ಧರ್ಮಜಿಜ್ಞಾಸುಗಳಿಗೆ ಚೀನವೊಂದು ಕಲ್ಪವೃಕ್ಷವೆಂದರೆ ಅತಿಶಯೋಕ್ತಿಯಾಗಲಾರದು.

ಚೀನೀ ವೃತ್ತಪತ್ರಿಕೆಗಳು

ಏಶಿಯಾಖಂಡದಲ್ಲಿ ಶಾಂತಿ ಪಸಾದಕೂ ಜಗನ್ಮಾನ್ಯ ಕಾರ್ಯ ನಡೆಯಬೇಕಿದ್ದರೆ ಅದು ಚೀನ ಮತ್ತು ಭಾರತಗಳಲ್ಲಿಯೇ. ಎರಡೂ ಅನಾದಿಯಿಂದ ತಮ್ಮದೇ ಆದ ಸಂಸ್ಕೃತಿ ಪರಂಪರೆಗಳನ್ನು ಕಾಯ್ದುಕೊಂಡು ಬಂದ ದೇಶಗಳು; ಹೊಸಕಾಲದ ಹೊಸ ವ್ಯವಸ್ಥೆಯನ್ನಳವಡಿಸಿಕೊಳ್ಳಲು ಹೆಣಗುತ್ತಿರುವ ನಾಡುಗಳು. ಇಂದು ಚೀನವು ಅಂತರ್ಯುದ್ಧದಲ್ಲಿ ನರಳುತ್ತಿದೆ. ಅದರ ಒಂದು ಕೊನೆ ಮುಟ್ಟ ಬೇಗನೆ ದೇಶದಲ್ಲಿ ಶಾಂತಿ ಉದಯಿಸದಿರದು.

ಆಧುನಿಕ ಪ್ರಪಂಚದ ಸಾರ್ವಜನಿಕ ಜೀವನದಲ್ಲಿ ರಾಜಕೀಯ ಮತ್ತು ಸಾಮಾಜಿಕ ಮಿಲನಗಳು ಜನರಲ್ಲಿ ಹೆಚ್ಚುತ್ತಿರುವದರಿಂದ ಪರಸ್ಪರ ವಿಚಾರವಿನಿಮಯ, ವೃತ್ತಾಂತ ಜ್ಞಾನ ಇವುಗಳನ್ನು ಸಾಧಿಸಲು ಅವರು ವೃತ್ತಪತ್ರಿಕೆಗಳಿಗೆ ಹೆಚ್ಚಾಗಿ ಶರಣುಹೊಗುತ್ತಾರೆ. ಈ ಕಾರಣದಿಂದ ಆಧುನಿಕ ನಾಗರಿಕ ಜೀವನದಲ್ಲಿ ಪತ್ರಿಕೆಗಳು ಅಪರಿಹಾರ್ಯವಾದ ಮಹತ್ವದ ಸ್ಥಾನವನ್ನು ಪಡೆದಿವೆ.

ಒಂದು ದೃಷ್ಟಿಯಿಂದ ಚೀನವು ಭಾರತಕ್ಕಿಂತಲೂ ಹಿಂದುಳಿದ ದೇಶವೆನ್ನಬೇಕು. ಏಕೆಂದರೆ, ಅಲ್ಲಿ ಈಗಲೂ ಮಾರ್ಗ ಮತ್ತು ವಾಹನ ಸೌಕರ್ಯಗಳು ಸಾಕಷ್ಟಿಲ್ಲವಾಗಿ ದೇಶದ ಎಲ್ಲ ಮುಖ್ಯ ಸ್ಥಳಗಳಲ್ಲಿ ಯಾವ ಒಂದು ದಿನ ಪತ್ರಿಕೆಯನ್ನು ಆ ದಿನವೇ ಕೊಳ್ಳಲಾಗುವದಿಲ್ಲ. ಮಹಾಯುದ್ಧದ ಪೂರ್ವದಲ್ಲಿ ಟೀಂಟ್ಸೀನಿನ ವೃತ್ತಪತ್ರಿಕೆಗಳು ನ್ಯಾನ್‌ಕಿಂಗ್ ಮತ್ತು ಶಾಂಗಾಯಿಂಗಳಿಗೆ ಹೋಗಲು ೩ ದಿನ ಸಾಕಿತ್ತು; ಈಗ ಸುಮಾರು ಒಂದು ವಾರ ಬೇಕಾಗುತ್ತದೆ.

ಚೀನದಲ್ಲಿ ಸುಮಾರು ೧೧ ಪ್ರಮುಖ ವೃತ್ತಪತ್ರಿಕೆಗಳಿವೆ. ಮೊದಲನೆಯದು "ಕೇಂದ್ರ ದಿನವೃತ್ತ" (Central Daily News) ಇದು ಕೋಮಿಂಟಾಂಗ್ ಸರಕಾರದ ಮುಖಪತ್ರ. ಸರಕಾರಕ್ಕಿಂತ ಅದು ಪಕ್ಷವನ್ನೇ ಹೆಚ್ಚಾಗಿ ಪ್ರತಿನಿಧಿಸುತ್ತದೆ. ೨ ನೆಯದು "ಸಿನ್‌ಹ್ವ ನಿತ್ಯವೃತ್ತ" ಇದು ಕಮ್ಯುನಿಸ್ಟ ಪಕ್ಷದ ಮುಖ. ಕೋಮಿಂಟಾಂಗಿಗೂ ಈ ಪತ್ರಿಕೆಗೂ ಎಣ್ಣೆಸೀಗೆಯ ಸ್ನೇಹ. ಇದರಲ್ಲಿ ಸುದ್ದಿಗಿಂತ ಪ್ರಚಾರಾತ್ಮಕ ಪ್ರಬಂಧಗಳೇ ಬಹಳ. "ತಾಕುಂಗ್ ಪಾವೋ" ಮೂರನೆಯದು. ಇದಕ್ಕೆ ಚೀನದ ಟೈಮ್ಸ್ ಎನ್ನುತ್ತಾರೆ. ಇದು ಸರಕಾರೀ ಪಕ್ಷವಹಿಸಿದರೂ ಸರಕಾರದ ಕೃತಿಗಳ ಮೇಲೆ ರಚನಾತ್ಮಕ ವಿಮರ್ಶೆಯನ್ನು ಮಾಡುತ್ತದೆ. ಇದರ ಧೋರಣ ಇದ್ದುದರಲ್ಲಿ ಉದಾರ; ಹೆಸರಿನಂತೆ (ತಾಕುಂಗ್ ಪಾವೋ= ನಿಷ್ಪಕ್ಷಪಾತ) ಇದು ಕೆಲ ಮಟ್ಟಿಗೆ ನಿಷ್ಪಕ್ಷಪಾತವಾಗಿ ನಡೆದುಕೊಳ್ಳುತ್ತದೆ. ಇದರಂಥದೇ ಆದ "ಜಾಗತಿಕ ದಿನ ಪತ್ರಿಕೆ" ನಾಲ್ಕನೆಯದು. ಶ್ರೀ ಚೆಂಗ್ ಚಿವೋ ಎಂಬವರು ಇದರ ಪ್ರಕಾಶಕರು. ಇವರು ಚೀನೀ ವೃತ್ತಪತ್ರ ವ್ಯವಸಾಯದಲ್ಲಿ ಬಹಳ ಹೆಸರಾದವರು. ಈ ಪತ್ರಿಕೆ ಬಹಳ ಜನಪ್ರಿಯವಾಗಿದೆಯೆಂದು ಶ್ರೀ ಜೂ ಅನ್‌ಪಿಂಗರ ಬರಹದಿಂದ ತಿಳಿಯಬರುತ್ತದೆ. "ಶಿಹ್ ಶಿಹ್ ಸಿನ್ ಪಾವೋ" ಎಂಬುದು ಅರ್ಧ-ಸರಕಾರೀ ವೃತ್ತಪತ್ರವಾಗಿತ್ತು. "ಸಾವೋ ತಾಂಗ್ ಪಾವೋ" ಎಂಬುದು ಮಿಲಿಟರಿ ಪತ್ರಿಕೆ. ಇದರಲ್ಲಿ ಬರುವದೆಲ್ಲ ಸೈನಿಕರಿಗೆ ಸಂಬಂಧಿಸಿದ ವಿಷಯಗಳು. "ಕುವೋ ಮಿನ್ ಕುಂಗ್ ಪಾವೋ" "ಸಿನ್‌ಶುಪಾವೋ" ಮತ್ತು "ವಾಣಿಜ್ಯ ದಿನ ಪತ್ರಿಕೆ" ಇವು ಚುಂಕಿಂಗಿನ ಸ್ಥಳೀಯ ಪತ್ರಿಕೆಗಳು. ಇವುಗಳಲ್ಲಿ ಮೂರನೆಯದು ವ್ಯಾಪಾರ ಪ್ರಪಂಚಕ್ಕೆ ಸೇರಿದ್ದು. "ಸಾಮಾಜಿಕ ಯೋಗಕ್ಷೇಮ"ವು ರೋಮನ್ ಕ್ಯಾಥೋಲಿಕರದು. ಇದು ಕೋಮಿಂಟಾಂಗಿಗೆ ಬೆಂಬಲಕೊಡುತ್ತಿದೆ.

ಎಲ್ಲಕ್ಕಿಂತ ಹೊಸ ಹುಟ್ಟಿನದು "ಸಿನ್ ಮಿನ್ ಪಾವೋ." ಇವಲ್ಲದೆ ನಾಲ್ಕು ಸ್ಥಳೀಯ ಉಪಭಾಷೆಗಳ ಪತ್ರಿಕೆಗಳೂ "National Herald" ಮತ್ತು "Chunking Reporter" ಎಂಬೆರಡು ಇಂಗ್ಲಿಷ್ ಪತ್ರಿಕೆಗಳೂ ಇವೆ.

ಚೀನೀ ವೃತ್ತಪತ್ರಿಕೆಗಳಲ್ಲಿ ಕಾಣುವ ಸುದ್ದಿಯಲ್ಲಿ ವೈವಿಧ್ಯವಿಲ್ಲ. ಇದಕ್ಕೆ ಕಾರಣವೆಂದರೆ, ಅಲ್ಲಿ ಇಡೀ ದೇಶಕ್ಕೆ ಒಂದೇ ಒಂದು "ಕೇಂದ್ರ ಸುದ್ದಿ ಸಂಸ್ಥೆ" ಯಿರುವದು. ಎಲ್ಲ ಪತ್ರಿಕೆಗಳಿಗೂ ಅದೊಂದೇ ಸುದ್ದಿಯ ಆಕರ. ಅದುದರಿಂದ ಯಾವ ಪತ್ರಿಕೆ ನೋಡಿದರೂ ಒಂದೇ ತರಹದ ಸುದ್ದಿಯನ್ನು ಕಾಣಬೇಕಾಗುತ್ತದೆ; ಬೇಸರ ಬಂದುಬಿಡುತ್ತದೆ.

ಚೀನದಲ್ಲಿಯೂ ಪತ್ರಿಕಾ ವ್ಯವಸಾಯಿಗಳಿಗೆ ತಕ್ಕ ಸಂಬಳ ಸಿಗುವದಿಲ್ಲವಂತೆ. ಅವರು 'ಹರಹರ' ಎಂದು ಕಾಲಹಾಕಬೇಕಾಗಿದೆ. ಅಲ್ಲದೆ ಯುದ್ಧ ಕಾಲದಲ್ಲಂತೂ ಸುದ್ದಿ ಸಂಗ್ರಹಿಸುವದರಲ್ಲಿ ಕೆಲವೊಮ್ಮೆ ಅವರು ಪ್ರಾಣಕ್ಕೆ ಎರವಾಗಬೇಕಾಗುತ್ತಿತ್ತಂತೆ. ಅವರಿಗೂ ಮನೆಸಿಗುವದಿಲ್ಲವೆಂಬ ಚಿಂತೆ ಬಿಟ್ಟಿಲ್ಲವೆಂದು ತಿಳಿಯುತ್ತದೆ. ಪಾಪ, ದುಡಿದದ್ದಿದ್ದರೂ ಪಡೆದದ್ದಿರಬೇಕಲ್ಲ! ರಾಮೇಶ್ವರಕ್ಕೆ ಹೋದರೂ ಶನೀಶ್ವರನು ಬಿಡುವನೆ?

ಕರ್ನಾಟಕದಲ್ಲೊಂದು ಸರಕಾರದ ಭಾಷೆ

ಒಂದು ಮನೆಗೊಬ್ಬ ಯಜಮಾನನಿದ್ದರೆ ಅವನ ಮಾತಿನ ಗತ್ತು ಗಾಂಭೀರ್ಯಗಳಿಗೂ ಉಳಿದವರ ಮಾತಿನ ಶೈಲಿಸ್ವರಗಳಿಗೂ ಸ್ಪಷ್ಟವಾದ ಅಂತರ ಕಂಡು ಬರುವಂತೆ ಕರ್ನಾಟಕವೆಂಬೊಂದು ಮರಿನಾಡಿನಲ್ಲಿ ಇರುವ ಒಂದು ಸರಕಾರ ಮಾತೃಭಾಷೆಯಲ್ಲಿ ಹೆಣ್ಣನವಿದೆಯೆಂದು ಅದನ್ನು ಪಿತೃಭಾಷೆಯಾಗಿ ಪರಿವರ್ತಿಸಿದ ಬಗೆ ಹೀಗಿದೆ.

" ನಂಬರು ಜಿ. 7066—ಪೋಲೀಸ್ 220-47-2. ....ಕಿಂಡ್ಲಿ, ತಾರೀಖು 20ನೆಯ ಫೆಬ್ರುವರಿ 1948.

"ರೆಡ್ ಹರ್ಟ್ ವಾಲಂಟಿಯರ್ಸ್" ಎಂಬ ಹೆಸರಿನ ಸಂಸ್ಥೆಯೂ ಮತ್ತು ಅದರ ಎಲ್ಲ ಶಾಖೆಗಳೂ ......ಕೂರಿನ ಸಿವಿಲ್ ಸ್ಟೇಷನ್ ಪ್ರದೇಶದಲ್ಲಿ ಕಾನೂನಿಗೆ ವಿರುದ್ಧವಾದ ಅಕ್ರಮಸಂಘವೆಂದು 1908 ನೆಯ ಇಸವಿಯ XIV ನೆಯ ನಂಬರಿನ ಅಕ್ಟಾದ ಕ್ರಿಮಿನಲ್ ಕಾನೂನಿನ ತಿದ್ದುಪಡಿಗೆ ಸಂಬಂಧಪಟ್ಟ ಆಕ್ಟಿನ 16 ನೆಯ ಪ್ರಕರಣದಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸಿ......ರವರ ಸರ್ಕಾರದವರು ಈ ಮೂಲಕ ಅಪ್ಪಣೆಮಾಡಿರುತ್ತಾರೆ.

" ಹುಕುಂ ಬಮೋಜೀಬ್, (ಸಹಿ)......... ಸರ್ಕಾರದ ಚೀಫ್ ಸೆಕ್ರೆಟರಿ."

ಇದಕ್ಕೆ 'ಬಸ್ತಿ ಹಾರ್ನಾವೆ.' ಎಂದು ಸರಕಾರದ ಭಾಷೆಯಲ್ಲಿ ಹೇಳಲಾಗುತ್ತದೆ. ಇದನ್ನವಲೋಕಿಸಿದ ಪಂಡಿತ ಗುಂಡೋದರರವರು ಇದು ಹಳ-ನಡು-ಹೊಸ-ಗನ್ನಡರೀತಿಗಳಿಂದ ತೀರಭಿನ್ನವಿದ್ದು ಸಿರಿಗನ್ನಡವೆಂದು ಸರಕಾರ ತಿಳಿದ ತುರಿಗನ್ನಡದ ಜಾತಿಗೆ ಸೇರಿದ್ದೆಂದು ಅಭಿಪ್ರಾಯಪಡುತ್ತಾರೆ. 'ಯಥಾರಾಜಾ ತಥಾಪ್ರಜಾ:' ಎಂಬಂತೆ ಆ ಸರಕಾರದ ಪ್ರಜೆಗಳಾದರೂ ಇದಕ್ಕಿಂತ ಬಹಳ ಭಿನ್ನವಾದ ಭಾಷೆಯನ್ನು ಬಳಸುವದಿಲ್ಲ. ಅವರು ತಮ್ಮ ಭಾಷೆಯನ್ನು "ಪ್ಯೂರ್ ಕನ್ನಡ" ಎನ್ನುತ್ತಾರೆ.

ಇಂತಹ ನುಡಿಯಲ್ಲಿ ಕಾವ್ಯ ಬರೆದ ಒಬ್ಬ ಕವಿಯೂ ಆ ನಾಡಿನಲ್ಲಿ ಸಿಗುತ್ತಾನೆ. ಅವನ ಹೆಸರು ರತ್ನ. ಒಬ್ಬ ಪ್ರಹಸನಕಾರನಿದ್ದಾನೆ; ಅವನ ನಾಮಧೇಯ ಲಾಸಂ ಎಂದು. ಕವಿರತ್ನನ ಮಾತಿನಲ್ಲೇ ಹೇಳಬೇಕಾದರೆ ಮೇಲಿನ ಭಾಷಾರತ್ನವು 'ಚುರು ಚುರು ಗುಟ್ಟಿಸುವ ತುರುಚುಗಬ್ಬ'ಗಳನ್ನು ಬರೆಯಲು ಬಹಳ ಯೋಗ್ಯವಾಗಿದೆ. ಲಾಸಂರ ಮಾತಿನಲ್ಲಿ ವರ್ಣಿಸಬೇಕಾದರೆ ಅದೊಂದು ಜ್ಞಾನವಿಲ್ಲದ ಪದ(Jnana Villa) ಶೈಲಿಯ ಬರಹ ಎನ್ನಬೇಕು! ಈ ಸರಕಾರ ಸಾಮಾನ್ಯ ಸರಕಾರವಲ್ಲ. ಇದರ ಕೆಲಸಗಾರರಲ್ಲಿ ಸಾಹಿತ್ಯಲೋಕದ ಚಕ್ರವರ್ತಿಗಳೆನಿಸುವವರು ರಾರಾಜಿಸುತ್ತಾರೆ! ಎಂದ ಮೇಲೆ ನೋಳಿನವು ಒಳ್ಳೆಯ ಆದರ್ಶವೆಂದು ಜನರು ತಿಳಿದರೆ

ಜಪಾನಿಗಳ ವಿಚಿತ್ರ ನೀತಿ

ಟಿ. ಶಿಂಜಿಪ ಸ್ವಾಮಿ ಎಂದರೆ ಜಪಾನಿಗಳಿಗೆ ಜೀವ ಕ್ಕೆ ಮಿಗಿಲು. ಹಾಗೇ Hardening, one self- ದೇಹಬುದ್ಧಿಗಳ ದೃಢೀಕರಣ ಎಂದರೂ ಅವರಿಗೆ ತುಂಬ ಇಷ್ಟ. ಅದರಲ್ಲಿ ತರಬೇತುಹೊಂದಲು ಅವರು ಚಿಕ್ಕಂದಿನಿಂದ ಬಹಳ ಪ್ರಯತ್ನಪಡುವರು. ಮುಲಗಂಪ್ಯರಲ್ಲಿ ಶಿಕ್ಷಣ ಪಡೆದ ಆ ಜನಗಳು ಎಲ್ಲೆಂದರಲ್ಲಿ (ಕುರಡುಂದಿರ ಕದಂಬಾಲ ನಿವಾಸ (ಶಯ್ಯಾಭೂತಲಮುಕಂಬನ) ಸುಖವಾಗಿ ನಿದ್ರಿಸಬಲ್ಲವರಿರುತ್ತಾರೆ. ನಿದ್ರೆಯೆಂದರೆ ಅವರಿಗೆ ಲಕ್ಷ್ಯವೆ ಇಲ್ಲ. ಎಷ್ಟು ದಿನ ಬೇಕಾದರೂ ನಿದ್ರೆಯಿರದೆ ಇರಬಲ್ಲರು, ೫—೧೦ ನಿಮಿಷಗಳ ನಿದ್ರೆಯಿಂದಲೇ ತೃಪ್ತರಾಗಬಲ್ಲರು. ಇದೊಂದು ಯೋಗಸಿದ್ಧಿಯೋ ಎನ್ನಬೇಕು.

ಯುದ್ಧದಲ್ಲಿ ಶಿಸ್ತಿಗಾಗಿ ಜಪಾನಿಗಳು ನಿದ್ರೆಯನ್ನು ತ್ಯಾಗಮಾಡುವರು. ದೇಶ್ಯಗಿಸ ಮತ್ತೆ ಮತ್ತು ನಿದ್ರೆಯಂತೆ ಊಟವು ಧ್ವದುಕಟದ ಒಂದು ಸಂಕೋಚದ ಕೆಲಸ ಮಾತ್ರವಲ್ಲದೆ ಶಿಸ್ತಿಗೆ ಸೇರಿದ್ದು ಆಗಿದೆ. ಬದುಕುವುದಕ್ಕಾಗಿ ಉಣ್ಣುವೆವೆಂದು ಅವರು ಊಟವನ್ನು ಬಹಳವಾಗಿ ಸಂಕ್ಷೇಪಿಸುತ್ತಾರೆ, ಗಬಗಬ ತಿಂದು ಮುಗಿಸುತ್ತಾರೆ.

ಕಲಿಯುವುದಕ್ಕೆ ಜಪಾನಿನಲ್ಲಿ ಅಷ್ಟು ಪ್ರಾಮುಖ್ಯವೇ ಇಲ್ಲ. ಸ್ಪರ್ಧೆ ಅವರಿಗಾಗದು. ಒಬ್ಬೊಬ್ಬರೇ ಇದ್ದರೆ ಎಷ್ಟು ಚೆನ್ನಾಗಿ ಒಂದು ಕಾರ್ಯವನ್ನು ಮಾಡುವರೋ ಹಾಗೆ ಸ್ಪರ್ಧೆಯಲ್ಲವರು ಮಾಡಲಾರರು. ಅವರ ಪ್ರವೃತ್ತಿಯೇ ಹಾಗೆ. ಎಲ್ಲಿ ಕೆಡುತ್ತದೋ ಎಂಬ ಭಯವೇ ಕೆಲಸವನ್ನು ಕೆಡಿಸಿ ಬಿಡುತ್ತದೆ! ಅದರಿಂದಲೇ ಅಲ್ಲಿನ ಶಾಲೆಗಳಲ್ಲಿ ವಿದ್ಯಾರ್ಥಿಗಳ Conduct ನಡತೆಯನ್ನು ಪರಿಶೀಲಿಸಿ ನೋಡುತ್ತಾರಲ್ಲದೆ Progress ಅಭ್ಯಾಸದ ಪ್ರಗತಿಯನ್ನಲ್ಲ! ಮೆಟ್ರಿಕ್ ಪರೀಕ್ಷೆಯಲ್ಲಿ ಹುಡುಗರನ್ನು ಉತ್ತೀರ್ಣಗೊಳಿಸಬೇಕಾದರೆ ಶಿಕ್ಷಕರು ಫೇಲಾದ ಹುಡುಗರು ಹೇಗೆ ಒಂದೆ ಆತ್ಮಹತ್ಯೆ ಮಾಡಿಕೊಂಡರೆಂಬ ಮುಂತಾದ ಭಯಂಕರ ಕಥೆಗಳನ್ನು ಹೇಳುತ್ತಿರುತ್ತಾರೆ ಅವರ ಇಡಿ ಜೀವನದಲ್ಲಿ ಸ್ಪರ್ಧೆಯನ್ನು ಕಡಿಮೆ ಮಾಡುವುದೇ ಮೂಲಕೂಕ್ಷ್ಯವಾಗಿದೆ.

ಮುಷ್ಕರ ಎಂದರೆ ಜಪಾನಿನಲ್ಲಿ ವರ್ಗಕಲಹವಲ್ಲ ಎಂದು ರುಥ್ ಬೆನಿಡಿಕ್ಟರೆನ್ನುತ್ತಾರೆ. ಪಾಶ್ಚಾತ್ಯ ಪ್ರಪಂಚದಲ್ಲಿಯಂತೆ ಅವು ಉತ್ಪಾದನವನ್ನು ಕಡಿಮೆ ಮಾಡುವುದಿಲ್ಲ ತದ್ವಿರುದ್ಧವಾಗಿ ವೃದ್ಧಿಗೊಳಿಸುತ್ತವೆ ಹೇಗೆಂದರೆ ಸಿಟ್ಟುಬಂದರೆ ಒಂದೆ ಯತನಕ್ಕೆ ಸಂಬಂಧಿಸಿದ ಎಲ್ಲರನ್ನೂ ಕಾರಖಾನೆಯಿಂದ ಹೊರಗೆ ತಳ್ಳಿ ಕೂಲಿಕಾರರು ತಾವೇ ಕಾರಖಾನೆಯನ್ನು ಕೈಗೆ ತೆಗೆದುಕೊಂಡು ಸ್ವತ: ದುಡಿದು ಉತ್ಪಾದನೆಯನ್ನು ದ್ವಿಗುಣವಾಗಿ ತನ್ಮೂಲಕ ತಮ್ಮ ಕೂಲಿಯನ್ನು ಹೆಚ್ಚಿಸಿಕೊಳ್ಳುತ್ತಾರೆ.

ಜಪಾನಿನಲ್ಲಿ ಸ್ವಾಭಿಮಾನವೆಂದರೆ ನಿಯಮಾನುಸಾರ, ಆಜ್ಞೆಗೆ ವಿಧೇಯನಾಗಿ ಪ್ರತಿಯೊಬ್ಬನೂ ತನ್ನ ಕರ್ತವ್ಯವನ್ನು ನಿರ್ವಹಿಸುವುದು. ಹಕ್ಕಿಗಾಗಿ ಒಡೆಯನ ವಿರುದ್ಧ ನಿಲ್ಲುವುದಕ್ಕಿಂತ ತನ್ನ ಕರ್ತವ್ಯವನ್ನು ತಾನು ತಪ್ಪದೆ ನಡೆಸುವುದನ್ನೇ ಧೀರಕಾರ್ಯವೆಂದು ಗಣಿಸಲಾಗುತ್ತದೆ.

ಜಪಾನೀ ರೂಪಕಗಳಲ್ಲಿ ಅವಿದ್ಧ ನಾಟಕಗಳೇ ಹೆಚ್ಚು. ಅಲ್ಲಿಯ ಇಂದಿನ ಸಿನೆಮಾಗಳಲ್ಲಿ ಕೂಡ ಹೀಗೆ ನಾಯಕ ನಾಯಿಕೆಯರ ಕಷ್ಟವೇ ಚಿತ್ರಿಸಲ್ಪಟ್ಟಿರುತ್ತದೆ. ಆ ಕಷ್ಟವು ದೈವದತ್ತವೆಂದು ಎಂದೂ ತಿಳಿಯಲಾಗುವುದಿಲ್ಲ. ಅಂಥ ಕಷ್ಟದಲ್ಲೂ ಕರ್ತವ್ಯಲೋಪವಿಲ್ಲದೆ ಬಾಳುವುದೇ ಆ ನಾಯಕ ನಾಯಿಕೆಯರನ್ನು ಉದಾತ್ತಗೊಳಿಸುತ್ತದೆ. ಯುದ್ಧದ ಚಿತ್ರಗಳಲ್ಲಿ ಕೂಡ ತ್ಯಾಗ ಕಷ್ಟ ನಿರ್ವಹಣಗಳಿಗೆ ಮಹತ್ವವಲ್ಲದೆ ಜಯಾಪಜಯಗಳಿಗಲ್ಲ. (ಸಂಬಂಧ: ಶೇ ಸಮೋಕ್ಷೃತ್ವಾ)

ಮನೆ ಮುಂದಿನ ಪರದೆಯಲ್ಲಿ ಕಾಣುವ ಚಿತ್ರವೆಂದರೆ ೩ ಯುದ್ಧಗಳಲ್ಲಿ ಕಾದಿ ಉಳಿದ ಅಂಗಹೀನರಾದ ಜಪಾನೀ ಕುಟುಂಬದ್ದು! ಪಾಲಿಗೆ ಬಂದದ್ದು ಪಂಚಾಮೃತವೆನ್ನುವುದನ್ನು ಜಪಾನಿಗಳಷ್ಟು ಯಾರೂ ಅರಗಿಸಿಕೊಂಡಿಲ್ಲ. ಅದರಿಂದಲೇ ಯುದ್ಧ ಕೈದಿಗಳಾದಾಗ ಅವರು ಅನಿರೀಕ್ಷಿತವಾಗಿ ಮಿತ್ರಪಕ್ಷೀಯರನ್ನು ಪ್ರತಿಭಟಿಸದೆ— What cannot be cured must be endured — ಗುಣಪಡಿಸಲಾರದ ರೋಗವನ್ನು ಅನುಭವಿಸಿಯೇ ತೀರಬೇಕು ಎಂದುಕೊಂಡು ಅಧಿಕಾರಿಗಳೊಡನೆ ಪೂರ್ಣ ಸಹಕಾರದಿಂದ ನಡೆದುಕೊಂಡರು. ಅವರ ಮುಖ್ಯಧ್ಯೇಯವೆಂದರೆ

—೧೬ ನೆಯ ಪುಟ ನೋಡಿರಿ

ಅದರಲ್ಲಿ ಆಶ್ಚರ್ಯವೇನು? ಅಥವಾ ಈ ಕಲ್ಪದ ಸರಸ್ವತಿಯು ಸುಲ್ತಾನಪೇಟೆಯಲ್ಲಿ ಕುಳಿತು ಪಾಶ್ಚಾತ್ಯ ಚೇಷ್ಟೆಯಿಂದ ಸೇವಿಸುತ್ತಿಯ ಹೋಗಿ ಬಿಡುತ್ತ ಮಹಾತಾಯವನಳಿದು ಪ್ರಗತಿಶೀಲ ಕವಿಗಳೆಂದರೆ ತಪ್ಪೇನು?

ಅಮೇರಿಕದ ಸ್ತ್ರೀ ಪತ್ರಿಕೋದ್ಯಮಿಗಳು

ಲೇಖಕರು: ಶ್ರೀ ನಾಡಿಗ ಕೃಷ್ಣಮೂರ್ತಿ (ಅಮೇರಿಕ)

(ವಿಶೇಷ ಲೇಖನ ೧೪)

ಶ್ರೀಮತಿ ಮೇರಿ ಮೆಕ್ಲೂಂಗ

ಶ್ರೀಮತಿ ಮೇರಿ ಮೆಕ್ಲೂಂಗಳು ಅಮೇರಿಕದ ಪ್ರಥಮ ಸ್ತ್ರೀವ್ಯವಸ್ಥಾಪಕ ಸಂಪಾದಕಳಾಗಿ ನ್ಯೂಯಾರ್ಕಿನ ಅತಿ ಹಳೆಯ ವೃತ್ತಪತ್ರಿಕೆಯಾದ ನ್ಯೂಯಾರ್ಕ ಪೋಸ್ಟ ಪತ್ರಿಕೆಯ ಯಜಮಾನ್ಯ ವಹಿಸಿಕೊಂಡಳು. ಇಲ್ಲಿಯ ವರೆಗೆ ಈ ಅಧಿಕಾರದಲ್ಲಿ ಕೆಲಸ ಮಾಡಿದವರು ಬರಿ ಗಂಡಸರೇ. ಹೀಗೆ ಪತ್ರಿಕೋದ್ಯಮದಲ್ಲಿ ಇಂತಹ ಪದವಿಗಳನ್ನು ವಹಿಸಿಕೊಂಡವರಲ್ಲಿ, ಅದೇ ಪತ್ರಿಕೆಯ ಸಂಪಾದಕಳಾದ ಶ್ರೀಮತಿ ಡೋರಾಥಿ ಥ್ಯಾಕರ್ಸ, ನ್ಯೂಯಾರ್ಕ ಹೆರಾಲ್ಡ ಟ್ರಿಬ್ಯೂನ್ ಪತ್ರಿಕೆಯ ಪ್ರಕಟನಕಾರಳಾದ ಶ್ರೀಮತಿ ಓಗ್‌ಡನ್ ರೀಡ್, ರಾಜಧಾನಿಯ ವಾಷಿಂಗ್‌ಟನ್ ಟೈಮ್ಸ ಹೆರಾಲ್ಡ ಪತ್ರಿಕೆಯ ಯಜಮಾನಿತಿ ಶ್ರೀಮತಿ ಇಲಿನಾರ್ ಮೆಡಿಲ್ ಪ್ಯಾಟರ್‌ಸನ್, ಇವರು ಮುಖ್ಯರು.

೪೭ ವಯಸ್ಸಿನ ಮೇರಿ ಮೆಕ್ಲೂಂಗಳು ನೋಡಲು ಬಲು ಸುಂದರಳು. ಸ್ತ್ರೀಗೆ ಇರಬೇಕಾದ ಸಹಜ ಸೌಂದರ್ಯ ಸ್ವಲ್ಪವೂ ಕಡಿಮೆ ಇಲ್ಲ. ಮಾತು ಬಲು ಮಿದುವು. ಹಳ್ಳಿಯ ಹುಡುಗಿ. ಮೃದು ಸಣ್ಣ ಸಣ್ಣ ಕೆಲಸದಿಂದ, ಈ ಹಂತಕ್ಕೆ ಏರಿದವಳು. ವ್ಯವಸ್ಥಾಪನೆಯ ಕಷ್ಟದ ಕ್ಷಣಗಳಲ್ಲಿಯೂ ಶಾಂತಳಾಗಿ ಕೆಲಸ ನೆರವೇರಿಸುತ್ತಾಳೆ. ಈ ಶಾಂತತೆಯೇ ಈಕೆಯನ್ನು ಜೀವನದಲ್ಲಿ ಜಯಶಾಲಿಯನ್ನಾಗಿ ಮಾಡಿದೆ. ದಿನದ ಕೆಲಸ ಅಂದೇ ಮುಗಿಸಿ ಮರುದಿನದ ಕಾರ್ಯಕ್ರಮ ಹಾಕಿ, ೯ ಘಂಟೆಗಳ ಸತತ ಶ್ರಮದ ಕೆಲಸದ ನಂತರ ವಿರಾಮ ಪಡೆಯುತ್ತಾಳೆ. ಉಳಿದ ಸ್ತ್ರೀ ಪತ್ರಿಕೋದ್ಯಮಿಗಳಂತೆ, ಇವಳಿಗೆ ಮೊದಲು ಹಣದ ಸಹಾಯ ಸಿಕ್ಕಲಿಲ್ಲ.

ಪೆನ್‌ಸಿಲ್‌ವೇನಿಯಾ ಸಂಸ್ಥಾನದ ಬಟ್ಲರ ನಗರದಲ್ಲಿ ಜನಿಸಿದಳೀಕೆ. ಹುಟ್ಟಿ ಐದು ವರ್ಷದ ನಂತರ ತಾಯಿಯನ್ನು ಕಳೆದು ಕೊಂಡು ತಬ್ಬಲಿಯಾದಳು. ಈಕೆ ತನ್ನ ತಂದೆಯ ಆಶ್ರಯದಲ್ಲಿ ಬೆಳೆದಳು. ಗಂಡಸರ ಸಂಗಡ ಹೇಗೆ ಜೀವನದಲ್ಲಿ ಹೋರಾಡಬೇಕೆಂಬ ಅನುಭವವನ್ನು ಚಿಕ್ಕಂದಿನಲ್ಲಿಯೇ ಪಡೆದಳು. ಈಕೆ ಪ್ರೌಢ ಶಾಲೆಯಲ್ಲಿ ಕಲಿಯುತ್ತಿದ್ದಾಗಲೇ ಮುಂದಿನ ತನ್ನ ಜೀವನದ ಗೊತ್ತು ಗುರಿಯನ್ನು ನಿರ್ಧರಿಸಿ ಬಿಟ್ಟಿದ್ದಳು; ಪದವೀಧರಳಾದ ಕೂಡಲೇ ಪೆನ್‌ಸಿಲ್‌ವೇನಿಯ ಬೆಲ್ ಟೆಲಿಫೋನ ಕಂಪನಿಯ ಕೆಲಸಕ್ಕೆ ಉಮೇದುವಾರರನ್ನು ಆರಿಸುವ ಕೆಲಸವನ್ನು ವಹಿಸಿಕೊಂಡಳು. ನಂತರ ಪಿಟ್ಸ್‌ಬರ್ಗ್‌ನ ಟ್ಯಾಕ್ಸಿ ಕಂಪನಿಯಲ್ಲಿ ವ್ಯವಸ್ಥಾಪಕಳಾಗಿ ಸೇರಿಕೊಂಡಳು. ಆ ಕಂಪನಿಯ ಜಾಹೀರಾತು ಕೆಲಸ ಇವಳ ಮೇಲೆಯೇ ಬಿದ್ದಿತು. ಅಲ್ಲಿ ಈಕೆಗೆ ಪ್ರಥಮ ಸಲ ವೃತ್ತಪತ್ರಿಕೆಗಳ ಅನುಭವವಾಯಿತು. ಅಂದಿನಿಂದ ಇಂದಿನವರೆಗೆ ವೃತ್ತ ಪತ್ರಿಕಾಪ್ರಪಂಚದಲ್ಲಿಯೇ ಕಾಲ ಕಳೆದಿದ್ದಾಳೆ.

ಪಿಟ್ಸ್‌ಬರ್ಗ್ ಪ್ರೆಸ್ಸಿನ ಜಾಹೀರಾತಿನ ವ್ಯವಸ್ಥೆ ಜೊಕ್ಕವೂ ಈಕೆಯದೇ ಆಯಿತು. ಈಕೆಯ ಕೆಲಸ ತುಂಬ ತೃಪ್ತಿಕರವಾದುದನ್ನು ನ್ಯೂಯಾರ್ಕಿನ ನ್ಯೂಯಾರ್ಕ ವರ್ಲ್ಡ ಟೆಲಿಗ್ರಾಮ ಪತ್ರಿಕೆಯು ಕೊಂಡಾಡಿತು. ೧೯೩೪ರಲ್ಲಿ ಅದೇ ಪತ್ರಿಕೆಯಲ್ಲಿ ಕೆಲಸ ಪ್ರಾರಂಭಿಸಿ, ನಾಲ್ಕು ವರ್ಷಗಳನಂತರ ನ್ಯೂಯಾರ್ಕ ಪೋಸ್ಟದ ಟೆಲಿಫೋನ್ ಶಾಖೆಯ ಮತ್ತು ಜಾಹೀರಾತು ಶಾಖೆಯ ವ್ಯವಸ್ಥಾಪಕಳಾದಳು. ಮೊದಲು ಈಕೆ ಜಾಹೀರಾತಿನ ಕೆಲಸ ಪ್ರಾರಂಭಿಸಿದಾಗ, ಬರೀ ಗಂಡಸರಿರುವ ಕಚೇರಿಯಲ್ಲಿ ತನ್ನ ಮಾತನ್ನು ಯಾರಾದರೂ ಕೇಳುವರೇ ಎಂಬ ಸಂಶಯವಿತ್ತು. ಆಕೆಯ ಸಂಶಯ ಸ್ವಲ್ಪದಿನಗಳಲ್ಲಿಯೇ ನಿವಾರಣೆಯಾಯಿತು. ಐದು ವರ್ಷಗಳ ಅವಧಿಯಲ್ಲಿ ಒಂದಕ್ಕೆ ಎರಡರಷ್ಟು ಜಾಹೀರಾತು ಹೆಚ್ಚಿತು. ಆ ಪತ್ರಿಕೆಯ ಸರಾಸರಿ ೩ಲಕ್ಷ ೫೦ ಸಾವಿರ ಪ್ರತಿಗಳು ದಿನವೂ ಖರ್ಚಾಗುತ್ತಿದ್ದವು.

ಮೇರಿ ಮೆಕ್ಲೂಂಗಳು ಶ್ರೀಯುತ ಎಡ್ವರ್ಡ ಸಿ. ಕೆನ್ನಲಿ ಎಂಬುವರನ್ನು ಮದುವೆಯಾಗಿದ್ದಾಳೆ. ಇವರು ಮಿಚಿಗನ್ ಸಂಸ್ಥಾನದ ಪೆಪ್ಸ ಬ್ರಾಂಚ ಪಟ್ಟಣದವರು; ಥಿಯೋಡರ್ ಜಾಹೀರಾತು ಕಂಪನಿಯ ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದಾರೆ. ನ್ಯೂಯಾರ್ಕಿನ ಪೂರ್ವಭಾಗದ ೬೦ನೇ ಬೀದಿಯಲ್ಲಿ ಅವರ ಮನೆ. ನ್ಯೂಯಾರ್ಕಿಗೆ ಸಮೀಪದ ತೋಟವೊಂದರಲ್ಲಿ ಮನೆ ಕೊಂಡು ಅಲ್ಲಿ ವಾಸಿಸಬೇಕೆಂಬ ಆಕೆಯ ಅಭಿಲಾಷೆ. ತಂದೆಯ ಕರಬೇತಿಯಲ್ಲಿ ಮನೆಗೆಲಸ ಕಲಿತಳು. ಆಕೆಯೇ ಅಂಗಡಿಗೆ ಹೋಗಿ ಸಂಸಾರದ ಸಾಮಾನು ತರುತ್ತಾಳೆ. ಅಡಿಗೆಯನ್ನು ಸಹ ಆಕೆಯೇ ಮಾಡಿಕೊಳ್ಳುತ್ತಾಳೆ. ಈಕೆಗೆ ಒಂದು ಅಧಿಕಾರವೂ ಜಾಸ್ತಿ ಇಲ್ಲ. ತನ್ನ ಉಡುಪಿನ ಅಂದಚೆಂದ ಈಕೆಗೆ ತಿಳಿಯುವುದೇ ಇಲ್ಲ. ಅಂದರೆ ಹೊಲಸು ಬಟ್ಟೆ ಹಾಕಿಕೊಳ್ಳುತ್ತಾಳೆಂದಲ್ಲ. ನವೀನ ರೀತಿಯ ಫ್ಯಾಶನ್ನಿಗೆ ಗಮನವನ್ನೇ ಕೊಡುವದಿಲ್ಲ.

ಶ್ರೀಮತಿ ಡೋರಾಥಿ ಥ್ಯಾಕರ್ಸ

ಶ್ರೀಮತಿ ಡೋರಾಥಿ ಥ್ಯಾಕರ್ಸಳು ನೇರಿಯ ಯಜಮಾನಿತಿ, ನ್ಯೂಯಾರ್ಕ ಪೋಸ್ಟಿನ ಸಹಸಂಪಾದಿಕೆ ಮತ್ತು ಒಡತಿ. ಈಕೆ ಸುಪ್ರಸಿದ್ಧ ವಾಣಿಯೂ ಬ್ಯಾಂಕರನೂ ಆದ ಜೇಕಬ್ ಸ್ಕಿಫ್ ಎಂಬಾತನ ಮೊಮ್ಮಗಳು. ನಗರದ ಪತ್ರಿಕೆಗಳನ್ನು ಅಲ್ಲಗಳೆಯುವ ಅಮೇರಿಕದ ಕೆಲವು ಸ್ತ್ರೀ ಪತ್ರಿಕೋದ್ಯಮಿಗಳಲ್ಲಿ ಇವಳೂ ಒಬ್ಬಳು. ಬ್ರೈನ್ ಮೌವರ್ ಕಾಲೇಜಿನಲ್ಲಿ ಅಭ್ಯಾಸ ಪ್ರಾರಂಭ ಮಾಡಿದಳು. ಸದಾ ತರಗತಿಯಲ್ಲಿ ಕೊನೆಯ ನಂಬರೇ ಈಕೆಯದು. ಕಾರಣ ಅಭ್ಯಾಸ ತನಗೆ ಸರಿಯುಲ್ಲವೆಂದು ತೀರ್ಮಾನಿಸಿ ೧೯೨೩ರಲ್ಲಿ ಸಮಾಜ ಕಾರ್ಯದಲ್ಲಿ ತೊಡಗಿದಳು. ೧೯೩೯ರಲ್ಲಿ ಈಕೆಯೂ ಈಕೆಯ ಮೊದಲಿನ ಗಂಡ ಜಾರ್ಜ ಬೇಕರನೂ ಕೂಡಿ ನ್ಯೂಯಾರ್ಕ ಪೋಸ್ಟ ಪತ್ರಿಕೆಯನ್ನು ಕೊಂಡರು. ಕಾರ್ಯನಿರ್ವಾಹಕಿಯಾಗಿ ಅಧ್ಯಕ್ಷಳಾಗಿ, ಖಜಾಂಚಿಯಾಗಿ ಮೂರು ವರ್ಷ ಪತ್ರಿಕೆಯನ್ನು ಚೆನ್ನಾಗಿ ನಡೆಯಿಸಿದಳು. ವಿಷಯ ಕಲಿಯಬೇಕೆಂಬ ಅಭಿಲಾಷೆಯಿಂದ, ಎಲ್ಲಾ ಶಾಖೆಗಳಲ್ಲಿಯೂ, ಪರಿಶ್ರಮ ಹೊಂದಿ, ೧೯೪೨ರಲ್ಲಿ, ದೇಹಾಲಸ್ಯದ ನಿಮಿತ್ತ ರಾಜೀನಾಮೆಯಿತ್ತ ತನ್ನ ಗಂಡನ ಬದಲು ತಾನೇ ಪ್ರಕಟನಕಾರಳೂ ಆದಳು. ಕೆಲವೇ ದಿನಗಳಲ್ಲಿ ಮೊದಲ ಗಂಡನಿಂದ ವಿಚ್ಛೇದಿತಳಾಗಿ, ಸಹಸಂಪಾದಕನಾಗಿದ್ದ ಥಿಯೋಡರ್ ಒಲಿನ್ ಥ್ಯಾಕರೆ ಎಂಬವನನ್ನು ಮದುವೆಯಾದಳು. ಪತ್ರಿಕೆಯ ಅಂದವನ್ನೂ ಹೆಚ್ಚಿಸಿದ್ದಲ್ಲದೆ, ವಿಷಯಗಳ ಪ್ರಾಮುಖ್ಯವನ್ನು ಹೆಚ್ಚಿಸಿದಳು. ವಿಶೇಷ ಲೇಖನಗಳ ಪುಟಗಳನ್ನು ಹೆಚ್ಚಿಸಿ ಸ್ತ್ರೀಯರಿಗಾಗಿ ಹೊಸದಾದ ಪುಟ ಪ್ರಾರಂಭಿಸಿದಳು. ೧೯೪೫ರಲ್ಲಿ ಪತ್ರಿಕೆಯು ಆಕಾರ ಇಳಿಯಿತು. ಪೋಸ್ಟ ಸಿಂಡಿಕೇಟ ಎಂಬ ಸಂಸ್ಥೆ ಏರ್ಪಟ್ಟು ಅದರ ಮುಖಾಂತರ ಉಳಿದ ಪತ್ರಿಕೆಗಳಿಗೆ ಆಕೆ ಲೇಖನಗಳನ್ನು ಮಾರಲು ಪ್ರಾರಂಭಿಸಿದಳು. ೧೯೪೩ರಲ್ಲಿ ನ್ಯೂಯಾರ್ಕಿನ ವಸಾಹತಾದ ಬ್ರಾಂಕ್ಸದ ಹೋಮ್‌ನ್ಯೂಸ ಎಂಬ ಪತ್ರಿಕೆಯನ್ನು ಕೊಂಡಳು. ಇದರ ೧೮ಲಕ್ಷ ಪತ್ರಿಕೆಗಳು ಖರ್ಚಾಗುತ್ತವೆ. ಇದರಲ್ಲಿ ನೂರಕ್ಕೆ ೯೫ರಷ್ಟು ಪತ್ರಿಕೆಗಳನ್ನು ಮನೆಮನೆಗೆ ತೆಗೆದುಕೊಂಡು ಹೋಗಿ ಕೊಡುತ್ತಾರೆ.

ಈ ಎರಡು ಪತ್ರಿಕೆಗಳ ಯಜಮಾನ್ಯವಲ್ಲದೆ ಈಕೆ ಮೂರು ರೇಡಿಯೋಸ್ಟೇಶನುಗಳನ್ನೂ ನಡೆಯಿಸುತ್ತಾಳೆ. ಅಮೇರಿಕದಲ್ಲಿ ರೇಡಿಯೋ ಖಾಸಗಿಯವರೇ, ಸಾಮಾನ್ಯವಾಗಿ ವೃತ್ತಪತ್ರಿಕಾ ಒಡೆಯರೇ ನಡೆಯಿಸುತ್ತಾರೆ. ಇದಲ್ಲದೆ ಸುಪ್ರಸಿದ್ಧ ಚಲನಚಿತ್ರಗಳಾದ "Dead End" ಮತ್ತು "Abe Lincolon in Illinois" ಎಂಬುವುಗಳಲ್ಲಿ ಪಾಲುಗಾರಳೂ ಇದ್ದಾಳೆ. ಈಕೆಗೆ ೪೪ ವರ್ಷ. ಮೂವರು ಮಕ್ಕಳಿದ್ದಾರೆ. ತನ್ನ ಪತ್ರಿಕೆಯಲ್ಲಿ ಪ್ರಕಟವಾಗುವ ಆಹಾರದ ವಿಭಾಗಕ್ಕೆ ಆಗಾಗ ಅಮೇರಿಕದ ರುಚಿರುಚಿ ತಿಂಡಿಗಳನ್ನು ಮಾಡುವ ವಿಧಾನಗಳ ಬಗ್ಗೆ ಲೇಖನ ಬರೆಯುತ್ತಾಳೆ.

ಶ್ರೀಮತಿ ಹೆಲನ್ ರೋಜರ್ಸ ರೀಡ್

ಶ್ರೀಮತಿ ಥ್ಯಾಕರ್ಸಗಿಂತ ೨೦ ವರ್ಷ ವಯಸ್ಸಿನಲ್ಲಿ ಚಿಕ್ಕವಳು, ಅತಿ ಸುಂದರಿ, ಶ್ರೀಮತಿ ಹೆಲನ್ ರೋಜರ್ಸ ರೀಡಳು. ಈಕೆ ನ್ಯೂಯಾರ್ಕ ಹೆರಾಲ್ಡ ಟ್ರಿಬ್ಯೂನಿನ ಒಡತಿಯಾಗಿದ್ದಾಳೆ. ವಿಸ್‌ಕಾನ್‌ಸಿನ್ ಸಂಸ್ಥಾನದ ಆ್ಯಪಲ್‌ಟನ್ನ ನಗರದ ಹುಡುಗಿ, ಅಮೇರಿಕದ ಬಹುದೊಡ್ಡದಾದ ಮತ್ತು ಪ್ರತಿಭಾಯುತವಾದ ಪತ್ರಿಕೆಯ ಯಜಮಾನಿತಿ. ಚಿಕ್ಕಂದಿನಲ್ಲಿ, ಹುಡುಗಿ ತನ್ನ ಕಾಲೇಜ ಅಭ್ಯಾಸ ಸಾಗಿಸಿಕೊಂಡು ಬಂದ ತರುಣಿ ಈಕೆ. ಶ್ರೀಮತಿ ವೈಟ್‌ಲಾಳ ಕಾರ್ಯದರ್ಶಿನಿಯ ಕೆಲಸ ಕೈಕೊಂಡು, ಅದೇ ಸಂಸಾರಕ್ಕೆ ಸಂಬಂಧಪಟ್ಟ ಶ್ರೀ. ಓಗ್‌ಡನ್‌ರೀಡ್ ಎಂಬುವರನ್ನು ಮದುವೆಯಾದಳು. ಹೋದವರ್ಷ ಪತಿ ತೀರಿಕೊಂಡನಂತರ ಪತ್ರಿಕೆಯ ಎಲ್ಲ ಯಜಮಾನ್ಯವೂ ಈಕೆಗೇ ಬಂದಿತು.

ಈಕೆಯೂ ಪ್ರತಿಭಾಶಾಲಿನಿ. ಪತ್ರಿಕೆಯಲ್ಲಿ ೨೦ ವರ್ಷಗಳಿಂದಲೂ ಕೆಲಸ ನಡೆಸುತ್ತಿದ್ದು ಜಾಹೀರಾತ ವಿಭಾಗವನ್ನು ಚೆನ್ನಾಗಿ ಅಭಿವೃದ್ಧಿ ಪಡಿಸಿದ ಕೀರ್ತಿ ಈಕೆಯದು. ೧೫ ಮಿಲಿಯನ್ ಡಾಲರುಗಳನ್ನು ವೆಚ್ಚ ಮಾಡಿದರೂ ಅಭಿವೃದ್ಧಿ ಹೊಂದದ ಆ ಶಾಖೆ ಈಕೆಯ ಕೈಗೆ ಬಂದನಂತರ, ಸಾಲವಾಗಿ ನಿಂತಿದ್ದ ೧ಲಕ್ಷ ೫೦ಸಾವಿರ ಡಾಲರು ಗಳನ್ನು ತುಂಬಿಕೆಗೆದು ಈಗ ಲಾಭದ ಭಾಗಕ್ಕೆ ಲಕ್ಷಾಂತರ ಡಾಲರು ಬರುವಂತೆ ಮಾಡಿದ ಕೀರ್ತಿ ಸಾಹಸ ಈಕೆಯದೇ.

ಶ್ರೀಮತಿ ಇಲಿನಾರ್ ಮೆಡಿಲ್ ಪ್ಯಾಟರ್ಸನ್

ಶ್ರೀಮತಿ ಇಲಿನಾರ್ ಮೆಡಿಲ್ ಪ್ಯಾಟರ್ಸನ್ನಳು ಇವರೆಲ್ಲರಿಗಿಂತ ಬೇರೆಯೇ. ಈಕೆಗೆ 'ಸಿಸ್ಸಿ' ಎಂಬ ಪ್ರಿಯನಾಮಧೇಯ. ರಾಜಧಾನಿಯ ವಾಷಿಂಗ್‌ಟನ್ ಟೈಮ್ಸ ಹೆರಾಲ್ಡಿನ ಯಜಮಾನಿತಿ. ತುಂಬಾ ಕಠೋರಳು, ಮುಂಗೋಪಿ, ಆದರೆ ಬುದ್ಧಿವಂತೆ. ಈಕೆ ೬೪ನೇ ವಯಸ್ಸಿನಲ್ಲಿ ಪತ್ರಿಕಾ ವ್ಯವಸಾಯವನ್ನು ತನ್ನ ಜೀವನದ ವೃತ್ತಿಯನ್ನಾಗಿ ಮಾಡಿಕೊಂಡಳು. ಚಿಕಾಗೋ ಟ್ರಿಬ್ಯೂನ್ ಪತ್ರಿಕೆಯನ್ನು ಪ್ರಾರಂಭಿಸಿದ ಜೋಸೆಫ್ ಮೆಡಿಲ್‌ನ ಮೊಮ್ಮಗಳು. ಎರಡು ಸಲ ಮದುವೆಯಾಗಿದ್ದಾಳೆ. ಮದುವೆಯಾದ ಮಗಳೊಬ್ಬಳು ಈಕೆಯ ಸರ್ವಸ್ವ. ಈಗ ಎರಿಯಂ ರಾಂಡೋಲ್ಫ್ ಹರ್ಸ್ಟ ವಾಷಿಂಗ್‌ಟನ್ ಟೈಮ್ಸ ಹೆರಾಲ್ಡನ್ನು ೧೯೩೯ರಲ್ಲಿ ಕ್ರಯಕ್ಕೆ ತೆಗೆದುಕೊಂಡಳು. ಪ್ರತಿದಿನದ ಎರಡು ಪತ್ರಿಕೆಗಳನ್ನು ಒಂದಾಗಿ ಮಾಡಿ ರಾಜಧಾನಿಯ ಅತಿ ದೊಡ್ಡ ಪತ್ರಿಕೆಯನ್ನಾಗಿ ಮಾಡಿದಳು. ಈಕೆ ಈ ವೃತ್ತಿ ಪ್ರಾರಂಭಮಾಡಿದ್ದು ತನ್ನ ಹಳೆಯ ಸೇಡನ್ನು ತೀರಿಸಿಕೊಳ್ಳಲಿಕ್ಕಾಗಿ. ಅಂದಿನಿಂದ ೧೭ ವರ್ಷಗಳವರೆಗೆ ತನ್ನ ಹಗೆಯಾದ ಶ್ರೀ. ಆ್ಯಲೈಸ್ ರೂಸವೆಲ್ಟ್ ಲಾಂಗವರ್ತನ ಮೇಲೆ ಪ್ರತಿದಿನವೂ, ವಿಷಕಾರಿದ್ದಾಳೆ. ರಾಜಧಾನಿಯ ಜನ ಈ ಪತ್ರಿಕೆಯನ್ನು ಕೊಳ್ಳುವುದು ಈ ಒಂದು ಕಾರಣಕ್ಕಾಗಿ; ಸಿಸ್ಸಿ ಆ ದಿನ ಯಾರನ್ನು ಟೀಕೆಗೆ ತೆಗೆದುಕೊಂಡಿದ್ದಾಳೆಂದು ನೋಡಲಿ. ಎಲ್ಲರಿಗಿಂತ ಹೆಚ್ಚಾಗಿ ಈಕೆಯ ಕೋಪ ಸುಪ್ರಸಿದ್ಧ ಲೇಖಕನಾದ ಡ್ರ್ಯೂ ಪಿಯರ್ಸನನ ಮೇಲೆ. ಈಕೆಯ ಮಗಳು ಶ್ರೀಮತಿ ಫೆಲಿಶಾ ಒಂದು ಸಲ ಪಿಯರಸನ್ನನ್ನು ಮದುವೆಯಾಗಿ ವಿಚ್ಛೇದ ಹೊಂದಿದಳು. ೧೯೩೨ರಿಂದ ಈಕೆಯ ಪತ್ರಿಕೆಯಲ್ಲಿ ಪಿಯರಸನ್ನನಿಂದ "Washington Merry Go Round" ಎಂಬ ಅಭಿದಾನದಿಂದ ಬರುತ್ತಿದ್ದ ಲೇಖನಗಳು ನಿಂತ ಮೇಲೆ ತಾನೇ ತನ್ನ ಹಿಂದಿನ ಅಳಿಯನ ಪುಟ ಬರೆಯುತಾಳೆ. ಆಗಾಗ್ಗೆ ಪಿಯರಸನ್ನನ್ನು "The Headache Boy" ಎಂದು ಟೀಕಿಸುತ್ತಾಳೆ.

ಸಿಸ್ಸಿಯಲ್ಲಿ ಪತ್ರಿಕಾಚತುರತೆಯೂ ಉಂಟು. ಒರಟುತನವೊಂದಲ್ಲದೆ ಪತ್ರಿಕಾ ಪ್ರಪಂಚದ ಗುಟ್ಟು ತಿಳಿದಿದ್ದಾಳೆ. ಅಧ್ಯಕ್ಷ ರೂಜವೆಲ್ಟ ತೀರಿಕೊಂಡಾಗ ಪತ್ರಿಕೆಗಳೆಲ್ಲವೂ ಬರೀ ಆತನ ಗುಣಗಾನವನ್ನೇ ಮಾಡಿದವು. ಆಕೆಯ ಪತ್ರಿಕೆಯೂ ಹಾಗೇ ಮಾಡಬೇಕೆಂದು, ಸಂಪಾದಕರು ಸಲಹೆಯಿತ್ತರು. ಆಕೆ "ಮೊದಲನೇ ಪುಟದ ತುಂಬಾ ದೊಡ್ಡದಾದ ರೂಜವೆಲ್ಟನ ಚಿತ್ರಹಾಕಿ ಎರಡನೇ ಪುಟದಲ್ಲಿ ಚಿಕ್ಕದಾಗಿ ಶ್ರದ್ಧಾಂಜಲಿಯ ಸುದ್ದಿ ಬರೆಯಿರಿ. ಉಳಿದ ಪುಟಗಳಲ್ಲಿ ಅಧ್ಯಕ್ಷ ಟ್ರೂಮನ್ನನಿಗೆ ಮೀಸಲಾಗಿರಲಿ. ಈಗ ಪ್ರಪಂಚದ ಮತ್ತು ಅಮೇರಿಕೆಯ ಪರದೆಯಮೇಲೆ ನಾಟ್ಯವಾಡುತ್ತಿರುವವರು ಟ್ರೂಮನ್ ರೂಜವೆಲ್ಟ ಅಲ್ಲ; ರೂಜವೆಲ್ಟರ ಕಥೆ ಮುಗಿಯಿತು." ಎಂದು ಹೇಳಿದಳು.

ಅಮೇರಿಕದಲ್ಲೆಲ್ಲ ತುಂಬ ವೈರಿಗಳನ್ನು ಗಳಿಸಿಕೊಂಡಾಕೆ ಈಕೆ. ಈಕೆಗೆ ಅಂದಚಂದ ಎಲ್ಲಾ ಬೇಕು. ಒಂದು ಸಲ ೨೦ ಜೊತೆ ಬೂಟುಗಳನ್ನು ಕೊಂಡು ದಿನವೂ ಒಂದೊಂದು ಹಾಕಿಕೊಂಡು ಮೆರೆದಳು. ರಾಜಧಾನಿಯಲ್ಲಿ ಅರಮನೆಯಂತಹ ಸೊಗಸಾದ ಮನೆಯಿದೆ. ಸರಸೋಟದಲ್ಲಿ, ನ್ಯೂಯಾರ್ಕಿನಲ್ಲಿ, ಲಾಂಗ್ ಐರ್ಲೆಂಡಿನಲ್ಲಿಯೂ ಮನೆಗಳಿವೆ. ಬೇಸರವಾದಾಗ ಅವೇ ಈಕೆಯ ಆಶ್ರಯಸ್ಥಾನಗಳು.

ಆಕೆ ಹೇಗೇ ಇರಲಿ, ಆಕೆಯ ಪತ್ರಿಕೆ ಇಂದು ಬಹು ಪ್ರಸಿದ್ಧವಾಗಿದೆ. ವರ್ಷಕ್ಕೆ ಒಂದು ಮಿಲಿಯನ್ ಡಾಲರ ಲಾಭ ಪಡೆಯುತ್ತಾಳೆ. ಅಧ್ಯಕ್ಷ ಟ್ರೂಮನ್ ಪ್ರತಿದಿನವೂ ಈಕೆಯ ಪತ್ರಿಕೆಯನ್ನು ಓದುತ್ತಾರೆ. ಇನ್ನೇನು ಬೇಕು?

ಜೀವನ ಮತ್ತು ವಿಜ್ಞಾನ

ಕೊಬ್ಬುಗಳು
(FATS)

ಶ್ರೀ. ವೆಂಕೋಬಾಚಾರ್ಯ ಉಪಾಧ್ಯಾಯ,

ಎಂ. ಎಸ್. ಸಿ.

ಮಾನವನ ದೇಹದಲ್ಲಿ ಕಾವು ಮತ್ತು ಶಕ್ತಿಯನ್ನು ಹುಟ್ಟಿಸುವದಕ್ಕೆ ಕೆಲವೊಂದು ಆಹಾರ ವಸ್ತುಗಳು ಬೇಕೇಬೇಕು. ಇವುಗಳಲ್ಲಿ ಕೊಬ್ಬು ಮತ್ತು ಪಿಷ್ಟ ಶರ್ಕರೆಗಳು (Fats and Carbohydrates) ಬಹಳ ಮಹತ್ವವುಳ್ಳದ್ದಾಗಿವೆ. ಸಕ್ಕರೆ, ಜೇನುತುಪ್ಪ, ಬೆಲ್ಲ ಮತ್ತು ಕೆಲವೊಂದು ಹಣ್ಣುಗಳನ್ನು ಬಿಟ್ಟು ಉಳಿದ ಎಲ್ಲ ಆಹಾರ ಪದಾರ್ಥಗಳಲ್ಲಿ ಕೊಬ್ಬುಗಳು ಸಿಕ್ಕುತ್ತವೆ.

ಕೊಬ್ಬುಗಳಲ್ಲಿ ಎರಡು ಬಗೆ (೧) ಪ್ರಾಣಿ ಸಂಬಂಧವಾದ ಕೊಬ್ಬುಗಳು (Animal fats) (೨) ಸಸ್ಯ ಸಂಬಂಧವಾದ ಕೊಬ್ಬುಗಳು (Vegetable Fats)

ಮಾಂಸದ ಕೊಬ್ಬು, ಹಾಲು, ಬೆಣ್ಣೆ, ತುಪ್ಪ, ಕೆನೆ, ಗಿಣ್ಣು, ಮೀನೆಣ್ಣೆ, ಮೊಟ್ಟೆಯ ಹಳದಿ ಬಿಂದು (Egg-yolk) ಮುಂತಾದವುಗಳು ಮೊದಲನೆಯ ವರ್ಗಕ್ಕೆ ಸೇರಿದ ಕೊಬ್ಬುಗಳು ಹಿಪ್ಪೆ ಎಣ್ಣೆ, ಬದಾಮಿ ಎಣ್ಣೆ, ಕೊಬ್ಬರಿ ಎಣ್ಣೆ, ಸಾಸಿವೆ ಎಣ್ಣೆ, ಎಳ್ಳೆಣ್ಣೆ, ಅಗಸೀಎಣ್ಣೆ, ನೆಲಗಡ್ಲೆ ಎಣ್ಣೆ ಮುಂತಾದವುಗಳು ಎರಡನೆಯ ವರ್ಗಕ್ಕೆ ಸೇರಿದ ಕೊಬ್ಬುಗಳು ಇದಲ್ಲದೆ ಕೊಬ್ಬುಗಳು ಸೋಯಾಬೀನ್ (Soyabean), ಓಟು (Oat), ಬೇಳೆ ಕಡಲೆ, ಮೂಲಂಗಿ, ನೌಲಕೋಲ(Knol-khol) ಗಜ್ಜರಿ ಬದನೇಕಾಯಿ, ಹಾಲ್ಮೂಲಂಗಿ, ಸೊಪ್ಪು (Lettuce) ಮುಂತಾದವುಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿಯೂ ಬೆಳ್ಳಗೆ ಮಾಡಿದ ಅಕ್ಕಿ ಹಾಗೂ ಗೋದಿ, ಸಪ್ಪಕ್ಕಿ ಮತ್ತು ಹಣ್ಣುಗಳಲ್ಲಿ ಕಡಮೆಯ ಪ್ರಮಾಣದಲ್ಲಿಯೂ ಇರುತ್ತವೆ.

ಕೊಬ್ಬು ದೇಹದಲ್ಲಿ ಶಕ್ತಿಯನ್ನು ಹುಟ್ಟಿಸುವದಲ್ಲದೆ, ದೇಹದಲ್ಲಿದ್ದ ಕಾವು ಹೊರಗೆ ಹೋಗದಂತೆ ನೋಡಿಕೊಳ್ಳುತ್ತದೆ ಶರೀರವು ದುಂಡು ದುಂಡಾಗಿ ತುಂಬಿಕೊಂಡು ಸೊಗಸಾಗಿ ಕಾಣುವುದು ಈ ಕೊಬ್ಬಿನಿಂದಲೇ. ಇದು ದೇಹದಲ್ಲಿ ಹೆಚ್ಚಾದರೂ ಕಷ್ಟ, ಕಡಿಮೆಯಾದರೂ ಕಷ್ಟ.

ಎರಡೂ ವರ್ಗದ ಕೊಬ್ಬುಗಳಲ್ಲಿ ಪ್ರಾಣಿ ಸಂಬಂಧವಾದ ಕೊಬ್ಬುಗಳು ಶರೀರ ಪೋಷಣೆಗೆ ಹೆಚ್ಚು ಉತ್ತಮವಾದವುಗಳೆಂದು ಎಣಿಸಲ್ಪಟ್ಟವೆ. ಏಕೆಂದರೆ ಈ ಕೊಬ್ಬುಗಳಲ್ಲಿ 'ಎ' ಜೀವಸತ್ತ್ವವು ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಕಾರಣ, ವನಸ್ಪತಿ ತೈಲಗಳನ್ನು ಆಹಾರದಲ್ಲಿ ಉಪಯೋಗಿಸುವಾಗ, ಅವುಗಳ ಸಂಗಡ 'ಎ' ಜೀವಸತ್ತ್ವವನ್ನೊಳಗೊಂಡ ಆಹಾರ ಪದಾರ್ಥಗಳನ್ನು ಹೆಚ್ಚಾಗಿ ಸೇವಿಸಬೇಕು. ಒಂದು ವೇಳೆ ಕೊಬ್ಬುಗಳು ಆಹಾರದಲ್ಲಿ ಕಡಿಮೆಯ ಪ್ರಮಾಣದಲ್ಲಿದ್ದರೆ ಕಾಲುಗಳು ಬಾಯುತ್ತವೆ ಹೆಚ್ಚಾದರೆ ಮಲಬದ್ಧತೆ ಹಾಗೂ ಅಗ್ನಿಮಾಂದ್ಯ ಉಂಟಾಗುತ್ತದೆ.

ಒಟ್ಟಿನ ಮೇಲೆ, ಕೊಬ್ಬುಗಳು ೧)) ಶರೀರ ಪೋಷಣೆಗೆ ಬೇಕಾದ ಶಕ್ತಿ ಮತ್ತು 'ಎ' ಜೀವ ಸತ್ವವನ್ನು ಒದಗಿಸಿಕೊಡುವುದರಲ್ಲಿಯೂ (೨) ದೇಹದಲ್ಲಿದ್ದ ಕಾವು ಹೊರಗೆ ಹೋಗದಂತೆ ನೋಡಿಕೊಳ್ಳುವದರಲ್ಲಿಯೂ (೩)ಕೆಲವು ಸೂಕ್ಷ್ಮ ಇಂದ್ರಿಯಗಳನ್ನು ಕೆಡದಂತೆ ಸಂರಕ್ಷಿಸುವುದರಲ್ಲಿಯೂ ಸಹಾಯವಾಗುತ್ತವೆ.

ಸಂಪಾದಕೀಯ ಟೀಕೆಟಿಪ್ಪಣಿಗಳು

ಪ್ರಾಂತೀಕರಣದ ಮುನ್ನಡೆ

ಭಾಷಾನ್ವಯ ಪ್ರಾಂತ ರಚನೆಯ ವಿಷಯವನ್ನು ಹಿಂದೀ ರಾಜ್ಯ ಘಟನೆಯ ಕರಡಿನಲ್ಲಿ ಹಾಕಿದಂದಿನಿಂದ ಅದಕ್ಕೆ ಹೆಚ್ಚು ಮಹತ್ವ ಬಂದಿದೆ. ಗಡಿ ನಿರ್ಣಯಿಸುವಾಗ ಆಗುವ ತಿಕ್ಕಾಟವನ್ನು ತಪ್ಪಿಸುವುದಕ್ಕಾಗಿ ಮಹಾತ್ಮಾ ಗಾಂಧಿಯವರು ಸೂಚಿಸಿದ್ದಂತೆ ಆಯಾ ಪ್ರಾಂತೀಯ ಪ್ರಮುಖರು ಈ ದಿಶೆಯಲ್ಲಿ ಪ್ರಯತ್ನಿಸಬೇಕೆಂದು ನಿರ್ಧರಿಸಲಾಗಿದೆ. ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿಯ ಅಧ್ಯಕ್ಷರು ಇದರಲ್ಲಿ ಧುರೀಣತ್ವವನ್ನು ವಹಿಸಿ ಉಳಿದ ಪ್ರಾಂತೀಯ ಧುರೀಣರನ್ನು ಕರವೊಯ್ದುಕೊಂಡು ವಿಚಾರವಿನಿಮಯ ನಡೆಸಿದ್ದಾರೆ. ಕಾಂಗ್ರೆಸ ಅಧ್ಯಕ್ಷರಾದ ಬಾಬೂ ರಾಜೇಂದ್ರ ಪ್ರಸಾದರ ಸಲಹೆಯನ್ನೂ ಆಗಾಗ ಪಡೆಯುತ್ತಿರುವರು. ಈ ಸಂಬಂಧದಲ್ಲಿ ಅವರು ಪತ್ರಿಕೆಗಳಿಗೆ ಸುದೀರ್ಘ ಪ್ರಕಟನೆ ಕೊಟ್ಟು ಪರಿಸ್ಥಿತಿಯನ್ನೆಲ್ಲ ಜನತೆಗೆ ತಿಳಿಸಿರುವರು. ಗಡಿ ನಿರ್ಣಾಯಕ ಸಮಿತಿಗಳನ್ನು ಈ ತಿಂಗಳ ಕೊನೆಯೊಳಗಾಗಿ ನೇಮಿಸತಕ್ಕದ್ದೆಂದು ಮಹಾರಾಷ್ಟ್ರ, ಕರ್ನಾಟಕ, ಕೇರಳ, ಆಂಧ್ರ, ತಮಿಳುನಾಡು ಕಾಂಗ್ರೆಸ ಅಧ್ಯಕ್ಷರ ಸಭೆಯಲ್ಲಿ ನಿರ್ಧರಿಸಲಾಗಿದೆ. ಮೈಸೂರನ್ನು ಕರ್ನಾಟಕದಲ್ಲಿ ಸೇರಿಸುವ ಸಂಬಂಧದಲ್ಲಿ ಅಲ್ಲಿಯ ಪ್ರಮುಖರೊಡನೆ ಮತ್ತು ಮಹಾರಾಜಾ ಸರಕಾರದ ಗೂಡ ವಿಚಾರ ವಿನಿಮಯ ಮಾಡಲು ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿಯ ಅಧ್ಯಕ್ಷರು ಒಂದು ಸಂಧಾನ ಸಮಿತಿಯನ್ನು ಈಗಾಗಲೆ ನೇಮಿಸಿರುವರು. ಮೈಸೂರು ಕಾಂಗ್ರೆಸ್ಸಿನವರೂ ಇಂಥದೊಂದು ಸಮಿತಿಯನ್ನು ನೇಮಿಸುವರು. ಈ ಎರಡೂ ಸಮಿತಿಗಳು ಸೇರಿ ಈ ಪ್ರಶ್ನೆಯನ್ನು ಇತ್ಯರ್ಥ ಮಾಡಬೇಕಾಗಿದೆ. ಮೈಸೂರು ಮಹಾರಾಜರು ಕರ್ನಾಟಕದ ಘಟನಾತ್ಮಕ ಅರಸರಾಗಲು ಒಪ್ಪಿ ಕರ್ನಾಟಕದ ಜನರು ಅವರನ್ನು ತಮ್ಮ ಪ್ರಾಂತದ ವರಿಷ್ಠರೆಂದು ಒಪ್ಪಿಕೊಳ್ಳುವರೆಂದೂ ಪ್ರಾಂತೀಯ ಕಾಂಗ್ರೆಸ ಸಮಿತಿಯ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರ ಅಭಿಪ್ರಾಯ. ಹೀಗೆ ಈ ಸಮಿತಿಗಳೆಲ್ಲ ಸೇರಿ ಆಯಾ ಪ್ರಾಂತಗಳ ಗಡಿಗಳನ್ನು ನಿರ್ಧರಿಸಿಬಿಟ್ಟದ್ದಾದರೆ ವಿಶೇಷ ತೊಡಕು ತೊಂದರೆಗಳಿಲ್ಲದೆ ಹೊಸ ಘಟನೆ ಜಾರಿಯಲ್ಲಿ ಬರುವದರ ಜೊತೆಯಲ್ಲಿಯೆ ಭಾಷಾನ್ವಯ ಪ್ರಾಂತಗಳೂ ಅಸ್ತಿತ್ವದಲ್ಲಿ ಬರುತವೆಂಬಲ್ಲಿ ಸಂದೇಹವಿಲ್ಲ. ಆಯಾ ಪ್ರಾಂತದ ಧುರೀಣರು ಮತ್ತು ಕಾರ್ಯಕರ್ತರು ಸ್ವಲ್ಪ ಉದಾರ ಧೋರಣವನ್ನು ವಹಿಸಿ ಗಡಿಗಳ ಇತ್ಯರ್ಥ ಮಾಡಲಣಿಯಾದರೆ ಇದು ಬೇಗ ಸಾಧ್ಯವಾಗುವದೆಂಬುದು ಸುಸ್ಪಷ್ಟವಾಗಿದೆ.

ಕಾಳಿನ ಕೂಗು !

ಕರ್ನಾಟಕದಲ್ಲಿ ಹಲವೆಡೆ ಇದೇ ತಾನೆ ಕಾಳಿನ ಸುಗ್ಗಿಯಾಗಿದ್ದರೆ, ಇನ್ನು ಹಲವೆಡೆ ಇನ್ನೂ ಆಗಲಿದೆ. ಹೀಗಿದ್ದರೂ ಈಗಲೆ ಜೋಳ, ಅಕ್ಕಿ, ಗೋದಿ ಮೊದಲಾದ ಜೀವನಾವಶ್ಯಕ ಕಾಳುಗಳ ಧಾರಣೆ ಮಿತಿಮೀರಿ ಏರಹತ್ತಿದೆ. ಲಾಭಬಡಕ ವ್ಯಾಪಾರಸ್ಥರು ಮನಬಂದಂತೆ ಧಾರಣೆಗಳನ್ನೇರಿಸಿ ಪ್ರಾಂತದ ಹೊರಗೆ ಕಾಳುಗಳನ್ನು ಸಾಗಿಸಹತ್ತಿದ್ದರಿಂದ ಸ್ಥಳೀಯರಿಗೆ ಯೋಗ್ಯ ದರಗಳಲ್ಲಿ ಆಹಾರ ಪದಾರ್ಥ ಸಿಕ್ಕದಂತಾಗಿದೆ. ಆಹಾರ ಪದಾರ್ಥಗಳ ಮೇಲಿನ ನಿಯಂತ್ರಣವನ್ನು ತೆಗೆಯಲು ಸರಕಾರವನ್ನು ಒತ್ತಾಯ ಪಡಿಸುವಾಗ ಮಹಾತ್ಮಾ ಗಾಂಧಿಯವರು ವ್ಯಾಪಾರಸ್ಥರ ಮೇಲೆ ಮತ್ತು ಒಕ್ಕಲಿಗರ ಮೇಲೆ ಬಹಳ ವಿಶ್ವಾಸವಿಟ್ಟರು. ಅವರು ಅತ್ಯಾಶೆಗೊಳಗಾಗಿ ಬಂಗಾರದ ತತ್ತಿಗಳನ್ನಿಡುವ ಕೋಳಿಯನ್ನೇ ಕೊಲ್ಲಲಿಕ್ಕೆ ಪ್ರಯತ್ನಿಸಲಿಕ್ಕಿಲ್ಲೆಂದು ನಂಬಿದ್ದರು. ತಮ್ಮ ನೈತಿಕ ಬಲದ ಪ್ರಭಾವ ಅವರ ಮೇಲೆ ಹೆಚ್ಚಾಗಿ ಬಿದ್ದು ಯೋಗ್ಯ ದರಗಳಿಗೆ ಆಹಾರ ಪದಾರ್ಥಗಳು ಜನತೆಗೆ ಸಿಕ್ಕುವಂತಾಗಬಹುದೆಂದೂ ಅವರು ಭಾವಿಸಿದ್ದರು. ತಜ್ಞನಿಯೊಬ್ಬನ ಮಾತು ಕೇಳಿ ನಿಯಂತ್ರಣಗಳನ್ನು ತೆಗೆಯಬೇಡಿರಿ, ಇದರಿಂದ ಬಂಗಾಲ ಬರಗಾಲವನ್ನೇ ಬರಮಾಡಿಕೊಂಡಂತಾಗುವದು ಎಂದು ಮುಂತಾಗಿ ಉಚ್ಚ ಅಧಿಕಾರಿಗಳೊಬ್ಬರು ಸರಕಾರಕ್ಕೆ ಎಚ್ಚರಿಕೆ ಕೊಟ್ಟರೂ ಅವರು ಗಾಂಧೀಜಿಯ ಮೇಲಿನ ಶ್ರದ್ಧೆ ಮತ್ತು ವ್ಯಾಪಾರಸ್ಥರ ಪ್ರಮುಖರು ಅವರಿಗೆ ಕೊಟ್ಟ ಆಶ್ವಾಸನ ಇವುಗಳ ಮೇಲೆ ಭಾರಹಾಕಿ ನಿಯಂತ್ರಣವನ್ನು ತೆಗೆದುಹಾಕಿದರು; ಆದರೆ ಇಷ್ಟು ಅಲ್ಪಾವಧಿಯಲ್ಲಿಯೇ ಅದರ ಪರಿಣಾಮ ಇಷ್ಟೊಂದು ಹಾಹಾಕಾರವನ್ನುಂಟುಮಾಡಿರುವುದನ್ನು ನೋಡಿದರೆ ಯಾರಿಗಾದರೂ ವಿಷಾದವಾಗದಿರದು. ಧಾರವಾಡದಲ್ಲಿ ಕಳೆದ ಮಂಗಳವಾರ ಸಂತೆಯ ದಿನ ನಡೆದ ಪ್ರಕರಣದಲ್ಲಿ ಖಾಸಗಿ ದ್ವೇಷ ಕೂಡಿದ್ದರೂ ಹಸಿದ ಹೊಟ್ಟೆಯ ಕೂಗಿನ ಪರಿಣಾಮದ ಮೂಲಕವೂ ಹಾಗಾಯಿತೆಂದು ಹೇಳಿದರೆ ತಪ್ಪಾಗದು. ಪರಿಸ್ಥಿತಿ ಬೇಗ ಸುಧಾರಿಸದಿದ್ದರೆ ಬೇರೆ ಸ್ಥಳಗಳಲ್ಲಿಯೂ ಇದರ ಪುನರಾವೃತ್ತಿ ಎಲ್ಲಿ ಆಗುವದೊ ಎಂಬ ಅಂಜಿಕೆ! ಈ ಪರಿಸ್ಥಿತಿಯನ್ನು ಸುಧಾರಿಸುವ ಹೊಣೆ ಸಂಪೂರ್ಣವಾಗಿ ವ್ಯಾಪಾರಸ್ಥರ ಮೇಲಿದೆಯೆಂದು ಹೇಳಿದರೆ ತಪ್ಪಾಗದು. ಅವರು ತಮ್ಮ ಸಂಘಗಳ ಮುಖಾಂತರ ಅಗ್ಗ ದರಗಳಿಂದ ಕಾಳು ಮಾರುವದನ್ನು ಯೋಜಿಸಬೇಕು. ಆಯಾ ಜಿಲ್ಹಾ ಗಡಿಗಳನ್ನು ದಾಟಿ ಸಿಕ್ಕಸಿಕ್ಕ ದರಗಳಂತೆ ಕಾಳು ಹೊರಗೆ ಹೋಗದಂತೆ ಸ್ವಯಂ ನಿರ್ಬಂಧವನ್ನು ಹಾಕಿಕೊಳ್ಳತಕ್ಕದ್ದು. ಸರಕಾರದವರೂ ಪರಿಸ್ಥಿತಿಯು ತೀರ ಹದಗೆಡದಂತೆ ತೀವ್ರ ಉಪಾಯ ಕೈಕೊಂಡು ಎಲ್ಲರಿಗೂ ಆಹಾರ ಪದಾರ್ಥಗಳು ಸಿಕ್ಕುವಂತೆ ನೋಡಿಕೊಳ್ಳಬೇಕೆಂದು ಆಗ್ರಹ ಪಡಿಸುತ್ತೇವೆ.

ಅಭಿನಂದನೀಯ

ಮುಂಬಯಿ, ಮದ್ರಾಸ, ದಿಲ್ಲಿ ಮೊದಲಾದ ಕಡೆ ಮನುಷ್ಯರೆಳೆವ ವಾಹನಗಳನ್ನು ಈಗಲೂ ಕಾಣಬಹುದಾಗಿದೆ. ಬಿಸಿಲಿನಲ್ಲಿ ಒಂದೇ ಸಮನೆ ಬೆವರು ಸುರಿಸುತ್ತ ತೇಕುತ್ತ ವಾಹನಗಳನ್ನು ಜಗ್ಗುವುದನ್ನು ನೋಡಿದರೆ ಎಂಥ ಕಲ್ಲೆದೆಯವನ ಮನಸ್ಸೂ ಕರಗದಿರದು ಕೇವಲ ಹೊಟ್ಟೆ ಹೊರೆದುಕೊಳ್ಳುವುದಕ್ಕಾಗಿ ಅವರು ಪಶುಗಳಿಂದ ಅಸಾಧ್ಯವಾದ ಇಂಥ ಕೆಲಸವನ್ನು ಕೂಡ ಮಾಡುತ್ತಿರುವುದು ನಿಜವಾಗಿಯೂ ಶೋಚನೀಯವಾಗಿದೆ. ಗುಲಾಮಗಿರಿ ದೇಶದಲ್ಲಿ ಇದ್ದಾಗ ಈ ಬಗೆಯ ನೋಟ ಸಾರ್ವತ್ರಿಕವಾಗಿದ್ದಿತು. ಆದರೀಗ ದೇಶವು ಸ್ವತಂತ್ರವಾಗಿದ್ದರಿಂದ ಪ್ರಜಾಪ್ರಭುತ್ವ ಸರಕಾರವು ಇಂಥ ಹೀನಕೃತ್ಯವನ್ನೆಂದಿಗೂ ಸಹಿಸದು. ಅಂತೆಯೇ ಮುಂಬಯಿ ಸರಕಾರದವರು ಇದೇ ಎಪ್ರಿಲ ಒಂದರಿಂದ ಸಾಯಕಲ್ ರಿಕ್ಷಾಗಳಿಗೆ ಲಾಯಸೆನ್ಸ ಕೊಡಬಾರದೆಂದು ನಿರ್ಧರಿಸಿ ಆ ಬಗ್ಗೆ ಕಾನೂನಿನಲ್ಲಿ ತಿದ್ದುಪಡಿಯೊಂದನ್ನು ಮಾಡಿಕೊಂಡಿರುವರು. ಈ ವರೆಗೆ ಇಂಥ ವಾಹನಗಳಿಗೆ ಲಾಯಸನ್ಸ ನಿರಾಕರಿಸಲು ಸರಕಾರಕ್ಕೆ ಬರುತ್ತಿರಲಿಲ್ಲ. ಅಂತೆಯೇ ಕಾನೂನಿನಲ್ಲಿ ಅವಶ್ಯಕ ತಿದ್ದುಪಡಿ ಮಾಡಿಕೊಳ್ಳಬೇಕಾಯಿತು. ಮುಂಬಯಿ ಸರಕಾರದವರು ಈ ಮಹತ್ಕಾರ್ಯದಲ್ಲಿ ಮುಂದಾದುದು ಅಭಿನಂದನೀಯವಾಗಿದೆ. ಆದರೆ ಇಷ್ಟರಿಂದ ತಮ್ಮ ಕರ್ತವ್ಯವಾಯಿತೆಂದು ಸರಕಾರ ತಿಳಿಯಬಾರದು. ಈ ಉದ್ಯೋಗ ಮಾಡುತಿದ್ದವರು ಇನ್ನು ಮುಂದೆ ನಿರುದ್ಯೋಗಿಗಳಾಗುವರು. ಅವರಿಗೆಲ್ಲ ಉದ್ಯೋಗ ದೊರಕಿಸಿ ಕೊಡುವುದು ಸರಕಾರದ ಕರ್ತವ್ಯವಾಗಿದೆ. ಈ ಸಮಸ್ಯೆಯನ್ನು ಸರಕಾರದವರು ಸಮಾಧಾನಕರವಾಗಿ ಬಿಡಿಸುವರೆಂದು ನಂಬುತ್ತೇವೆ.

ಭಾರತದ ಭವಿಷ್ಯನ್ನಿರ್ಮಾಣ

ಭಾರತ ನೂರೈವತ್ತು ವರುಷಗಳ ದಾಸ್ಯದ ನಂತರ ಸ್ವಾತಂತ್ರ್ಯವನ್ನು ಪಡೆದಿದೆ. ದಾಸ್ಯದಲ್ಲಿದ್ದಾಗ ಅದು ಎಲ್ಲ ದೃಷ್ಟಿಯಿಂದ ಹಿಂದೆ ಬಿದ್ದಿತ್ತು. ಪ್ರತಿಯೊಂದು ವಿಷಯದಲ್ಲಿ ಬ್ರಿಟನದ ಮಾರ್ಗದರ್ಶನವನ್ನಪೇಕ್ಷಿಸುತ್ತಿದ್ದಿತು. ಅಂತೆಯೆ ಅದರ ಭವಿಷ್ಯತ್ತು ಕಾರ್ಮೋಡಗಳಿಂದ ತುಂಬಿದ್ದಿತು. ಆದರೆ ಇದೀಗ ಅದು ಸ್ವಾತಂತ್ರ್ಯವನ್ನು ಪಡೆದದ್ದರಿಂದ ತನ್ನ ಉಜ್ವಲ ಭವಿಷ್ಯವನ್ನು ನಿರ್ಮಿಸಿಕೊಳ್ಳಲಣಿಯಾದುದು ಸ್ವಾಭಾವಿಕ. ಸ್ವಾತಂತ್ರ್ಯ ಸಂಪಾದನೆಯ ನಂತರ ದೇಶದಲ್ಲಿ ಉಂಟಾದ ಅಶಾಂತ ಪರಿಸ್ಥಿತಿಯ ಮೂಲಕ ಈ ಕಾರ್ಯ ಸ್ವಲ್ಪ ಮುಂದೆ ಬಿದ್ದುದು ನಿಜ. ಆದರೆ ಒಮ್ಮೆ ಶಾಂತಿ ಪ್ರಸ್ಥಾಪಿತವಾದ ನಂತರ ಭಾರತ ತನ್ನ ಪ್ರಾಚೀನ ವೈಭವವನ್ನು ಪಡೆಯಲು ಬಹಳ ದಿವಸ ಹತ್ತಲಿಕ್ಕಿಲ್ಲ. ಆದರೆ ಇದಕ್ಕಾಗಿ ಎಲ್ಲ ಭಾರತೀಯರು ತಮ್ಮ ಅಳಿಲು ಸೇವೆಯನ್ನು ಸಲ್ಲಿಸುವುದು ಮಾತ್ರ ಅವಶ್ಯವೆಂದು ಬೇರೆ ಹೇಳಬೇಕಿಲ್ಲ. ಈ ಮಹಾಕಾರ್ಯದಲ್ಲಿ ವಿಶ್ವವಿದ್ಯಾಲಯಗಳು ಏನುಮಾಡಬಲ್ಲವೆಂಬುದನ್ನು ದಿಲ್ಲಿ ವಿಶ್ವವಿದ್ಯಾಲಯದ ಕುಲಪತಿಗಳಾದ ಲಾರ್ಡ ಮೌಂಟ ಬ್ಯಾಟನ್‌ರು ಅದರ ರಜತ ಮಹೋತ್ಸವ ಸಮಾರಂಭದ ಕಾಲಕ್ಕೆ ತಿಳಿಸಿ ಕೊಟ್ಟಿರುವನು. ಸಾರ್ವಜನಿಕರ ಜೀವನ ಮಟ್ಟವನ್ನು ಎತ್ತರಿಸಬೇಕೆಂಬ ಸರಕಾರೀ ಧೋರಣವನ್ನು ಕಾರ್ಯಕಾರಿಯಾಗಿಸಲು ಕಾರ್ಯಕರ್ತರು ಬೇಕಾಗಿದ್ದಾರೆ. ವಿಶ್ವವಿದ್ಯಾಲಯಗಳು ಈ ಕಾರ್ಯಕರ್ತರನ್ನು ಒದಗಿಸಬಲ್ಲವು ಎಂದು ಕುಲಪತಿಗಳು ಅಧಿಕಾರವಾಣಿಯಿಂದ ಹೇಳಿದ್ದಾರೆ ಹಿಂದುಸ್ಥಾನ ಸರ್ಕಾರವಿಂದು ಮಾಡಬೇಕಾದ ಕಾರ್ಯ ಅಪಾರವಾಗಿದೆ. ಎಲ್ಲ ಜನರಿಗೂ ಸಾಕಷ್ಟು ಅನ್ನ, ವಸ್ತ್ರ, ವಸತಿ, ವೈದ್ಯಕೀಯ ಸಹಾಯ ಮತ್ತು ಶಿಕ್ಷಣ ಸೌಕರ್ಯ ದೊರೆಯುವಂತೆ ಸರಕಾರ ಯೋಜಿಸಬೇಕಾಗಿದೆ. ಭಾರತದ ನೈಸರ್ಗಿಕ ಸಂಪತ್ತಿನ ಸಂಪೂರ್ಣ ಉಪಯೋಗ ಮಾಡಿಕೊಂಡು ದೇಶದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಬಹುದಾಗಿದೆ. ಪದವೀಧರ ಕಾರ್ಯಕರ್ತರು ಇಂಥ ಕಾರ್ಯಗಳನ್ನು ಕೈಕೊಂಡರೆ ಸರಕಾರದ ಉದ್ದೇಶ ಬೇಗ ಸಿದ್ಧಿಸುವದಲ್ಲದೆ ಭಾರತವೂ ಬೇಗ ಸರ್ವಾಂಗ ಸುಂದರವಾದ ರಾಷ್ಟ್ರವಾಗಿ ಪರಿಣಮಿಸುವದು. ಪದವೀಧರ ಭಾರತೀಯ ತರುಣರು ಕೇವಲ ಜೀವನ ಸಾಗಿಸುವದಷ್ಟೇ ತಮ್ಮ ಕೆಲಸವೆಂದು ಭಾವಿಸದೆ ಭಾರತದ ಭವಿಷ್ಯ ನಿರ್ಮಾಣದಲ್ಲಿ ತಮ್ಮ ಅಳಿಲಸೇವೆಯನ್ನು ಸಲ್ಲಿಸುವದು ಇತಿಕರ್ತವ್ಯವೆಂದು ತಿಳಿದುಕೊಂಡು ಕಾರ್ಯಪ್ರವೃತ್ತರಾಗುವರೆಂದು ನಂಬುತ್ತೇವೆ.

ಕೊಲ್ಹಾಪುರವೆತ್ತ ಸಾಗಿದೆ ?

ದಕ್ಷಿಣ ಸಂಸ್ಥಾನಗಳೆಲ್ಲ ಹಿಂದೀ ಒಕ್ಕೂಟದಲ್ಲಿ ವಿಲೀನಹೊಂದಿ ತಮ್ಮ ಮತ್ತು ತಮ್ಮ ಪ್ರಜೆಗಳ ಭವಿತವ್ಯವನ್ನು ಉಜ್ವಲಗೊಳಿಸಿಕೊಂಡವು. ಈ ಸಂಸ್ಥಾನಗಳಿಗೆ ಹಿರಿಯದಾದ ಕೊಲ್ಹಾಪುರ ಮಾತ್ರವಿನ್ನೂ ಅಲೆದಾಡುತಿದೆ. ಅದೀಗ ಎರಡು ಪಕ್ಷಗಳ ಕಾಳಗಲಾಟಿಕ್ಕೊಳಗಾಗಿ ಒಂದು ಬಗೆಯಿಂದ ಪ್ರಗತಿಯನ್ನು ಹಿಂದೆ ದೂಡಿಕೊಳ್ಳಹತ್ತಿದೆ. ಛತ್ರಪತಿಗಳ ಕೃಪಾಛತ್ರದಲ್ಲಿಯೇ ಸುರಾಜ್ಯವನ್ನು ಕಾಣುವಾ ಎಂದು ಒಂದು ಪಕ್ಷ ಅಭಿಪ್ರಾಯಪಟ್ಟರೆ ಮತ್ತೊಂದು ಪಕ್ಷ ಸಂಸ್ಥಾನದಲ್ಲಿಯೆ ಪ್ರಬಲವಾದ ಪಕ್ಷ ಹಿಂದೀ ಒಕ್ಕೂಟದಲ್ಲಿ ವಿಲೀನಹೊಂದಿ ಉಳಿದ ಸಂಸ್ಥಾನಗಳೊಡನೆ ಸಮರಸಹೊಂದುವಾ ಎಂದು ಹೇಳುತಿರುವದು. ಮೊದಲನೆಯ ಪಕ್ಷ ಒಂದುಬಗೆಯಿಂದ ಛತ್ರಪತಿಗಳ ಮತ್ತು ಅಧಿಕಾರಿಗಳ ಕೈಗೊಂಬೆಯಂತೆ ವರ್ತಿಸಹತ್ತಿದೆ ಎಂದು ಹೇಳಿದರೆ ತಪ್ಪಾಗದು. ಇತ್ತೀಚೆ ಬೆಳಗಾವಿ ಜಿಲ್ಹೆಯಲ್ಲಿ ಮತ್ತು ಕೊಲ್ಹಾಪುರ ಸಂಸ್ಥಾನದಲ್ಲಿ ನಡೆದ ದುರ್ಘಟನೆಗಳಿಗೆ ಕೊಲ್ಹಾಪುರದ ಜನರೇ ಕಾರಣರೆಂದು ಹೇಳುತಿರುವದು ನಿಜವಾಗಿದ್ದರೆ, ಈ ಪರಿಸ್ಥಿತಿಯಲ್ಲಿ ಛತ್ರಪತಿಗಳ ಆಡಳಿತಕ್ಕಿಂತ ಹಿಂದೀ ಒಕ್ಕೂಟದಲ್ಲಿ ವಿಲೀನವಾಗಿಹೋಗುವದು ಹೆಚ್ಚು ಸಮಯೋಚಿತ ಮತ್ತು ಲಾಭಕರವಾದುದು, ಪ್ರಜಾಪ್ರಭುತ್ವದ ಈ ಯುಗಕ್ಕೆ ಅನುಗುಣವಾದುದು. ಪನ್ಹಾಳಾ ಕೋಟೆಯಲ್ಲಿ ಕೂಡಿದ್ದ ಪ್ರಜಾಪರಿಷತ್ತಿನ ಮಧ್ಯವರ್ತಿ ಮಂಡಳದ ಅಧ್ಯಕ್ಷಸ್ಥಾನದಿಂದ ಮಾತಾಡುತ್ತ ಶ್ರೀ ಶಂಕರರಾವ ಮೋರೆಯವರು ಈ ಸಂಬಂಧದಲ್ಲಿ ತಕ್ಕ ಎಚ್ಚರಿಕೆಯನ್ನೂ ಸಲಹೆಯನ್ನೂ ಕೊಟ್ಟಿರುವರು. ಅಧಿಕಾರವು ಪ್ರಜೆಗಳನ್ನು ಕೂಡಿದ್ದು; ಅವರೇ ಸಂಸ್ಥಾನದ ಭವಿತವ್ಯವನ್ನು ನಿರ್ಣಯಿಸತಕ್ಕವರು. ಈ ಬಗ್ಗೆ ಮತಗಣನೆಯನ್ನು ಮಾಡಿ ನಿರ್ಧರಿಸತಕ್ಕದ್ದು ಎಂದು ಹೇಳಿ ವಿಲೀನೀಕರಣದ ಪ್ರಶ್ನೆಯನ್ನು ಮುಂದೂಡಿದರೆ ಪರಿಸ್ಥಿತಿ ಗಂಭೀರವಾಗುವದು. ಮುಂದೆ ಅದನ್ನು ಬಿಡಿಸಲು ಸರದಾರ ಪಟೇಲ ಮತ್ತು ಸರದಾರ ಬಲದೇವ ಸಿಂಗರನ್ನು ಕರೆಯಿಸಬೇಕಾಗುವದೆಂದೂ ಎಚ್ಚರಿಕೆ ಕೊಟ್ಟರು. ಆದರೆ ಶ್ರೀ ಮಾಧವರಾವ ಬಾಗಲರು ಮಹಾರಾಜರ ಕೃಪಾಛತ್ರದಲ್ಲಿಯೇ ರೈತ ಕೂಲಿಕಾರ ರಾಜ್ಯ ಸ್ಥಾಪಿಸುವ ತಮ್ಮ ನಿರ್ಧಾರವನ್ನು ಒತ್ತಿ ಹೇಳಿದರು. ಮಾಧವರಾವ ಬಾಗಲರ ಮೇಲೆ ಅವಿಶ್ವಾಸ ಗೊತ್ತುವಳಿಯು ಮಧ್ಯವರ್ತಿ ಸಭೆಯಲ್ಲಿ ಸ್ವೀಕೃತವಾಗಿ ರತ್ನಪ್ಪ ಕುಂಭಾರರು ತಾತ್ಪೂರ್ತಿಕ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಇದೆಲ್ಲವನ್ನು ನೋಡಿದರೆ ಕೊಲ್ಹಾಪುರದಲ್ಲಿ ಪ್ರಜಾಪರಿಷತ್ತಿನಲ್ಲಿಯೆ ಎರಡು ಪಕ್ಷಗಳಾಗಿ ತಿಕ್ಕಾಟವುಂಟಾಗಿದೆಯೆಂಬುದು ಸ್ಪಷ್ಟವಾಗಿದೆ. ಶ್ರೀ ಮೋರೆಯವರು ಹೇಳಿದಂತೆ ಮಧ್ಯವರ್ತಿ ಮಂಡಳದಲ್ಲಿ ನಿರ್ಣಯವಾದಂತೆ ಸಾರ್ವತ್ರಿಕ ಮತಗಣನೆಯಿಂದಲೆ ಈ ಪ್ರಶ್ನೆಯನ್ನು ಬಿಡಿಸುವದು ಯುಕ್ತವಾಗಿದ್ದು ಛತ್ರಪತಿ ಸರಕಾರದವರು ಮತ್ತು ಹಿಂದುಸ್ಥಾನ ಸರಕಾರದ ಸಂಸ್ಥಾನ ಖಾತೆಯವರು ಅತ್ತ ಗಮನಿಸಬೇಕೆಂದು ಸೂಚಿಸುತ್ತೇವೆ,

ಇಂಗ್ಲಂಡದ ಆರ್ಥಿಕ ದುಸ್ಥಿತಿ

ಕಳೆದ ಮಹಾಯುದ್ಧದ ನಂತರ ಇಂಗ್ಲಂಡದ ಆರ್ಥಿಕ ಪರಿಸ್ಥಿತಿ ಬಹಳ ಹದಗೆಟ್ಟಿದೆ. ತನ್ನ ಕ್ರಿಯಾಶಕ್ತಿಯನ್ನೂ ಕಾರ್ಯ ಕ್ಷಮತೆಯನ್ನೂ ಕಾಯ್ದುಕೊಳ್ಳಬೇಕಾದರೆ ಮಾರ್ಶಲ್ ಯೋಜನೆಯ ಸಹಾಯವನ್ನು ಅದು ಪಡೆಯಲೇಬೇಕಾಗುವದು. ಈ ಸಹಾಯ ಪಡೆದು ಇಂಗ್ಲಂಡದಲ್ಲಿ ಇಲ್ಲವೆ ಸ್ಟರ್ಲಿಂಗ ಪ್ರದೇಶದಲ್ಲಿ ಅಧಿಕ ಮತ್ತು ಉಳಿದ ಪೂರೈಕೆಯ ಹೊಸ ಅಗರಗಳನ್ನು ಬೆಳೆಸಬೇಕು. ಕೇವಲ ತನ್ನ ಪ್ರಜೆಗಳಿಗೆ ಹೆಚ್ಚಿನ ಸುಖ ಸೌಕರ್ಯಗಳನ್ನು ಒದಗಿಸುವತ್ತ ಲಕ್ಷ ಹಾಕಬಾರದು ಎಂದು ಮುಂತಾಗಿ ಸರಕಾರದವರು ಹೊರಡಿಸಿದ ಸುದೀರ್ಘ ವರದಿಯು ಸಾರಿದೆ. ಈ ವರದಿಯನ್ನು ಅವಲೋಕಿಸಿದ್ದಾದರೆ ಇಂಗ್ಲಂಡದ ಆರ್ಥಿಕ ಪರಿಸ್ಥಿತಿ ಎಷ್ಟು ಕೆಟ್ಟಿದೆ ಎಂಬುದು ಸ್ಪಷ್ಟವಾಗುವದು. ಕಳೆದ ಮಹಾಯುದ್ಧದ ಮೊದಲು ಜಗತ್ತಿನಲ್ಲೆಲ್ಲ ಪ್ರಥಮ ದರ್ಜೆಯ ರಾಷ್ಟ್ರವೆಂದು ಮೆರೆದು ಸೂರ್ಯನು ಮುಳುಗಲಾರದಷ್ಟು ಪ್ರದೇಶದಲ್ಲಿ ಸಾಮ್ರಾಜ್ಯವನ್ನು ಪ್ರಸ್ಥಾಪಿಸಿದ್ದ ಬ್ರಿಟನು ಇಂದು ಇಷ್ಟೊಂದು ಆರ್ಥಿಕ ಅವನತಿಗೆ ಈಡಾಗದೇಕಾಗದು ದೈವದುರ್ವಿಪಾಕವು. ಆರ್ಥಿಕ ಪರಿಸ್ಥಿತಿ ಸುಧಾರಿಸಬೇಕಾದರೆ ಉತ್ಪಾದನೆಯನ್ನು ಹೆಚ್ಚು ಮಾಡಿ ನಿರ್ಯಾತವನ್ನು ಬೆಳೆಸುವದವಶ್ಯವೆಂದು ಸೂಚಿಸಲಾಗಿದೆ. ಆಹಾರ ಪದಾರ್ಥಗಳ ಆಯಾತವೂ ಕಡಮೆಯಾಗಲಿಕ್ಕೆಬೇಕೆಂಬುದು ನಿಜ. ಆದರೆ ಈಗಲೇ ಅದು ಸಾಕಷ್ಟು ಕಡಮೆ ಆಗಿದ್ದು ಇನ್ನು ಕಡಮೆ ಮಾಡುವದೆಂದರೆ ಕಟ್ಟಾ ಮಾರಿನ ಮೇಲೆಯೇ ಗದೆಯನ್ನು ಹಾಕಿದಂತಾಗುವದು ಸರಕಾರದ ಅಭಿಪ್ರಾಯ. ಏನೇ ಆದರೂ ಅಮೇರಿಕೆಯ ಸಹಾಯ ಇಂಗ್ಲಂಡಿಗೆ ಅತ್ಯವಶ್ಯವೆಂಬುದು ಸ್ಪಷ್ಟವಾಗಿದೆ. ಮಹಾಯುದ್ಧದ ನಂತರ ಇಂಗ್ಲಂಡವು ಕಡೆಯ ದರ್ಜೆಯ ರಾಷ್ಟ್ರವಾಗುವದೆಂದು ಪಂಡಿತ ಜವಾಹರಲಾಲರು ಯುದ್ಧದ ಪ್ರಾರಂಭದಲ್ಲಿಯೇ ಹೇಳಿದ್ದರು. ಆ ಮಾತು ಈಗ ಸತ್ಯವಾಗಿ ಪರಿಣಮಿಸಹತ್ತಿದೆ. ಇದರ ಪರಿಣಾಮ ಸದ್ಯದ ಮಂತ್ರಿಮಂಡಳದ ಮೇಲೆ ಎಂತಾಗುವದೋ ನೋಡಬೇಕಾಗಿದೆ !

ಪಾಶ್ಚಾತ್ಯ ರಾಷ್ಟ್ರಗಳ ಒಕ್ಕೂಟ

ಈ ರೀತಿ ಬ್ರಿಟನ್ನದ ಆರ್ಥಿಕ ಸ್ಥಿತಿ ಕೆಟ್ಟಂತೆ ಸಾಧಾರಣವಾಗಿ ಪಶ್ಚಿಮ ಯುರೋಪಿನ ಬಹುತರ ಎಲ್ಲ ರಾಷ್ಟ್ರಗಳ ಸ್ಥಿತಿಯೂ ದುರ್ದೆಸೆಗೀಡಾಗಿದೆ. ಅಂತೆಯೇ ಅವೆಲ್ಲ ಅಮೇರಿಕೆಗೆ ಮೊರೆ ಹೊಕ್ಕಿವೆ. ಮಾರ್ಶಲ ಯೋಜನೆಯನ್ನು ಒಪ್ಪಿಕೊಂಡು ಅದರ ಪ್ರಯೋಜನ ಪಡೆದು ತಮ್ಮ ಆರ್ಥಿಕ ದುಃಸ್ಥಿತಿಯನ್ನು ದೂರ ಮಾಡಿಕೊಳ್ಳಲು ಅವು ಅಣಿಯಾದಂತೆ ತೋರುತ್ತದೆ; ಈ ಸಂಬಂಧದಲ್ಲಿ ವಿಚಾರವಿನಿಮಯ ನಡೆಯುತ್ತ ಬಂದಿದ್ದು ಇಂದೇ ಪ್ಯಾರೀಸಿನಲ್ಲಿ ಪ್ರಾರಂಭವಾಗಲಿರುವ ಷೋಡಶ ರಾಷ್ಟ್ರಗಳ ಪರಿಷತ್ತಿನಲ್ಲಿ ಪಾಶ್ಚಾತ್ಯರಾಷ್ಟ್ರಗಳ ಒಕ್ಕೂಟ ಒಡಂಬಡಿಕೆಗೆ ಸಹಿ ಹಾಕಲಾಗುವದೆಂದು ನಿರೀಕ್ಷಿಸಲಾಗಿದೆ. ಅಮೇರಿಕ ಸಕಾಲದಲ್ಲಿ ಯುರೋಪ್ಯ ರಾಷ್ಟ್ರಗಳಿಗೆ ಸಹಾಯ ಸಲ್ಲಿಸಲು ಮುಂದೆ ಬಂದದ್ದರಿಂದ ಯುರೋಪಿನ ಪರಿಸ್ಥಿತಿ ಕೆಲಮಟ್ಟಿಗೆ ಸುಧಾರಿಸಬಹುದೆಂದು ಅಂದಾಜಿದೆ. ಆದರೆ ಅಮೇರಿಕೆಯೇನು ಇದರಲ್ಲಿ ಬಹಳ ಸ್ವಾರ್ಥತ್ಯಾಗ ಮಾಡುತಿದೆಯೆಂದು ಹೇಳಲಿಕ್ಕಾಗದು. ತನ್ನ ಸರಕುಗಳಿಗೆ ಒಳ್ಳೆ ಪೇಟೆಯನ್ನು ಸ್ಥಿರವಾಗಿ ಸಂಪಾದಿಸಿಕೊಳ್ಳಲು ಮತ್ತು ರಶಿಯದ ಗಂಡಾಂತರವನ್ನು ತಪ್ಪಿಸಿಕೊಳ್ಳಲು ಅದು ಪಾಶ್ಚಾತ್ಯ ರಾಷ್ಟ್ರಗಳ ಈ ಒಕ್ಕೂಟಕ್ಕೆ ಬೆಂಬಲಿಸುತಿದೆ. ರಶಿಯದ ರಾಜಕಾರಣವು ಇಡೀ ಜಗತ್ತಿಗೇ ವಿನಾಶಕಾರಿಯಾಗಿದೆಯೆಂದು ಅಮೇರಿಕೆ ಮತ್ತು ಉಳಿದ ಪಾಶ್ಚಾತ್ಯ ರಾಷ್ಟ್ರಗಳು ಪ್ರಚಾರ ಮಾಡಿ ಅದನ್ನು ಬಗ್ಗುಬಡಿಯುವುದಕ್ಕಾಗಿ ಇವೆಲ್ಲ ಪ್ರಯತ್ನ ನಡೆಸಿವೆ. ಬ್ರಿಟಿಶ ವಸಾಹತುಗಳೂ ಪ್ರತ್ಯಕ್ಷ ಇಲ್ಲವೆ ಅಪ್ರತ್ಯಕ್ಷವಾಗಿ ಈ ಯೋಜನೆಗೆ ಬೆಂಬಲಿಸುತಿವೆಯೆಂದು ಬ್ರಿಟಿಶ ವರ್ಗಗಳಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸಲಾಗುತಿದೆ. ಹಿಂದುಸ್ಥಾನವನ್ನು ಔಪಚಾರಿಕವಾಗಿ ಇನ್ನೂ ಕೇಳಿರದಿದ್ದರೂ ಎಲ್ಲ ಘಟನೆಗಳನ್ನು ಅದಕ್ಕೆ ತಿಳಿಸಲಾಗುತಿವೆಯೆಂದು ತಿಳಿಯುತ್ತದೆ. ಮೇಲೆ ಹೇಳಿದಂತೆ ರಶಿಯವು ಈ ಒಕ್ಕೂಟವನ್ನು ವಿರೋಧಿಸಿದೆ. ಇಷ್ಟೇ ಅಲ್ಲ ಇದರಲ್ಲಿ ಭಾವೀ ಯುದ್ಧದ ಬೀಜಗಳಿವೆಯೆಂದೂ ಅಭಿಪ್ರಾಯಪಟ್ಟಿದೆ. ಅಂತೂ ಪಂಚರಾಷ್ಟ್ರಗಳ ಈ ಒಕ್ಕೂಟವು ಜಗತ್ತಿನ ಶಾಂತಿ ಸುಖ ಸಮೃದ್ಧಿಗಳಿಗೆ ಸಹಾಯಕವಾಗುವದೋ ಇಲ್ಲವೆ ಅದಕ್ಕೆ ಮಾರಕವಾಗಿ ಮತ್ತೊಂದು ಘನಘೋರ ಯುದ್ಧಕ್ಕೆ ಆಹ್ವಾನವೀಯುವುದೋ ನೋಡಬೇಕಾಗಿದೆ. ಇಷ್ಟು ಮಾತ್ರ ನಿಜ, ಬಲಾಢ್ಯ ರಾಷ್ಟ್ರಗಳು ಸ್ವಾರ್ಥಲೋಲುಪವಾದರೆ ಜಗತ್ತಿನ ಶಾಂತಿಯೆಂದೂ ಸುಭದ್ರವಾಗಲಾರದು.

ಅಂತರರಾಷ್ಟ್ರೀಯ

ಅಮೇರಿಕದಲ್ಲಿ ಬಣ್ಣಗಾಳಿಗದ ಬೆದರಿಕೆ

ಇತ್ತೀಚೆಗೆ ನಡೆದ ಘಟನೆಗಳಿಂದ ಅಮೇರಿಕದ ಸಂಯುಕ್ತ ಸಂಸ್ಥಾನದ ದಕ್ಷಿಣ ಭಾಗದ ಜನರು ಅಧ್ಯಕ್ಷ ಟ್ರೂಮನ್ನರ ಮೇಲೆ ಮುನಿದಿದ್ದಾರೆಂದು ಸುದ್ದಿ ಬಂದಿದೆ. ಈ ಮುನಿಸು ದಿನೇ ದಿನೇ ಬೆಳೆಯುತ್ತಿದೆಯೆಂದೂ ಅದೂ ಹಾಗೇ ಬೆಳೆದರೆ ಅಂತರ್ಯುದ್ಧವೆಷ್ಟರೂ ಏಳಬಹುದೆಂದೂ ಹೇಳಲಾಗುತ್ತಿದೆ.

ಅಧ್ಯಕ್ಷ ಟ್ರೂಮನ್ನರ ಹತ್ತು ಮುದ್ದೆಗಳ ನಾಗರಿಕ ಹಕ್ಕುಗಳ ಕಾರ್ಯಕ್ರಮದ ಪಟ್ಟಿ ದಕ್ಷಿಣದ ಜಿಂ ಕ್ರೋ ಸಾರಿಗೆ ಧೋರಣದ ಬುಡಕ್ಕೆ ಲತ್ತೆ ಕೊಟ್ಟಿದೆ. ಅಲ್ಲದೆ, ಇತ್ತೀಚಿನ ಸುಪ್ರೀಂ ಕೋರ್ಟಿನ ನಿರ್ಣಯಗಳು ದಕ್ಷಿಣದ ಕಾಲೇಜುಗಳಲ್ಲಿಯ ಪ್ರತ್ಯೇಕೀಕರಣ ಪರಂಪರೆಯನ್ನು ನಾಶಮಾಡಲು ಹೊರಟಿವೆ, ಇದರಿಂದ ದಾಕ್ಷಿಣಾತ್ಯರು ಕೆರಳಿದರು.

ಮೊದಲ ಪ್ರತಿಕ್ರಿಯೆಯೆಂದರೆ ಪ್ರಜಾಸತ್ತೆಯ ಪಕ್ಷದಿಂದ ದೂರ ಸರಿವೆನೆಂದು ದಕ್ಷಿಣ ಕೆರೋಲೀನದ ಪ್ರಜಾಪ್ರಭುತ್ವ ಸಮಿತಿಯು ಅಭಿಪ್ರಾಯಪಟ್ಟಿತು. ಟ್ರೂಮನ್ನರು ದಾಕ್ಷಿಣಾತ್ಯ ಜೀವನ ಕ್ರಮವನ್ನು ವಿರೋಧಿಸುವುದಾದರೆ ನಾವು ಅವರನ್ನು ಬಿಟ್ಟುಬಿಡಬೇಕಾಗುವದು ಎಂದು ಸಮಿತಿಯ ಸದಸ್ಯರು ಗರ್ಜಿಸಿದರು.

ಇದಲ್ಲದೆ ದಕ್ಷಿಣದ ಗವರ್ನರರದೊಂದು ಸಭೆ ಸೇರಿ, ಅದರಲ್ಲಿ ಪ್ರಜಾಸತ್ತೆಯ ಪಕ್ಷದವರು ನಮ್ಮನ್ನು ಸುಲಭವಾಗಿ ಬುಟ್ಟಿಗೆ ಹಾಕಿಕೊಂಡಿರುವದಾಗಿ ತಿಳಿದಿದ್ದರೆ ಅದು ತಪ್ಪು ಎಂದು ಎಚ್ಚರಿಕೆ ಕೊಡಲಾಯಿತು.

ಇಷ್ಟಲ್ಲದೆ ಅಲ್ಲಿ ಕುಕ್ಲಕ್ಸ್‌ಕ್ಲಾನ್ ಎಂಬೊಂದು ಪಕ್ಷವಿದೆ. ಅದು ಈ ಸಂಧಿಯನ್ನು ಅಧಿಕಾರ ಸಂಪಾದನೆಗೆ ಬಳಸಿಕೊಳ್ಳಲು ಎದ್ದುಬಿಟ್ಟಿದೆ. ನೀಗ್ರೋ ಮುಖಂಡರು ಕೂಡ ಟ್ರೂಮನ್ನರ ಧೋರಣದಿಂದ ಕ್ಷುಬ್ಧರಾಗಿದ್ದಾರೆ. ಟ್ರೂಮನ್ನರ ಧೋರಣದಿಂದ ಏನಾದರೊಂದು ಬಗೆಯಲ್ಲಿ ಕಡೆಗೆ ತಮಗೆ ಅನಿಷ್ಟವುಂಟಾಗುವದೆಂದು ಅವರು ತಿಳಿದು ಗಲಿಬಿಲಿಯಲ್ಲಿ ಬಿದ್ದಿದ್ದಾರೆ.

ಅಮೇರಿಕದ ನೀಗ್ರೋಗಳ ಸ್ಥಾನಮಾನದ ಪುಟ್ಟಿ ಎಂಥದಿದೆಯೆಂಬುದನ್ನು ಹೊಸದಾಗಿ ಹೇಳಬೇಕಾಗಿಲ್ಲ. ಅದರಿಂದ ಅವರು ವರ್ಣದ್ವೇಷದ ವಾಸನೆ ಬಂತೆಂದರೆ ನೆಗೆದುಹಾರಿ ಜಡಪಡುತ್ತಾರೆ. ಇದನ್ನೆಲ್ಲ ಗಮನಿಸಿ ಟ್ರೂಮನ್ನರು ಯಾವ ದಾರಿ ಹಿಡಿಯುತ್ತಾರೆಂಬುದನ್ನು ಕಾದು ನೋಡಬೇಕಾಗಿದೆ.

ಭದ್ರತಾ ಮಂಡಲದಲ್ಲಿ ಕಾಶ್ಮೀರದ ಪ್ರಕರಣ

ಭದ್ರತಾಮಂಡಲವು ಕಾಶ್ಮೀರ ಪ್ರಶ್ನೆಯನ್ನು ಇತ್ಯರ್ಥಪಡಿಸುವದರಲ್ಲಿ ತಳೆದ ಧೋರಣ ಹಿಂದೀ ಸರಕಾರಕ್ಕೆ ಬೇಸರ ಹುಟ್ಟಿಸಿದ್ದರೂ ಅದರ ಸಂಬಂಧವನ್ನು ಕಡಿದುಕೊಳ್ಳುವುದಿಲ್ಲವೆಂದೂ ಅದರ ನೀತಿಯಿಂದ ಮುಕ್ತರಾಗಬಯಸುವದಿಲ್ಲವೆಂದೂ ವಿದೇಶ ಮಂತ್ರಿಗಳಾದ ಪಂ. ನೆಹರು ಅವರು ಹೇಳಿಕೆ ಕೊಟ್ಟಿದ್ದು ಸುವಿದಿತವಿದೆ. ಈಗ ಸಮಸ್ಯಾ ಪರಿಹಾರ ಪ್ರಯತ್ನಕ್ಕೆ ಅಮೇರಿಕವು ವಿಶೇಷ ಆಸ್ಥೆಯಿಂದ ಸಲಹೆ ಮಾಡಬಂದಿದೆಯೆಂದು ತಿಳಿಯುತ್ತದೆ. ಹಿಂದುಸ್ತಾನ ಪಾಕಿಸ್ತಾನಗಳೆರಡೂ ಒಪ್ಪುವಂಥ ಒಂದು ರಾಜಿ ಪಂಚಾಯತಿಕೆಯ ಸೂತ್ರವನ್ನು ರಚಿಸಲು ಅಮೇರಿಕದ ಪ್ರತಿನಿಧಿ ಮಂಡಲವು ಉಳಿದ ಪ್ರ. ಮಂಡಲಗಳೊಂದಿಗೆ ಚರ್ಚೆ ನಡೆಸುತ್ತಿದೆಯೆಂದು ಸುದ್ದಿ.

ಪಾಕಿಸ್ತಾನ ಮತ್ತು ಹಿಂದುಸ್ತಾನಗಳ ಪ್ರತಿನಿಧಿಗಳ ಹೇಳಿಕೆಗಳ ಪರಿಶೀಲನೆಯಿಂದ ಭದ್ರತಾ ಮಂಡಲವು ಹಿಂದುಸ್ತಾನದ ಮತದಂತೆ ಪಾಕಿಸ್ತಾನಿಗಳು ಸರಕಾರೀ ಮುಖದಿಂದಲ್ಲದಿದ್ದರೂ ಖಾಸಗಿ ರೀತಿಯಿಂದ ಕಾಶ್ಮೀರದಲ್ಲಿ ದಾಳಿ ನಡೆಸಲು ಪುಂಡರಿಗೆ ಬೆಂಬಲ ಕೊಡುತ್ತಿದ್ದಾರೆಂಬುದನ್ನು ಒಪ್ಪಿದೆಯೆನ್ನಬಹುದು. ಈ ವಿಷಯದಲ್ಲಿ ಭದ್ರತಾಮಂಡಲವು ಸ್ವದೇಶೀಯರನ್ನು ಈ ಕಾರ್ಯದಿಂದ ನಿವೃತ್ತಗೊಳಿಸಬೇಕೆಂದು ಪಾಕಿಸ್ತಾನವನ್ನು ಬೇಡಿಕೊಳ್ಳಬಹುದೆಂದು ಹೇಳಲಾಗುತ್ತಿದೆ.

ಕಾಶ್ಮೀರದ ಸದ್ಯದ ಸರಕಾರವು ಜನಪ್ರಾತಿನಿಧಿಕವಲ್ಲವೆಂಬ ಪಾಕಿಸ್ತಾನೀ ವಾದವನ್ನು ಹುಷ್ಯರುದುರ್ಜನ ನ್ಯಾಯದಿಂದ ನಂಬಿ ಸದ್ಯದ ಶೇಖ ಅಬ್ದುಲ್ಲಾರ ಸರಕಾರವನ್ನು ಉದಾರ ನೀತಿಯಿಂದ ಕೆಲಮಟ್ಟಿಗೆ ವಿಸ್ತರಿಸಲು ಕೇಳಿಕೊಳ್ಳುವದು ಮತ್ತು ಹಿಂದೀ ಸೈನಿಕರು ಕಾಶ್ಮೀರದಲ್ಲಿರುವುದರ ವಿರುದ್ಧ ಪಾಕಿಸ್ತಾನ ಕೊಟ್ಟ ದೂರಿಗೆ ಸಮಾಧಾನವೆಂದು ಅವರು ಕೇವಲ ಮಿಲಿಟರಿ ಕಾರ್ಯವನ್ನಲ್ಲದೆ ಪೋಲೀಸು ಕಾರ್ಯದಲ್ಲಿ ಕೈಹಾಕದಂತೆ ನೋಡಿಕೊಳ್ಳಬೇಕೆಂದು ಹಿಂದೀ ಸರಕಾರವನ್ನು ಪ್ರಾರ್ಥಿಸುವದು ಸಂಭಾವ್ಯವಿದೆ.

ಆದರೆ ನಿಶ್ಚಿತವಾದ ಯಾವ ಮಟಕ್ಕೂ ಚರ್ಚೆ ಮುಟ್ಟಿಲ್ಲವಾದುದರಿಂದ ಮೇಲಿನ ಊಹೆಯಲ್ಲಿ ಯಾವ ಬದಲಾವಣೆಯಾಗಲೂ ಸಾಧ್ಯವಿದೆ.

ಪಶ್ಚಿಮ ಯುರೋಪಿನ ರಾಷ್ಟ್ರಗಳ ಒಕ್ಕೂಟ

ಪಶ್ಚಿಮ ಯುರೋಪಿನ ಸಂರಕ್ಷಣೆಗೆ ಸಂಪೂರ್ಣ ಸಹಾಯವನ್ನು ನೀಡುವುದಾಗಿ ಅಮೇರಿಕವು ಆಶ್ವಾಸನ ಕೊಟ್ಟಿದೆಯೆಂದು ಲಂಡನ್ನಿನಲ್ಲಿ ಸುದ್ದಿಯಿದೆ. ಅಮೇರಿಕದ ಈ ಆಶ್ವಾಸನ ಉಚಿತ ವೇಳೆಯ ವರೆಗೆ ಗುಪ್ತವಾಗಿ ಇಡಲ್ಪಡಲಾಗುವುದು. ಬ್ರಿಟಿಶ ವಸಾಹತುಗಳೂ ಪ್ರತ್ಯಕ್ಷ ರೀತಿಯಿಂದ ಅದಕ್ಕೆ ಬೆಂಬಲಕೊಡುವುವೆಂದು ಬ್ರಿಟಿಶ ಮುತ್ಸದ್ದಿಗಳು ನಂಬಿದ್ದಾರೆ ಎಂದು ಸಂ. ಕ. ದ ಲಂಡನ್ ಪ್ರತಿನಿಧಿ ಬರೆಯುತ್ತಾನೆ.

ಪಂಚರಾಷ್ಟ್ರಗಳ ಪಡುವಣ ಒಕ್ಕೂಟದ ಒಡಂಬಡಿಕೆಯು ಈ ವಾರ ಬ್ರಸೆಲ್ಸಿನಲ್ಲಿ ಆಗಲಿದೆ. ಈ ಒಡಂಬಡಿಕೆಯಾದ ಬಳಿಕ ಜಗತ್ತಿನಲ್ಲೆಲ್ಲ ಮಿಲಿಟರಿ ದೃಷ್ಟಿಯಿಂದ ಅತ್ಯಂತ ಮಹತ್ವದ ಕೂಟಗಳು ರಚಿಸಲ್ಪಡುವವು. ಪಾಶ್ಚಾತ್ಯ ರಾಷ್ಟ್ರಗಳ ಒಕ್ಕೂಟದ ಒಡಂಬಡಿಕೆಗೆ ಇಂದು ಪ್ಯಾರಿಸ್ಸಿನಲ್ಲಿ ಪ್ರಾರಂಭಿಸುವ ೧೬ ರಾಷ್ಟ್ರಗಳ ಪರಿಷತ್ತಿನಲ್ಲಿ ಸಹಿ ಹಾಕಲಾಗುವುದೆಂದು ತಿಳಿಯುತ್ತದೆ.

ಈ ಒಕ್ಕೂಟಕ್ಕೆ ಬೆಂಬಲ ಕೊಡಬೇಕೆಂದು ಹಿಂದುಸ್ತಾನವನ್ನು ಇನ್ನೂ ಔಪಚಾರಿಕವಾಗಿ ಕೇಳಿಕೊಳ್ಳಲಾಗಿರದಿದ್ದರೂ ಎಲ್ಲ ಘಟನೆಗಳನ್ನೂ ಅದಕ್ಕೆ ತಿಳಿಸಲಾಗುತ್ತಿದೆ. ಫೀಲ್ಡ್ ಮಾರ್ಶಲ್ ವೈಕೌಂಟ್ ಮಾಂಟಗೋಮರಿಯವರು ಬ್ರಸೆಲ್ಸಿಗೆ ಭೆಟ್ಟಿಕೊಡಲಿರುವುದರಿಂದ ಪಾಶ್ಚಾತ್ಯ ರಾಷ್ಟ್ರಗಳ ಒಕ್ಕೂಟಕ್ಕೆ ವಿಶೇಷ ಮಿಲಿಟರಿ ಮಹತ್ವ ಬಂದಿದೆ.

ಪಡುವಲಿಗರ ಈ ಒಕ್ಕೂಟದ ರಚನೆಯನ್ನು ರಶಿಯೆ ವು ಪ್ರತಿಭಟಿಸಿದೆ. ಈ ಒಕ್ಕೂಟದ ಗರ್ಭದಲ್ಲಿ ಹೊಸ ಯುದ್ಧದ ಬೀಜಗಳಡಗಿವೆಯೆಂದು ಅದು ಎಚ್ಚರಿಕೆ ಕೊಟ್ಟಿದೆ.

ಜಗತ್ತಿನಲ್ಲಿ ಹೆಚ್ಚು ಹೆಚ್ಚು ಗುಂಪುಗಳು ನಿರ್ಮಾಣವಾಗತೊಡಗಿದ್ದರಿಂದ ಸಂ. ರಾ. ಸಂಘದ ಅವತಾರ ಇಲ್ಲಿಗೆ ಸಮಾಪ್ತಿಯಾಯಿತೆಂದು ಲಂಡನ್ನಿನಲ್ಲಿ ಹಲವರು ಅಭಿಪ್ರಾಯಪಡುತ್ತಾರೆ. ಇದರಿಂದ ಒಂದು ಪಾಠವನ್ನು ಕಲಿತು ಭದ್ರತಾ ಮಂಡಳಕ್ಕೆ ಒಯ್ದ ಕಾಶ್ಮೀರ ಪ್ರಶ್ನೆಯ ಬಗ್ಗೆ ಹಿಂದೀ ಸರಕಾರವು ತನ್ನ ಧೋರಣದ ಪುನರ್ವಿಮರ್ಶೆ ಮಾಡುವುದು ಅಗತ್ಯ.

ಮೇಲಿನ ಒಕ್ಕೂಟದ ಒಡಂಬಡಿಕೆಯನ್ನು ಸಿದ್ಧಪಡಿಸುವುದಕ್ಕಾಗಿ ೬ ದಿನಗಳ ವರೆಗೆ ಬ್ರಸೆಲ್ಸಿನಲ್ಲಿ ಸಭೆ ಜರುಗಿ ಮೂಲ ಪ್ರಶ್ನೆಗಳ ಬಗೆ ಒಮ್ಮತಕ್ಕೆ ಬರಲಾಗಿದೆಯೆಂದೂ ಇನ್ನು ಕೇವಲ ಒಡಂಬಡಿಕೆಗೆ ಶಾಬ್ದಿಕ ರೂಪ ಕೊಡುವುದೊಂದು ಉಳಿದಿದೆಯೆಂದೂ ಬೆಲ್ಜಿಯಮ್ಮಿನ ಪ್ರತಿನಿಧಿಯಿಂದ ತಿಳಿದುಬರುತ್ತದೆ.

ಇಗ್ಲೆಂಡಿನ ಆರ್ಥಿಕ ದುಸ್ಥಿತಿ

ಇಂಗ್ಲೆಂಡು ತನ್ನ ಕ್ರಿಯಾಶಕ್ತಿಯನ್ನೂ ಕಾರ್ಯಕ್ಷಮತೆಯನ್ನೂ ಕಾಯ್ದುಕೊಳ್ಳಬೇಕಾದರೆ ಅದಕ್ಕೆ ಮಾರ್ಶಲ ಸಹಾಯ ಯೋಜನೆಯ ಲಾಭ ಪಡೆಯದ ಹೊರತು ಗತ್ಯಂತರವಿಲ್ಲ ಎಂಬುದೆ ಇಂದು ಹೊರಟ ಒಂದು ಸುದೀರ್ಘ ಸರಕಾರಿ ವರದಿಯ ಸಾರಾಂಶವಾಗಿದೆ. ಈ ವರದಿಯು ಇಂಗ್ಲೆಂಡಿನ ಸದ್ಯದ ಆರ್ಥಿಕ ಪರಿಸ್ಥಿತಿಯನ್ನು ಅವಲೋಕಿಸಿ ೧೯೪೮ ನೇಯ ವರ್ಷದ ಬಗ್ಗೆ ಸಲಹೆ ಸೂಚನೆಗಳನ್ನಿತ್ತಿದೆ. ಇಂಗ್ಲೆಂಡು ಅಮೇರಿಕೆಯ ಸಹಾಯ ತೆಗೆದುಕೊಂಡು ದೇಶದಲ್ಲಿ ಅಥವಾ ಸ್ಟರ್ಲಿಂಗ ಪ್ರದೇಶದಲ್ಲಿ ಮತ್ತೆಲ್ಲಾದರೂ ಪೂರೈಕೆಯ ಹೊಸ ಆಕರಗಳನ್ನು ಬೆಳೆಸಬೇಕೇ ಹೊರತು ಕೇವಲ ತನ್ನ ಪ್ರಜೆಗಳಿಗೆ ಹೆಚ್ಚಿನ ಸುಖ ಸೌಕರ್ಯಗಳನ್ನು ಒದಗಿಸುವತ್ತ ಲಕ್ಷ್ಯ ಹಾಕಬಾರದೆಂದು ವರದಿಯಲ್ಲಿ ಹೇಳಲಾಗಿದೆ.

ಒಂದೊಂಪ್ಪತ್ತು ಮಾರ್ಶಲ ಯೋಜನೆಯ ಸಹಾಯವು ದೊರೆಯದೆ ಹೋಗಿ ಇಂಗ್ಲೆಂಡು ತನ್ನ ವಿದೇಶದ ಸಾಲವನ್ನು ತೀರಿಸಬೇಕಾಗಿ ಬಂದರೆ ದೇಶದಲ್ಲೆಲ್ಲ ನಿರುದ್ಯೋಗ ಮತ್ತು ಕಷ್ಟಗಳು ಹೆಚ್ಚಾಗುವವು. ಉತ್ಪಾದನೆ ಬುಡಮೇಲಾಗುವದು, ಅಲ್ಲದೆ ಸಾಮಾನ್ಯ ಜೀವನ ಮಟ್ಟವು ಸಾಧ್ಯವಾಗಬೇಕಾದರೆ ಎಷ್ಟೋ ವರ್ಷಗಳು ಬೇಕಾಗುವವು.

ವಿದೇಶದಲ್ಲಿಯ ಸಂಪತ್ತನ್ನು ಕಾಯ್ದುಕೊಳ್ಳಲು ಎರಡು ಸೂಚನೆಗಳಿವೆ:— ಮೊದಲನೆಯದೆಂದರೆ ನಮ್ಮ ಕೊಟ್ಟು ತೆಗೆದುಕೊಳ್ಳುವ ವ್ಯವಹಾರವನ್ನು ಸರಿಪಡಿಸಿಕೊಳ್ಳಬೇಕು. ಮತ್ತು ಎರಡನೆಯದೆಂದರೆ ಪಶ್ಚಿಮ ಗೋಲಾರ್ಧದ ದೇಶಗಳಿಗೆ ಅವುಗಳಿಂದ ಕೊಂಡ ಸರಕು ಸಾಮಗ್ರಿಗಳ ಹಣವನ್ನು ಬೇಗನೆ ಮುಟ್ಟಿಸುವ ವ್ಯವಸ್ಥೆಯಾಗಬೇಕು. ಈ ಧೋರಣವು ಕಾರ್ಯಕಾರಿಯಾಗಬೇಕಾದರೆ, ನಿರ್ಯಾತದ ಪ್ರಮಾಣವು (ಮುಖ್ಯವಾಗಿ ಪಶ್ಚಿಮ ಗೋಲಾರ್ಧಕ್ಕೆ ಹೋಗುವ ನಿರ್ಯಾತದ ಪ್ರಮಾಣವು) ಹೆಚ್ಚಾಗಬೇಕು. ಅಲ್ಲದೆ ಬ್ರಿ. ಕಾಮನವೆಲ್ತ ದೇಶಗಳಲ್ಲಿ ಅದರಲ್ಲೂ ವಿಶೇಶವಾಗಿ ಬ್ರಿ. ಸಾಮ್ರಾಜ್ಯದ ದೇಶಗಳಲ್ಲಿಯ ಪೂರೈಕೆಯು ಬೆಳೆಯಬೇಕು; ಸ್ಟರ್ಲಿಂಗ ಪ್ರದೇಶದ ದೇಶಗಳಿಗೆ ಡಾಲರಗಳ ವಿನಿಯೋಗವನ್ನು ಆದಷ್ಟು ಕಡಿಮೆ ಮಾಡಬೇಕೆಂದು ಬಿನ್ನವಿಸಬೇಕು; ಬಹುಮುಖ ವ್ಯಾಪಾರ ಮತ್ತು ಬಹುಮುಖ ನಾಣ್ಯವಿನಿಮಯದ ಮೇಲಿನ ನಿರ್ಬಂಧಗಳು ಹೋಗಬೇಕು.

ಮಾರ್ಶಲ ಸಹಾಯ ಯೋಜನೆಯ ಲಾಭವು ಸಿಕ್ಕದಿದ್ದರೆ ಪಶ್ಚಿಮ ಗೋಲಾರ್ಧದ ಆಯಾತವನ್ನು ಮತ್ತಷ್ಟು ಕಡಿಮೆ ಮಾಡಬೇಕಾಗುವದು. ಆಹಾರದ ಆಯಾತವನ್ನು ಈಗಾಗಲೆ ಕಡಿಮೆ ಮಾಡಲಾಗಿದೆ. ಇನ್ನೂ ಆಯಾತ ಕಡಿಮೆ ಮಾಡುವದೆಂದರೆ ಕಚ್ಚಾ ಮಾಲಿನ ಮೇಲೆಯೇ ಗದೆ ಬೀಳುವದು.

ಪೂರೈಕೆಯ ಬೇರೆ ಆಕರಗಳು ಇಲ್ಲ. ಡಾಲರೇತರ ಪ್ರದೇಶಗಳಿಂದ ಸಾಧ್ಯವಿದ್ದಷ್ಟು ಪೂರೈಕೆಯನ್ನು ದೊರಕಿಸಿಕೊಳ್ಳಲಾಗುತ್ತಿದೆ.

ಮತ್ತೊಂದೆಂದರೆ ಇಂಗ್ಲೆಂಡು ಮೂಲಧನದ ಅಭಿವೃದ್ಧಿಯ ಯೋಜನೆಯನ್ನು ಅಮೂಲಾಗ್ರ ಪುನರ್ವಿಮರ್ಶಿಸಬೇಕು; ಉಕ್ಕು ಮತ್ತು ಮನುಷ್ಯಬಲ ಇವುಗಳ ಸಹಾಯದಿಂದ ೧೯೪೮ ರಲ್ಲಿ ನಮಗೆ ಆಹಾರ ದೊರಕುವದಾದರೆ ಮುಂದಿನ ವಿಚಾರವಿಲ್ಲದೆ ನಾವು ಯಾಂತ್ರಿಕ ಸಲಕರಣೆಗಳನ್ನು ನಿರ್ಯಾತ ಮಾಡಬೇಕು—ಎಂದೂ ವರದಿಯಲ್ಲಿದೆ.

ಇಟಲಿಯಲ್ಲಿ ಕಮ್ಯುನಿಸ್ಟರ ಒಳಸಂಚು?

ಇಟಲಿಯಲ್ಲಿ ಕಮ್ಯುನಿಸ್ಟ ಸೈನಿಕರನ್ನು ಮೀನು ಹಿಡಿಯುವ ನೌಕೆಗಳಿಂದ ಸಮುದ್ರ ಮಾರ್ಗವಾಗಿಯೂ ವಿಮಾನದಿಂದ ಬಂದು ಕೊಡೆ ವಿಮಾನಗಳ ಸಹಾಯದಿಂದಲೂ ಇಳಿಸಹತ್ತಿದ್ದಾರೆ ಎಂದು ಇಟಲಿ ಸರಕಾರಕ್ಕೆ ತಿಳಿದು ಬಂದಿದೆ. ಜನವರಿಯಿಂದಲೂ ಯುಗೋಸ್ಲಾವಿಯಾದಿಂದ ಶಸ್ತ್ರಾಸ್ತ್ರಗಳು ರಾತ್ರಿಯಲ್ಲಿ ಮೀನು ಹಿಡಿಯುವ ದೋಣಿಗಳ ಮೂಲಕ ಇಟಲಿ ಕಮ್ಯುನಿಸ್ಟ ಕೇಂದ್ರಗಳಿಗೆ ಬರಹತ್ತಿವೆ ಎಂದೂ ಹೀಗೆ ಪ್ರತಿ ತಿಂಗಳು ೧೦೦ ಸಾವಿರ ಪೌಂಡು ಬೆಲೆ ಬಾಳುವ ಶಸ್ತ್ರಾಸ್ತ್ರ ಬಂದಿದೆ ಎಂದೂ ಸರಕಾರಕ್ಕೆ ತಿಳಿದು ಬಂದಿದೆ.

ಉತ್ತರ ಇಟಲಿಯಲ್ಲಿರುವ ಔದ್ಯೋಗಿಕ ಕೇಂದ್ರಗಳಿಗೆ ಯುಗೋಸ್ಲಾವಿಯಾ ಮತ್ತು ರಶಿಯಗಳ ಕಮ್ಯುನಿಸ್ಟರ ಸಹಸ್ರಾವಧಿ ಸಂಖ್ಯೆಯಲ್ಲಿ ಬಂದು ತುಂಬಿದ್ದಾರೆಂದೂ ದೊಡ್ಡ ಪ್ರಮಾಣದಲ್ಲಿ ಶಸ್ತ್ರಾಸ್ತ್ರ ಸಂಗ್ರಹವನ್ನು ಕಮ್ಯುನಿಸ್ಟರು ಮಾಡಿದ್ದಾರೆಂದೂ ಹತ್ತು ದಿನಗಳ ಹಿಂದೆ ಇಟಲಿ ಪೋಲೀಸರಿಗೆ ಒಂದು ಝಡತಿಯಲ್ಲಿ ಸಿಕ್ಕ ಶಸ್ತ್ರಾಸ್ತ್ರ ಸಂಗ್ರಹದ ಮೇಲಿಂದ ಮನವರಿಕೆಯಾಗಿದೆ. "ಇಲ್ ಪೆನಲೆಲೋ" ಎಂಬ ವಾರಪತ್ರಿಕೆ ಕಮ್ಯುನಿಸ್ಟ ಸೈನಿಕರು ರಶಿಯನ್ ಜನರಲ್ ಕಿರೋನ್‌ರ ನೇತೃತ್ವದಲ್ಲಿ ಪಶ್ಚಿಮ ಯುರೋಪಿನ ಮೇಲೆ ದಾಳಿ ಮಾಡುವ ಯೋಜನೆ ಮಾಡಿದ ವಿವರಗಳನ್ನು ಪ್ರಸಿದ್ಧಿಸಿದೆ. ಕಮ್ಯುನಿಸ್ಟರು ಈ ಪತ್ರಿಕೆಯ ಕಚೇರಿಯ ಮೇಲೆ ದಾಳಿ ಮಾಡಿ ಎಲ್ಲ ಪ್ರತಿಗಳನ್ನು ಸುಟ್ಟು ಹಾಕಿದರು. ಆದರೂ ಕೆಲವು ಪ್ರತಿಗಳು ಕಳವಿನಿಂದ ಪಾರಾಗಿ ಹೋದವರ ಮೂಲಕ ಸರಕಾರದ ವಶಕ್ಕೆ ಬಂದಿವೆ. ಈ ಯೋಜನೆಯಲ್ಲಿ ಕಮ್ಯುನಿಸ್ಟ ಸೈನಿಕರು ಮಹತ್ವದ ಸೇತುಗಳನ್ನು ಆಕ್ರಮಿಸಿ ರೇಲ್ವೆಗಳ ಓಡಾಟವನ್ನು ನಿರ್ಬಂಧಿಸುವರು. ಕಮ್ಯುನಿಸ್ಟರ ಸಾಗಾಟಕ್ಕೆ ಅನುಕೂಲತೆ ಒದಗಿಸಿ ಕೊಡುವರು. ಇಡಿ ಇಟಲಿಯನ್ನು ಆಕ್ರಮಿಸಿದ ನಂತರ ಇಟಲಿಯಲ್ಲಿ ಸೋಶಿಯಲಿಸ್ಟ್ ಪ್ರಜಾರಾಜ್ಯ ಸ್ಥಾಪನೆ ಮಾಡಲಾಗುವದು; ದಕ್ಷಿಣ ಇಟಲಿಯಲ್ಲಿ ಕಮ್ಯುನಿಸ್ಟರಿಗೆ ವಿರೋಧವುಂಟಾದರೆ ಉತ್ತರ ಇಟಲಿಯಲ್ಲಿ ಕಮ್ಯುನಿಸ್ಟ ಸರಕಾರ ಸ್ಥಾಪಿಸಿ ದೇಶದಲ್ಲೆಲ್ಲ ಸಂಪು ಹೂಡಿ ದಕ್ಷಿಣ ಇಟಲಿಯನ್ನು ಹಣ್ಣು ಮಾಡುವ ಯೋಜನೆ ಇದೆಯಂತೆ.

ಇಟಲಿಯನ್ನು ಕಮ್ಯುನಿಸ್ಟರ ದವಡೆಯಿಂದ ಉಳಿಸಲು ಬ್ರಸೆಲ್ಸಿನಲ್ಲಿ ಗುಪ್ತ ಸಂಧಾನದ ಮಾತುಕತೆ ನಡೆದಿದೆ. ಬ್ರಿಟಿಶ ಪರರಾಷ್ಟ್ರ ಮಂತ್ರಿ ಬೆವಿನ್ನರೂ ಅಮೇರಿಕನ್ ವಿದೇಶಿ ಮಂತ್ರಿ ಜಾರ್ಜ ಮಾರ್ಶಲ್ಲರೂ ಇಟಲಿಯ ರಾಜಕಾರಣದಲ್ಲಿ ಮನಸ್ಸು ಹಾಕಿದ್ದಾರೆ. ಇವರಿಬ್ಬರೊಡನೆ ಇಟಲಿ ಸರಕಾರವು ತಂತಿ ಮೂಲಕ ಮಹತ್ವದ ಸೂಚನೆಗಳನ್ನ ಪೇಕ್ಷಿಸುತ್ತಿದೆ. ಇಟಲಿಯ ರಾಯಭಾರಿಗೆ ಬೆವಿನ್ನರು ಕೆಲವೊಂದು ಕರಾರುಗಳನ್ನು ಹಾಕಿ ಯುದ್ಧಪೂರ್ವದಲ್ಲಿ ಇಟಲಿ ಸಾಮ್ರಾಜ್ಯದಲ್ಲಿದ್ದ ಕ್ಷೇತ್ರವನ್ನು ಇಟಲಿಗೆ ಬಿಟ್ಟುಕೊಡಲು ಒಪ್ಪುವದಾಗಿ ತಿಳಿಸಿದ್ದಾರೆಂದು ವಿಶ್ವಸನೀಯವಾಗಿ ತಿಳಿದು ಬಂದಿದೆ. ಇಟಲಿಯ ಚುನಾವಣೆಯಲ್ಲಿ ನೂರಕ್ಕೆ ೫೦ ರಷ್ಟೇ ಮತದಾರರು ಮತದಾನ ಮಾಡಿದರೂ ಕಮ್ಯುನಿಸ್ಟರು ಬಹುಮತ ಪಡೆದು ಆರಿಸಿ ಬರುವ ಸಂಭವವಿದೆ ಎಂದು ಲಂಡನ್ನಿಗೆ ಬರುವ ವರದಿಗಳಿಂದ ತಿಳಿದು ಬರುತ್ತದೆ.

ಜಪಾನಿನ ಹೊಸ ಮಂತ್ರಿಮಂಡಲ

ಜಪಾನಿನ ಮುಖ್ಯ ಮಂತ್ರಿಗಳಾದ ಹಿಟೋಶಿ ಆಶಿಡಾರವರು ಹೊಸದೊಂದು ಮಂತ್ರಿಮಂಡಳವನ್ನು ರಚಿಸಿದ್ದಾರೆ. ಫೆಬ್ರುವರಿಗೆ ರಾಜೀನಾಮೆ ಕೊಟ್ಟ ಮುಖ್ಯ ಮಂತ್ರಿಗಳಾದ ಟೆಟ್ಸು ಕಾಟಾಯಾಮಾರವರು ಹೊಸ ಮಂತ್ರಿಮಂಡಳವನ್ನು ಸೇರಲು ನಿರಾಕರಿಸಿದರು. ಹಿಂದಿನ ಮಂತ್ರಿಮಂಡಳದ ವಜ್ರಮುಷ್ಟಿಯವರೆಂದು ಹೆಸರಾದ ಸುಹಿರೊ ನಿಶಿಓರವರು ಈ ಮಂತ್ರಿಮಂಡಳದಲ್ಲಿ ಉಪ ಮುಖ್ಯಪ್ರಧಾನರಿರುವರು. ಸೇನಾಪತಿ ಮ್ಯಾಕ್ ಆರ್ಥರರು ಮಂತ್ರಿಮಂಡಳಕ್ಕೆ ಮನ್ನಣೆ ಕೊಟ್ಟಿದ್ದಾರೆ.

ಅತಿಪ್ರಸರಣ

ದೇಶಗಳು	ಯುದ್ಧಕ್ಕೆ ಮುಂಚೆ	ಯುದ್ಧಾನಂತರ	ಪ್ರಮಾಣ
ಬ್ರಿಟನ್	೧೯೫,೩೦,೦೦,೦೦೦ ಪೌಂಡುಗಳು	೫೦೩,೦೦,೦೦,೦೦೦ ಪೌಂಡುಗಳು	೨॥
ಕೆನಡ	೧೨೮,೦೦,೦೦,೦೦೦ ಡಾಲರುಗಳು	೩೪೦.೮೦,೦೦,೦೦೦ ಡಾಲರುಗಳು	೨|||
ಅಮೇರಿಕದ ಸಂ. ಸಂಸ್ಥಾನ	೩,೭೦೦,೦೦,೦೦,೦೦೦ ಡಾಲರುಗಳು	೧೧೧೨೦,೦೦,೦೦,೦೦೦ ಡಾಲರುಗಳು	೩ ೦
ಫ್ರಾನ್ಸ್	೧೯೩೦,೦೦,೦೦,೦೦೦ ಫ್ರಾಂಕುಗಳು	೧೧೭೩೦೦,೦೦,೦೦,೦೦೦ ಫ್ರಾಂಕುಗಳು	೬
ಹಿಂದುಸ್ತಾನ	೧೭೯,೦೦,೦೦,೦೦೦ ರೂಪಾಯಿಗಳು	೧೨೦೦,೦೦,೦೦,೦೦೦ ರೂಪಾಯಿಗಳು	೬|||
ಜಪಾನ್	೨೩೭೦,೦೦,೦೦,೦೦೦ ಯೆನ್ನುಗಳು	೩,೦೫೭೦,೦೦,೦೦,೦೦೦ ಯೆನ್ನುಗಳು	೧೩
ಇಟಲಿ	೫೦೪೦,೦೦,೦೦,೦೦೦ ಲೈರುಗಳು	೧೦೮೨೫೦,೦೦,೦೦,೦೦೦ ಲೈರುಗಳು	೨೧॥

ಅಮೇರಿಕದ ಧ್ಯೇಯ ಧೋರಣೆಗಳ ಸಂಕ್ಷಿಪ್ತ ಪರಿಚಯ

ರಾಷ್ಟ್ರಗಳ ರಾಜ್ಯತೃಷ್ಣೆ—ರಾಜಕೀಯ ದುರ್ವ್ಯವಹಾರ—ಆಕ್ರಾಮಕ ನೀತಿಯ ಖಂಡನೆ— ಸಹಕೃತ ಕಾರ್ಯದಿಂದ ಶಾಂತಿಸ್ಥಾಪನೆ— ದಾರ್ಢ್ಯ ಸಹಿಷ್ಣುತೆಗಳ ಧೋರಣೆ—

ಸೋವಿಯಟ್ಟಿನ ಅಸಹಕಾರದಿಂದ ಸಿಟ್ಟಿಗೇಳದೆ, ರಾಜಕೀಯ ಪ್ರಭುತ್ವ ವಿಸ್ತರಣ ಕಾರ್ಯಗಳನ್ನು ಕಂಡಲ್ಲಿ ಖಂಡಿಸಿ, ಸಹಕಾರ ಹಸ್ತವನ್ನು ನೀಡಿ, ಅದನ್ನು ಪರಿಗ್ರಹಿಸಿದ ರಾಷ್ಟ್ರಗಳನ್ನು ಕೂಡಿಕೊಂಡು ಜಗತ್ತಿನ ಸರ್ವ ರಾಷ್ಟ್ರಗಳಲ್ಲೂ ಸ್ವಾತಂತ್ರ್ಯ, ಸುಖ, ಶಾಂತಿ, ಸಮಾನತೆಗಳು ನೆಲಸುವಂತೆ ಮಾಡುವದರ ಸಲುವಾಗಿ ಅಚಲಿತವೂ ವಿನಯ ಸಂಪನ್ನವೂ ಆದ ನಡತೆಯಿಂದ ಅಂತರ್‌ರಾಷ್ಟ್ರೀಯ ಸಂಸ್ಥೆಗಳ ಮೂಲಕ ಹೆಣಗುವುದು ಅಮೇರಿಕವಿಂದು ಮಾಡಬೇಕಾದ ಕೆಲಸ. ಒಳನಾಡಿನಲ್ಲಿ ಜನಜೀವನವನ್ನು ಆದರ್ಶ ಮಟ್ಟಕ್ಕೆ ತಂದು ಮುಟ್ಟಿಸಿ, ಜಗತ್ತಿನ ಲಕ್ಷ್ಯವನ್ನು ಆಕರ್ಷಿಸಿ ತನ್ಮೂಲಕ ಸರ್ವ ರಾಷ್ಟ್ರಗಳಲ್ಲೂ ಒಂದೇ ಬಗೆಯ ಸಂಗಡಿಗತನ, ಸಹಭಾವನೆ, ಸಹಕಾರಬುದ್ಧಿಗಳು ಹುಟ್ಟುವಂತೆ ಮಾಡಲು ಅಮೇರಿಕ ಹೊರಟಿದೆ—ಎಂದು ಅಮೇರಿಕದ ಹಿಂದಿನ ಪರರಾಷ್ಟ್ರಮಂತ್ರಿಗಳಾದ ಜೆ. ಎಫ್. ಬ್ರೈರ್ನ್ಸರವರು ಅಭಿಪ್ರಾಯ ಪಡುತ್ತಾರೆ.

ಅಧಿಕಾರ ಸಂಬಂಧಗಳಲ್ಲಿ ಉಂಟಾಗುವ ಬದಲಾವಣೆಗಳು ಯಾವಾಗಲೂ—ಜಗತ್ತನ್ನು ಚಿಂತೆಗೀಡುಮಾಡುತ್ತವೆ. ರಶಿಯವು ಬಹಳ ಕಾಲದ ಒಂದು ಮುಖ್ಯವಾದ ಪ್ರಭುತ್ವವೆನಿಸಿದೆ; ಆದರೆ ಇಂದಿನ ವರೆಗೆ ಎಂದೂ ಅದು ಯುರೋಪು ಖಂಡದ ನಾಯಕ ಪ್ರಭುತ್ವವೆನಿಸಿಲ್ಲ. ಯಾವುದಾದರೊಂದು ರಾಜ್ಯದ ಸಾಮರ್ಥ್ಯವು ಬಹಳ ಹೆಚ್ಚಿನ ಮಟ್ಟಕ್ಕೇರಿದಾಗ ಅದು ಮತ್ತೂ ಮುಂದ ತನ್ನ ಪ್ರಭಾವ ಕ್ಷೇತ್ರವನ್ನು ವಿಸ್ತರಿಸುವದೆಂದು ಉಳಿದ ರಾಜ್ಯಗಳು ಚಿಂತಾಗ್ರಸ್ತವಾಗುವದು ಸ್ವಾಭಾವಿಕ. ಅದರಲ್ಲೂ ತನ್ನ ಅಧಿಕಾರ ಮತ್ತು ವರ್ಚಸ್ಸನ್ನು ಬೆಳೆಸುತ್ತ ಹೋಗುವ ನಾಡೊಂದರ ಮುಖಂಡರು ಪರಶೋಷಣವನ್ನೇ ತಮ್ಮ ಧ್ಯೇಯವಾಗಿಟ್ಟುಕೊಂಡಾಗ ಈ ಮಾತು ವಿಶೇಷತಃ ಸತ್ಯವೆನಿಸುತ್ತದೆ.

ಚಿಂತೆಗೆ ವಿಶೇಷತಃ ಕಾರಣವಾಗುವದು—ರಶಿಯದಂತಹ ರಾಜ್ಯವೊಂದು ಉಳಿದವರಂತೆ ಅತಿ ಪ್ರಬಲ ಹೊಂದಿ, ತನ್ನ ಒಳಜೀವನ ಮಟ್ಟದಲ್ಲಿ ಮಾತ್ರ ಅವುಗಳಿಗಿಂತ ಹಿಂದುಳಿದಾಗ.

ಬದಲಾವಣೆಯ ಬಯಕೆ

ರಶಿಯವಲ್ಲದೆ ಉಳಿದ ಸರಕಾರಗಳೂ ತಮಗೆ ಹೊಸ ಪ್ರದೇಶ ಬೇಕೆನ್ನುತ್ತವೆ. ಫ್ರಾನ್ಸಿಗೆ ಸಾರ್ ಪ್ರದೇಶ ಬೇಕು; ಎಪ್ಪೈರಸ್ಸನ್ನು ಸೇರಿಸಿಕೊಳ್ಳಲು ಗ್ರೀಸು ಅಪೇಕ್ಷಿಸುತ್ತದೆ. ನೆದರ್‌ಲೆಂಡು ಪಶ್ಚಿಮದ ಜರ್ಮನಿಯ ಒಂದು ಚೂರನ್ನು ತನ್ನಲ್ಲಿ ಕೂಡಿಸಿಕೊಳ್ಳಬೇಕೆನ್ನುತ್ತದೆ. ಬೆಲ್ಜಿಯಂ ಕೂಡ ಸಮೀಪದ ಜರ್ಮನ್ ಭಾಗವೊಂದನು ಕೇಳಬಹುದು. ಈ ಸರಕಾರಗಳು ಅಂತರ್‌ರಾಷ್ಟ್ರೀಯ ಸಂಘದ ಮೂಲಕ ಮೇಲಿನ ಬದಲಾವಣೆಗಳನ್ನು ಪಡೆಯಲು ಯತ್ನಿಸುತ್ತವೆ; ಆದರೆ ಸೋವಿಯಟ್ ರಶಿಯ ಮಾತ್ರ ಹಾಗೆ ಮಾಡುವುದಿಲ್ಲ. ಅದು ತನ್ನ ಒಕ್ಕೈ ಹೊಡೆತದಿಂದ ಇಂಥ ಬದಲಾವಣೆಗಳನ್ನು ಸಾಧಿಸಹೋಗಿ ಎಷ್ಟೋ ವೇಳೆ ರಾಜಕೀಯ 'ಬಕಾಯ ಸ್ವಾಹಾ'ದಲ್ಲಿ ಪರಿಣಮಿಸುವಂತೆ ಮಾಡುತ್ತದೆ. ಇದೇ ಅವಕ್ಕೂ ಇದಕ್ಕೂ ಇರುವ ವ್ಯತ್ಯಾಸ.

ರಾಜಕೀಯ ಹಸ್ತಪ್ರವೇಶ

ಸಂಯುಕ್ತರಾಷ್ಟ್ರ ಸಂಘದ 'ತಾಮ್ರಪಟದಲ್ಲಿ 'ನಿಮ್ಮ ರಾಜ್ಯದ ರಾಜಕೀಯ ಸ್ವಾತಂತ್ರ್ಯ ಇಲ್ಲವೆ ಕ್ಷೇತ್ರ ಪರಿಮಿತಿಯ ವಿರುದ್ಧ ಬಲಪ್ರಯೋಗ ಮಾಡುವ ಇಲ್ಲವೆ ಅದರ ಬೆದರಿಕೆಹಾಕುವ ಕಾರ್ಯದಿಂದ ನಿಮ್ಮನ್ನು ಮುಕ್ತವಿಡಲಾಗುತ್ತದೆ' ಎಂದು ಎಲ್ಲ ಸದಸ್ಯರಿಗೂ ಆಶ್ವಾಸನ ಕೊಡಲಾಗಿದೆ. ಈ ಲಕ್ಷಣವು ಸಶಸ್ತ್ರ ಆಕ್ರಮಣಕ್ಕೆ ಮಾತ್ರ ಪರಿಮಿತವಾಗಿಲ್ಲ. ಬಲಾತ್ಕಾರ, ಪ್ರಭಾವಪ್ರಯೋಗ ಇಲ್ಲವೆ ರಾಜಕೀಯ ಹಸ್ತಪ್ರವೇಶ, ಬುಡಮೇಲು ಮಾಡುವ ಚಟುವಟಿಕೆ—ಇವಕ್ಕೂ ಅನ್ವಯಿಸುತ್ತದೆ.

ಯುದ್ಧದಿಂದ ಭಿನ್ನಭಿನ್ನವಾದ ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಯಲ್ಲಿರುವ ನಾಡುಗಳಲ್ಲಿ ಈ ರಾಜಕೀಯ ಹಸ್ತಪ್ರವೇಶದ ಹೆದರಿಕೆ ವಿಶೇಷವಾಗಿ ಗಂಭೀರವಿರುತ್ತದೆ. ಅನಿವಾರ್ಯವಾಗಿ ಅದು ಪ್ರತೀಕಾರ ರೂಪವಾದ ಪ್ರತಿಕ್ರಮಗಳನ್ನು ತೆಗೆದುಕೊಳ್ಳುವಂತೆ ಕೆರಳಿಸುತ್ತದೆ. ಒಮ್ಮಿಂದೊಮ್ಮೆ ಸಂಬಂಧಪಟ್ಟ ಪ್ರತಿಯೊಬ್ಬರೂ ತಂತಮ್ಮ ಆತ್ಮರಕ್ಷಣೆಗಾಗಿ ಹೋರಾಡುತ್ತಿರುವೆವು ಎಂಬ ನಂಬಿಗೆಯುಂಟಾಗುವ ಪರಿಸ್ಥಿತಿ ಒದಗಬಹುದು. ಕೂಡಲೆ ಒಂದೇ ಒಂದು ಕಿಡಿಯೆದ್ದರೆ ಸಾಕು—ಅದು ಬೆಂಕಿಹೊತ್ತಿಸಿ ಇಡೀ ಪ್ರಪಂಚವನ್ನೇ ಸ್ವಾಹಾಕರಿಸಬಹುದು!

ತರಣಮಾರ್ಗ

ಇಂಥ ಅನಾಹುತವನ್ನು ತಪ್ಪಿಸಬೇಕಾದರೆ ನಾವು ಪರಪೀಡಾತ್ಮಕ ಚಟುವಟಿಕೆಗಳನ್ನು ನಿಲ್ಲಿಸಿಬಿಡಬೇಕಲ್ಲದೆ, ಅಂತಹ ಚಟುವಟಿಕೆಗಳ ಕಾರಣಗಳನ್ನು ನಿರ್ಮೂಲ ಮಾಡಲು ಹೊರಡಬೇಕು. ಅನೇಕ ರಾಜ್ಯಗಳಲ್ಲಿ ಯುದ್ಧದದೆಸೆಯಿಂದ ಜನರಿಗೆ ಸಾಕಷ್ಟು ಅಶನ ವಸನ ವಸತಿ ಸೌಕರ್ಯಗಳಿಲ್ಲ. ಆದರಿಂದ ಅವರು ತಮ್ಮ ದಿನದ ಕಷ್ಟಜೀವನದಿಂದ ಪಾರಾಗಲು ಅವರಿಗೆ ಇದಿರಾಗುವ ಇಂತಹ ಧ್ಯೇಯಗಳ ಭ್ರಮೆಗೆ ಸುಲಭವಾಗಿ ಬಲಿಯಾಗುತ್ತಾರೆ. ಈ ಜನರು ಸ್ವಾತಂತ್ರ್ಯಕ್ಕೆ ಬೆಲೆಕೊಟ್ಟು ಕಾಯುದೆಗೆ ಮನ್ನಣೆ ಕೊಡುವಂತೆ ಮಾಡಬೇಕಾದರೆ, ನಾವು ಅವರಿಗೆ ಉಣಲು, ಉಡಲು, ತಮ್ಮನ್ನು ತಮ್ಮ ಕುಟುಂಬಗಳನ್ನು ಒಂದು ನೆರಳಿನಲ್ಲಿರಿಸಲು ಅವಕಾಶ ಕೊಡಬೇಕು; ಅಲ್ಲದೆ, ಒಳನಾಡಿನ ಶಾಂತಿ ಸುವ್ಯವಸ್ಥೆಗಳನ್ನು ಕಾಪಾಡಿಕೊಂಡಿರಲು ಅವರಿಗೆ ತಕ್ಕ ಸಾಧನವನ್ನು ಒದಗಿಸಿಕೊಡಬೇಕು. ರಶಿಯ, ಅಮೇರಿಕದ ಸಂಯುಕ್ತಸಂಸ್ಥಾನ ಇಲ್ಲವೆ ಮತ್ತಾವುದಾದರೊಂದು ರಾಜ್ಯದ ಉಪಗ್ರಹಗಳಾಗದೆ ಸ್ವತಂತ್ರವಾದ ಜೀವನವನ್ನು ಸಾಗಿಸಬಹುದೆಂಬ ಭಾವನೆಯನ್ನು ನಾವು ಅವರಲ್ಲಿ ಹುಟ್ಟಿಸಬೇಕು.

ಆರ್ಥಿಕ ಸಹಾಯ ನೀಡುವ ಉದ್ದೇಶ

ಆರ್ಥಿಕ ಸಹಾಯವನ್ನು ನೀಡುವಲ್ಲಿ ನಾವು ಸಹಾಯ ತೆಗೆದುಕೊಂಬ ರಾಜ್ಯದ ಜನರನ್ನು ಆಳಬಯಸದೆ ಸ್ವತಂತ್ರಗೊಳಿಸಲು ಪ್ರಯತ್ನಿಸಬೇಕು. ಸ್ವತಂತ್ರರಾಗಲು ಒಂದು ರಾಜ್ಯದವರಿಗೆ ಅವಕಾಶ ಕೊಟ್ಟರೆ ಅವರು ನಮ್ಮನ್ನಾಗಲಿ, ಇತರರನ್ನಾಗಲಿ ಅವಲಂಬಿಸಲು ಅಪೇಕ್ಷಿಸುವುದಿಲ್ಲವೆಂಬ ಆತ್ಮವಿಶ್ವಾಸ ನಮಗಿರಬೇಕು. ಸ್ವಾತಂತ್ರ್ಯವಿಲ್ಲದಲ್ಲಿ ನಾವು ಕೊಡುವ ಆರ್ಥಿಕ ಸಹಾಯವನ್ನು ನಮ್ಮ ಮೇಲೆಯೇ ತಿರುಗಿಸುವ ಕಾರ್ಯ ನಡೆಯದೆಂಬುದನ್ನು ನಾವು ಖಾತ್ರಿ ಮಾಡಿಕೊಳ್ಳಬೇಕು.

ಸ್ವಾತಂತ್ರ್ಯದಂತೆ ಅಭಿವೃದ್ಧಿ ಸಂಪತ್ತನ್ನು ಕೂಡ ಮುಷ್ಟಿಯೊತ್ತಿ ಭಿಕ್ಷೆ ಹಾಕುವ ರೀತಿಯನ್ನುಳಿದು ನ್ಯಾಯವಾದ ಮತ್ತು ಪ್ರಾಮಾಣಿಕವಾದ ಉತ್ಪನ್ನ ವಿನಿಮಯವು ಸ್ವತಂತ್ರ ಸ್ತ್ರೀ ಪುರುಷರಲ್ಲಿ ನಡೆವಂತೆ ನೋಡಿಕೊಂಡು ಆ ಮೂಲಕ ಸರ್ವರೂ ಭೋಗಿಸುವಂತಾಗಬೇಕು. ನಮ್ಮ ಸಹಾಯಕ್ಕೆ ನಾವು ಪ್ರತಿದಾನ ಬೇಕೆನ್ನುವುದಾದರೆ, ಸೇವೆ ಮತ್ತು ಸಾಮಾನುಗಳನ್ನು ಆ ಪ್ರತಿದಾನದ ಅಂಗವಾಗಿ ಸ್ವೀಕರಿಸಲು ಸಿದ್ಧರಿರಬೇಕು. ಆದರೆ ಸ್ವಯಂಭರಣದ ತಳಹದಿಯ ಮೇಲೆ ಐರೋಪ್ಯ ಆರ್ಥಿಕ ಮಂದಿರ ನಿಂತ ಹೊರತು ನಾವೆಂದೂ ವಾಸ್ತವದೃಷ್ಟಿಯಿಂದ ಪ್ರತಿದಾನವನ್ನು ನಿರೀಕ್ಷಿಸಲು ಬರದು.

ಸಾಮೂಹಿಕ ಸುರಕ್ಷಿತತೆ

ಜಗತ್ತಿಗೆ ಅನ್ನ ವಸ್ತ್ರ ಒದಗಿಸಿ ಬಿಟ್ಟರೆ ನಮ್ಮ ಕೆಲಸ ಮುಗಿದು ಹೋಗಲಿಲ್ಲ. ಅಷ್ಟೇ ಲಕ್ಷ್ಯದಿಂದ ನಮ್ಮ ಸಾಮೂಹಿಕ ಸುರಕ್ಷಿತತೆಗಾಗಿಯೂ ನಾವು ಶ್ರಮಿಸಬೇಕಾಗಿದೆ. ಸಾಮೂಹಿಕ ಪ್ರಯತ್ನದಿಂದ ನಾವಿಂದು ಜಪಾನು ಜರ್ಮನಿಗಳು ಜಗತ್ತಿನ ಶಾಂತಿಗೆ ಭಂಗತರುವುದನ್ನು ನಿಲ್ಲಿಸಿದೆವು. ಇದು ಚಿರಸ್ಥಾಯಿಯಾಗಬೇಕಾದರೆ ಚತುರ್ಮಹಾಪ್ರಭುತ್ವಗಳು ಜರ್ಮನಿ ಜಪಾನುಗಳು ಪುನಃ ಯುದ್ಧದಲ್ಲಿ ಧುಮುಕದಂತೆ ನೋಡಿಕೊಳ್ಳುವ ಯೋಜನೆಗಳಿಂದ ಕೂಡಿದ ಒಂದು ೪೦ ವರ್ಷದ ಒಪ್ಪಂದಕ್ಕೆ ಸಹಿ ಹಾಕಬೇಕೆಂದು ನಾನು ಸಲಹೆ ಮಾಡಿದೆ. ಅದಕ್ಕೆ ಬ್ರಿಟನ್ ಮತ್ತು ಫ್ರಾನ್ಸುಗಳು ತಮ್ಮ ಒಪ್ಪಿಗೆಯನ್ನು ವ್ಯಕ್ತಪಡಿಸಿದವು. ಸ್ಟಾಲಿನ್ನರು ಈ ತತ್ವವನ್ನು ಪುರಸ್ಕರಿಸಿದರು; ಬಳಿಕ ಮೊಲಟೋವರು ಬಲವಾಗಿ ಇದನ್ನು ವಿರೋಧಿಸಿದರು. ಈ ಒಪ್ಪಂದವನ್ನು ಅಂಗೀಕರಿಸಿರುವುದರಿಂದ ಮೇಲಿನೆರಡು ರಾಷ್ಟ್ರಗಳು ಯುದ್ಧೋನ್ಮುಖವಾಗದಂತೆ ನಿಃಶಸ್ತ್ರವಾಗಿ ಇಡುವುದರಲ್ಲಿ ಚತುರ್ಮಹಾರಾಷ್ಟ್ರಗಳಲ್ಲಿ ಎರಡಕ್ಕಾದರೂ ಪ್ರಾಮಾಣಿಕವಾದ ಅಪೇಕ್ಷೆ ಇದೆ ಎಂಬುದು ಸಿದ್ಧವಾಗುತ್ತದೆ. ಸೋವಿಯಟ್ ಸರಕಾರವು ನಮ್ಮ ಈ ಸಲಹೆಯನ್ನು ತಿರಸ್ಕರಿಸುತ್ತ ಹೋದರೆ ಭವಿಷ್ಯದ ಬಗ್ಗೆ ಹೆದರಲು ನಮಗೆ ಕಾರಣವುಂಟಾಗುತ್ತದೆ.

ಸೋವಿಯಟ್ ಒಕ್ಕೂಟವು ಯುದ್ಧಬೇಕೆನ್ನುವುದೆಂದು ನಾನು ನಂಬುವುದಿಲ್ಲ. ಆದರೆ ತಮ್ಮ ಅಧಿಕಾರ, ವರ್ಚಸ್ಸು ಮತ್ತು ಹಿತಗಳನ್ನು ಪರಮಾವಧಿಗೇರಿಸುವುದಕ್ಕಾಗಿ ಮಿತಿಮೀರಿ ಹೆಣಗುವುದೇ ತಮ್ಮ ಕರ್ತವ್ಯವೆಂದು ಅಲ್ಲಿಯ ರಾಜತಂತ್ರಜ್ಞರು ತಿಳಿದಂತಿದೆ. ನಿಶ್ಚಿತ ಮಿತಿಯಿಂದ ಹೊರಗೆ ಅವರು ತಮ್ಮ ಈ ಹೋರಾಟವನ್ನು ಒಯ್ದರೆ ಅವರ ವಿರುದ್ಧವಾಗಿ ಕಾಯದೆಯನ್ನು ಜಾರಿ ಮಾಡಲಾಗುವುದೆಂಬ ಮಾತನ್ನು ನಾವು ಅವರಿಗೆ ಸ್ಪಷ್ಟಪಡಿಸಬೇಕು. ಅಲ್ಲದಿದ್ದರೆ, ತಾವೇನು ಮಾಡಿದರೂ ನಡೆಯುತ್ತದೆಂದು ತಿಳಿದು ಅವರು ಆ ಇತಿಮಿತಿಗಳನ್ನು ಮೀರಿ ಹೋಗಬಹುದು.

ಯುದ್ಧದ ಮಾತೇ ಹೆಚ್ಚಾಯಿತು !

ನಾವು ನಮ್ಮ ಮಾತೇ ಸತ್ಯವೆಂಬ ಶಠತ್ವವನ್ನು ಬಿಡಬೇಕು. ನಮ್ಮ ಮತ್ತು ಇತರರ ಭಾವ, ಅಭಿಪ್ರಾಯ, ಜೀವನಕ್ರಮಗಳನ್ನು ಪರಸ್ಪರವಾಗಿ ಮರ್ಯಾದೆಯಿಂದ ನೋಡುವುದಗತ್ಯ. ವಿಚಾರವೈವಿಧ್ಯ ಮತ್ತು ಭಾವಸ್ಪರ್ಧೆಗಳು ಪ್ರಗತಿಕಾರಣವಾಗಬಲ್ಲವು. ಘರ್ಷಣೆಯೊಂದೇ ಅವುಗಳ ಅನಿವಾರ್ಯ ಪರಿಣಾಮವೆನ್ನುವುದು ತಪ್ಪು. ದುರದೃಷ್ಟವಶದಿಂದ ಯುರೋಪಿನ ಆರ್ಥಿಕ ಮತ್ತು ರಾಜಕೀಯ ಇಬ್ಭಾಗ ಸಂಭವಿಸಿದ್ದು ಕೂಡ ಘರ್ಷಣೆ ಅನಿವಾರ್ಯವೆಂದು ಮಾತಾಡುವುದನ್ನು ಸಮರ್ಥಿಸಲು ಸಾಕಾಗದು. ಯುದ್ಧದ ಮಾತೇ ಇಂದು ಹೆಚ್ಚಾಗಿರುವುದಲ್ಲದೆ, ಶಾಂತಿಯ ಹೆಸರನ್ನು ಹೇಳುವವರೆ ಕಾಣಸಿಗುವುದಲ್ಲ

ಸಹಕಾರ ಪ್ರಯತ್ನ

ಸೋವಿಯಟ್ ಒಕ್ಕೂಟದ ಪ್ರತಿನಿಧಿಗಳೊಡನೆ ವ್ಯವಹರಿಸುವುದು ಎಷ್ಟೇ ಕಠಿನವೆನಿಸಲಿ, ಜಾಗತಿಕ ಸಹಕಾರವನ್ನು ಘಟಿಸಬೇಕೆಂದು ನಾವು ಪ್ರಯತ್ನಿಸುವುದನ್ನು ಮುಂದುವರಿಸಲೇಬೇಕು. ರಶಿಯವು ಸಹಕರಿಸದೆಂಬುದನ್ನು ಅರಿತೇ ನಾವು ಹಾಗೆ ಸಹಕಾರಹಸ್ತವನ್ನು ನೀಡಬೇಕು. ನಮ್ಮ ಪ್ರಯತ್ನಕ್ಕೆ ಸೋಲುಂಟಾದರೆ ಯಾರಿಂದ ಈ ಸೋಲು ಉಂಟಾಯಿತೆಂಬುದನ್ನು ಜಗತ್ತು ತಿಳಿಯಲಿ. ನಮ್ಮ ಅನುಭವದ ಪ್ರಕಾರ ನೋಡಿದರೆ, ಸೋವಿಯಟ್ ಧೋರಣವು ಮಿದುವಾಗಿರುವುದು ಮತ್ತು ಅದರ ವಕ್ತಾರರು ತಮ್ಮ ಅಭಿಪ್ರಾಯಗಳನ್ನು ಬದಲಿಸಿದರೂ ಬದಲಿಸಬಹುದು. ಅವರ ಸಹಕಾರವನ್ನು ಬಯಸುವುದರಲ್ಲಿ ನಾವು ಪ್ರಮಾಣಿಕರಿದ್ದೇವೆಂಬುದನ್ನು ಅವರಿಗೆ ತಿಳಿಸಿ, ಅನಂತರ ಅವರ ಸಹಕಾರ ಸಿಗದಿದ್ದರೂ ಸಹ ಸಿಕ್ಕಷ್ಟೇ ರಾಜ್ಯಗಳ ಬೆಂಬಲದಿಂದ ನಾವು ಮುನ್ನಡೆಯುವೆವೆಂಬ ನಮ್ಮ ದೃಢ ನಿರ್ಧಾರವನ್ನು ಸ್ಪಷ್ಟಪಡಿಸಬೇಕು.

ನಮ್ಮ ನಡತೆ

ನಮ್ಮ ಸಹಕಾರ ಪ್ರಯತ್ನದಲ್ಲಿ 'ನಾವು ಹೇಳಿದ್ದೇ ಸರಿ; ಬೇಕಾದರೆ ಒಪ್ಪಬಹುದು, ಬೇಡವಾದರೆ ಬಿಟ್ಟುಬಿಡಬಹುದು' ಎಂಬ ಭಾವವಿರಬಾರದು. ಸೋವಿಯಟ್ಟಿನೊಡನೆ ಇಷ್ಟು ಸಹನೆಯಿಂದೇಕೆ ನಡೆದುಕೊಳ್ಳಬೇಕೆಂದು ಕೇಳುವವರು ಮೂರನೆಯ ಮಹಾಯುದ್ಧದ ಪರಿಣಾಮವನ್ನರಿತಿಲ್ಲ. ಈ ಸಹನೆಯಿಂದ ಕೆಲವೇ ಜನರ ಮನನೊಂದರೆ ಆ ಯುದ್ಧದಿಂದ ಕೋಟ್ಯವಧಿ ಜನರ ಜೀವನದಲ್ಲಿ ಸಾವು ನೋವು ಉಂಟಾಗುವುದು! ಆದುದರಿಂದ ಭಗೀರಥ ಪ್ರಯತ್ನದಿಂದ, ಸಹಕಾರ ಬುದ್ಧಿಯಿಂದ ಕೃತಿಗಿಳಿಸಿ, ಜಗತ್ತಿನಲ್ಲಿ ನಿಯಮ, ಬಲ, ಭಯಗಳನ್ನು ಮೀರಿ ನಿಂತ ಸರ್ವಸಾಧಾರಣವಾದ ಮೈತ್ರಿ, ಹಿತ, ಭಾವಗಳನ್ನು ರೂಪಿಸುವುದೇ ನಮ್ಮ ಕರ್ತವ್ಯ.

ಇಲ್ಲಿಂದ ನಾವು ಮುಂದೆ ಹೊರಡುವುದು ಈ ದಿಕ್ಕಿನಲ್ಲಿರಬೇಕು. ನಾವು ನಮ್ಮನ್ನು ನಮ್ಮ ನಾಡನ್ನೂ ಮೊದಲು ಸುಧಾರಿಸಿಕೊಳ್ಳಬೇಕು. ಜಗತ್ತು ನಮ್ಮ ಜನಜೀವನದ ಮಾದರಿಯನ್ನು ಮೆಚ್ಚಿ ಕಲಿತುಕೊಳ್ಳುವಂತೆ ನಾವು ನಮ್ಮಲ್ಲಿಯ ಪ್ರತಿಯೊಬ್ಬ ವ್ಯಕ್ತಿಯ ಸುಖ ಶಾಂತಿಗಳನ್ನು ಹೆಚ್ಚಿಸಬೇಕು. ಅಂತರ್‌ರಾಷ್ಟ್ರೀಯ ಪರಿಷತ್ತುಗಳನ್ನು ಹೊಗುವಾಗ ನಾವು ನಮ್ಮ ಜೀವನಕ್ರಮದಲ್ಲೂ ಸಂಪೂರ್ಣ ವಿಶ್ವಾಸವನ್ನು ತಳೆದು, ಅದರಿಂದ ಲಭಿಸುವ ದೃಢವಾದ ಆದರೆ ವಿನಯಪೂರ್ವಕವಾದ ನಿರ್ಧಾರ ಮತ್ತು ಜಯದ ಭರವಸೆಗಳನ್ನು ಹೃದಯದಲ್ಲಿಟ್ಟುಕೊಂಡಿರಬೇಕು. ನನಗೆ ಮಾರ್ಕ್ಸ ಇಲ್ಲವೆ ಲೆನಿನ್ನನ ತತ್ವಕ್ಕಿಂತ ಥಾಮಸ್ ಜಫರಸನ್ ಮತ್ತು ಅಬ್ರಹಾಂ ಲಿಂಕನ್ನರ ಸರ್ವಸಮಾನತೆಯ ಮತ್ತು ಪ್ರಜಾಸತ್ತೆಯ ತತ್ವಗಳೇ ಮೆಚ್ಚಿಕೆಯಾದವು.

ಕಾಶ್ಮೀರದ ಬಗ್ಗೆ ಹಿಂದುಸ್ತಾನ ಸರಕಾರದ ಶ್ವೇತಪತ್ರ

ಪಾಕಿಸ್ತಾನ ಸರಕಾರವು ದಾಳಿಗರ ಬೆಂಬಲಕ್ಕಿದೆ —

ಕಾಶ್ಮೀರದ ಪ್ರಜೆಗಳ ರಕ್ಷಣೆಗಾಗಿ ಹಿಂದೀ ಸೈನ್ಯ ಧಾವಿಸಿದೆ

ಭಾರತದ ಮುಖ್ಯ ಪ್ರಧಾನ ಮಂತ್ರಿಗಳಾದ ಪಂ. ಜವಾಹರಲಾಲ ನೆಹರು, ಕಾಶ್ಮೀರಕ್ಕೆ ಸಂಬಂಧಿಸಿದ ಅನೇಕ ಕಾಗದ ಪತ್ರಗಳ ಆಧಾರ ಸಹಿತವಾಗಿ ತಾ. ೫ರಂದು ಒಂದು ಶ್ವೇತ ಪತ್ರವನ್ನು ಹಿಂದ ಮೋಲಗಳಲ್ಲಿ ಪ್ರಸಿದ್ಧಪಡಿಸಿದರು. ಈ ಶ್ವೇತ ಪತ್ರದಲ್ಲಿ ನಾಲ್ಕು ಪರಿಚ್ಛೇದಗಳೂ ಒಂದು ಮುನ್ನುಡಿಯೂ ಇವೆ. ಮುನ್ನುಡಿಯಲ್ಲಿ ಕಾಶ್ಮೀರ ಜಮ್ಮು ಸಂಸ್ಥಾನಗಳ ಕ್ಷೇತ್ರ ವಿಸ್ತಾರದ ವಿವರಣೆಯುಂಟು. ೧ ನೇ ಪ್ರಕರಣದಲ್ಲಿ ಕಾಶ್ಮೀರ ಸಂಸ್ಥಾನವು ಹಿಂದುಸ್ಥಾನ ಒಕ್ಕೂಟದಲ್ಲಿ ಸೇರುವ ವರೆಗೆ ನಡೆದ ಘಟನೆಗಳ ನಿರೂಪಣೆಯುಂಟು. ೨ ನೇ ಪ್ರಕರಣದಲ್ಲಿ ದಾಳಿಗಾರರು ಪಾಕಿಸ್ತಾನದಿಂದ ಏರಿ ಬಂದುದರ ವಿವರಣೆಯುಂಟು. ೩ ನೇ ಪ್ರಕರಣದಲ್ಲಿ ಈ ದಾಳಿಯಲ್ಲಿ ಪಾಕಿಸ್ತಾನದ ಅಂಗವಿದ್ದುದರ ಸಾಧಾರಣ ಸ್ಪಷ್ಟೀಕರಣವಿದೆ. ೪ ನೇ ಪ್ರಕರಣದಲ್ಲಿ ಹಿಂದುಸ್ತಾನದ ಗೊತ್ತುಗುರಿ ಏನು ಎಂಬುದನ್ನು ಸಾರಿ ಹೇಳಲಾಗಿದೆ.

ಕಾಶ್ಮೀರದ ಭೌಗೋಲಿಕ ಸ್ಥಾನ

ಹಿಂದುಸ್ತಾನದ ತೀರ ಉತ್ತರಕ್ಕಿರುವ ಕಾಶ್ಮೀರ ಸಂಸ್ಥಾನದ ಕ್ಷೇತ್ರವು ೮೪೪೭೧ ಚದರ ಮೈಲು ಇದೆ. ಇದರಲ್ಲಿ (೧) ಗಡಿಪ್ರದೇಶದ ಜಿಲ್ಲೆಗಳು (೨) ಕಾಶ್ಮೀರ (೩) ಪೂಂಚ, ಚೆನಾನಿ, ಜಹಗೀರ ಸಹಿತವಾದ ಜಮ್ಮು, ಹೀಗೆ ಮೂರು ಪ್ರಾಂತಗಳುಳ್ಳದ್ದಾಗಿದೆ. ಕಾಶ್ಮೀರ ಸಂಸ್ಥಾನದ ಉತ್ತರಕ್ಕೆ ಚೀನ ತುರ್ಕಸ್ತಾನ (ಸಿಂಕಿಯಾಂಗ) ಈಶಾನ್ಯಕ್ಕೆ ಪೂರ್ವಕ್ಕೆ ಟಿಬೇಟ, ನಾಯುವ್ಯಕ್ಕೆ ಸೋವಿಯಟ್ ತುರ್ಕಸ್ತಾನ ಪ್ರಥಾರಾಜ್ಯ ಹಾಗೂ ಅಫಗಾಣಿಸ್ತಾನ, ಪಶ್ಚಿಮಕ್ಕೆ ಪಾಕಿಸ್ತಾನ ದಕ್ಷಿಣಕ್ಕೆ ಪಾಕಿಸ್ತಾನ ಹಾಗೂ ಹಿಂದುಸ್ತಾನ ಹೀಗೆ ಈ ಸಂಸ್ಥಾನದ ಭೌಗೋಲಿಕ ಸ್ಥಾನವಿದೆ. ಹಿಮಾಲ್ಯಾದಿಕ ಪರ್ವತಾಲಯ ಗುಡ್ಡಗಳ ಸಾಲುಗಳಿಂದ ಬೇರೆ ಬೇರೆಯಾದ ಪುಟ್ಟ ಸ್ವಾಭಾವಿಕ ಪ್ರದೇಶಗಳು ಈ ಸಂಸ್ಥಾನದಲ್ಲಿರುವವು. ಬೇಸಿಗೆಗೆ ಶ್ರೀನಗರವು ರಾಜಧಾನಿ, ಚಳಿಗಾಲಕ್ಕೆ ಜಮ್ಮು ರಾಜಧಾನಿ.

೧೯೪೧ ರ ಜನಗಣತಿಯ ಪ್ರಕಾರ ಕಾಶ್ಮೀರ ಜಮ್ಮು ಸಂಸ್ಥಾನದ ಒಟ್ಟು ಜನಸಂಖ್ಯೆ ४० ಲಕ್ಷ ೨೧ ಸಾವಿರ ೬೧೬ ಇದ್ದು ಅದರಲ್ಲಿ ನೂರಕ್ಕೆ ೭೭.೧೧ ರಷ್ಟು ಮುಸಲ್ಮಾನರು ೨೦.೧೨ ರಷ್ಟು ಹಿಂದುರು, ೨.೭೭ ರಷ್ಟು ಬುದ್ಧರು ಮತ್ತು ಇತರರು ಹೀಗೆ ಜನರ ಪ್ರಮಾಣವಿದೆ. ಜಮ್ಮು ಜಿಲ್ಲೆಯಲ್ಲಿ ಬಹುಸಂಖ್ಯಾಕ ಹಿಂದುಗಳಿದ್ದಾರೆ. ಶ್ರೀನಗರದಲ್ಲಿಯೂ ಹಿಂದೂ ಜನಸಂಖ್ಯೆ ವಿಶೇಷವಾಗಿದೆ.

ಇಂದಿನ ಮಹಾರಾಜರ ಪೂರ್ವಜರು ಈ ಸಂಸ್ಥಾನವನ್ನು ಕಳೆದ ಒಂದು ನೂರು ವರ್ಷಗಳಿಂದ ಆಳುತ್ತ ಬಂದಿದ್ದಾರೆ.

ಪಾಕಿಸ್ತಾನದ ಬಲಾತ್ಕಾರ

ಬ್ರಿಟಿಶರ ಆಳಿಕೆಯು ಮುಕ್ತಾಯವಾದೊಡನೆ ಸಂಸ್ಥಾನಗಳು ಬೇಕಾದ ಪಕ್ಷದತ್ತ ಸೇರಲು ಸ್ವತಂತ್ರವಿರುವವೆಂಬುದು L L ಸ್ಪಷ್ಟವಾಗಿತ್ತು. ಕಾಶ್ಮೀರ ಸಂಸ್ಥಾನವು ಅಕ್ಟೋಬರ ೨೬, ೧೯೪೭ಕ್ಕೆ ಹಿಂದುಸ್ತಾನ ಒಕ್ಕೂಟದಲ್ಲಿ ಸೇರ್ಪಡೆ ಹೊಂದುವ ಪತ್ರಕ್ಕೆ ಅಂಕಿತ ಹಾಕುವ ಮೊದಲು ಹಿಂದುಸ್ತಾನದೊಡನೆ ಯಾವ ವಿಧವಾದ ಒಪ್ಪಂದವನ್ನೂ ಮಾಡಿಕೊಂಡಿರಲಿಲ್ಲ. ಆದರೆ ಅದು ಪಾಕಿಸ್ತಾನದೊಡನೆ ಮಾತ್ರ ಯಥಾಸ್ಥಿತ ಒಪ್ಪಂದ ಮಾಡಿಕೊಂಡಿತ್ತು. ಈ ಒಪ್ಪಂದ ಮಾಡಿಕೊಂಡ ಉದ್ದೇಶವು ಬ್ರಿಟಿಶರು ಸಹ್ಯಾಂತರ ಮಾಡುವ ಮೇಲೆ ಸಹ ಅಂಚೆ, ಸಂಪರ್ಕ, ಸಾಗಣೆ ಇವುಗಳ ಬಗ್ಗೆ ಕಾಶ್ಮೀರಕ್ಕೆ ಪಾಕಿಸ್ತಾನ ಪ್ರದೇಶಗಳಲ್ಲಿದ್ದ ಅನುಕೂಲತೆಗಳು ಮೊದಲಿನಂತೆ ಸಾಗಬೇಕೆಂಬುದೇ ಆಗಿತ್ತು. ಆದರೆ ಕಾಶ್ಮೀರವು ಪಾಕಿಸ್ತಾನವನ್ನು ಸೇರಲು ಒಂದು ವಿಧದ ಒತ್ತಾಯ ತರಲು, ಆಹಾರ, ಪೆಟ್ರೋಲು, ಇತರ ಜೀವನಾವಶ್ಯಕ ವಸ್ತುಗಳನ್ನು ಪಾಕಿಸ್ತಾನವು ಕಾಶ್ಮೀರಕ್ಕೆ ಪೂರೈಸುವದನ್ನು ನಿಲ್ಲಿಸಿತು. ಕಾಶ್ಮೀರ ಪಾಕಿಸ್ತಾನಗಳಲ್ಲಿ ಜನರು ಹೋಗಿ ಬರುವದನ್ನು ಪ್ರತಿಬಂಧಿಸಿತು.

ದಾಳಿಯ ಸಿದ್ಧತೆ

ಈ ಆರ್ಥಿಕ ಒತ್ತಾಯದ ಜೊತೆಗೆ ಗಡಿಪ್ರದೇಶದಲ್ಲಿ ದಾಳಿಯ ಮಾತುಕತೆಯೂ ಒತ್ತಾಯ ಕರದಾರುತು. ಕಾಶ್ಮೀರದ ಮೇಲೆ ದಾಳಿ ಮಾಡುವ ಸಿದ್ಧತೆಯನ್ನು ಪಾಕಿಸ್ತಾನವು ಆಗಸ್ಟ ೩೧ ನೇ ದಿವಸದಿಂದಲೇ ನಡೆಸಿತ್ತು. ಎರಡು ಸಹಸ್ರಾ ಜಿಲ್ಲೆಯ ಮುಸಲ್ಮಾನರ ಪರವಾಗಿ ರಾಜಾ ಯಾಕೂಬಖಾನ ಎಂಬವರು ಕಾಶ್ಮೀರ ಮಹಾರಾಜರಿಗೆ ಕಳಿಸಿದ ತಂತಿಯಿಂದ ತಿಳಿದು ಬರುತ್ತದೆ.

ವಿಭಜನೆಯಿಂದ ಪಂಜಾಬದಲ್ಲಿ ಜಾತೀಯ ಗಲಭೆ ಎದ್ದು ದಕ್ಷಿಣ ಕಾಶ್ಮೀರದಲ್ಲಿ ನಿರಾಶ್ರಿತರ ಸಂಖ್ಯೆಯೂ ಹೆಚ್ಚಾಯಿತು. ಸಪ್ಟಂಬರ ತಿಂಗಳಲ್ಲಿ ದಾಳಿಗಾರರು ಪಾಕಿಸ್ತಾನದ ಗಡಿ ಜಿಲ್ಲೆಗಳಿಂದ ಕಾಶ್ಮೀರದಲ್ಲಿ ನುಗ್ಗುತ್ತಿರುವ ವರದಿಗಳು ಬರುತ್ತಲೇ ಇದ್ದವು. ಈ ಬಗ್ಗೆ ಕಾಶ್ಮೀರ ಸರಕಾರವು ಪಾಕಿಸ್ತಾನಕ್ಕೆ ಕಳಿಸಿದ ಪ್ರತಿಭಟನೆಯ ಪತ್ರಗಳಿಗೆ ಪಾಕಿಸ್ತಾನ ಸರಕಾರದಿಂದ ನಿರಾಕರಣೆಯ ಉತ್ತರ ಬರುತ್ತಿತ್ತವಲ್ಲದೆ ದಾಳಿಗಾರರನ್ನು ಪ್ರತ್ಯಕ್ಷವಾಗಿ ತಡೆಗಟ್ಟುವ ಕೃತಿಯೇ ಕಂಡುಬರಲಿಲ್ಲ.

ದಾಳಿಗಾರರ ಕೂಟ ಅಕ್ಟೋಬರ ೧೪ ರ ವರೆಗೆ ಸಣ್ಣ ಪುಟ್ಟ ಕಾಳಗಗಳಾದವು. ೧೪ ನೇ ತಾ. ದಿನ ನಾಲ್ಕೈದು ಸಾವಿರ ದಾಳಿಗಾರರು ಪಠಾಣ ಪಡುವಕ್ಕ ಧರಿಸಿ ಕೋಟ್ಲಿ ಪೂಂಚ ಮಾರ್ಗವಾಗಿ ಏರಿಬಂದರು. ಪಾಕಿಸ್ತಾನದಲ್ಲಿ ದೊಡ್ಡ ದಾಳಿಯ ಸಿದ್ಧತೆ ನಡೆದಿತ್ತೆಂಬುದು, ಮೋಟಾರುಗಳ ಓಡಾಟ, ಸೈನಿಕರು ಗುಂಪುಗೂಡುವದು ಮೊದಲಾದ ಚಟುವಟಿಕೆಗಳನ್ನು ಭೀಮಬಾರದಿಂದ ನೋಡಲು ಕಂಡು ಬರುವಂತಿತ್ತು. ೨೪ ನೇ ಅಕ್ಟೋಬರ ದಿನ ಕೋಟ್ಲಿಯು ದಾಳಿಗಾರರ ವಶಕ್ಕೆ ಹೋಯಿತು.

ಮಹಾರಾಜರಿಂದ ಬಿನ್ನಹ

ಅಕ್ಟೋಬರ ೨೪ ನೇ ತಾ. ಕಾಶ್ಮೀರ ಸರಕಾರವು ಮೊಟ್ಟಮೊದಲು ಹಿಂದುಸ್ತಾನ ಸರಕಾರಕ್ಕೆ ಸೈನ್ಯಸಹಾಯ ಕೋರಿ ಬಿನ್ನವಿಸಿಕೊಂಡಿತು. ಅದೇ ದಿನ ಕಾಶ್ಮೀರದ ಮಹಾರಾಜರು ಹಿಂದುಸ್ತಾನ ಒಕ್ಕೂಟದಲ್ಲಿ ಸೇರ್ಪಡೆ ಹೊಂದುವ ಪತ್ರಕ್ಕೆ ಅಂಕಿತ ಹಾಕಿದರು. ೨೭ ನೇ ತಾ. ಬೆಳಿಗ್ಗೆ ಕಾಶ್ಮೀರಕ್ಕೆ ಸೈನ್ಯವನ್ನು ವಿಮಾನ ಮೂಲಕ ಕಳಿಸಲಾಯಿತು.

ಕಾಶ್ಮೀರ ಪ್ರಜೆಗಳ ಪ್ರಮುಖರಾದ ಶೇಖ ಅಬ್ದುಲ್ಲಾರ ಸಲಹೆಯ ಮೇರೆಗೆ ಮಹಾರಾಜರು ಸೇರ್ಪಡೆ ಪತ್ರಕ್ಕೆ ಸೈ ಇಕ್ಕಿದ್ದಾರೆ. ಆದರೂ ಹಿಂದುಸ್ತಾನ ಸರಕಾರವು ಈ ಸೇರ್ಪಡೆಯನ್ನು ತಾತ್ಪೂರ್ತಿಕವಾಗಿ ಒಪ್ಪಿ ಕಾಶ್ಮೀರದ ಸಾರ್ವತ್ರಿಕ ಮತಗಣನೆಯ ನಂತರವೇ ಸೇರ್ಪಡೆಯನ್ನು ತಾನು ಸಂಪೂರ್ಣ ಒಪ್ಪುವದೆಂದು ಸ್ಪಷ್ಟವಾಗಿ ಸಾರಿ ಹೇಳಿದೆ.

ಕಾಶ್ಮೀರದಲ್ಲಿ ಹಿಂದೀ ಸೈನ್ಯ

ದಾಳಿಗಾರರು ಕೊಲೆ, ಲೂಟಿ, ಸ್ತ್ರೀ ಅಪಹರಣ ಮೊದಲಾದ ಅನಾಚಾರಗಳನ್ನು ಮನಬಂದಂತೆ ಮಾಡಿದ್ದಾರೆ. ಅಸಹ್ಯತರಾದ ಸಾವಿರಾರು ಸ್ತ್ರೀಯರನ್ನು ಆಜಾದ ಕಾಶ್ಮೀರ ಸರಕಾರದ ಕೇಂದ್ರಸ್ಥಳವಾದ ಅಲಿಬೇಗ ಎಂಬಲ್ಲಿ ಬಂಧಿಸಿ ಇಡಲಾಗಿದೆ.

ಬಾರಾಮುಲ್ಲಾವನ್ನು ದಾಳಿಗಾರರು ಆಕ್ರಮಿಸಿ ಶ್ರೀನಗರದ ೧೭ ಮೈಲು ಅಂತರದಲ್ಲಿರುವ ಪಟ್ಟಣದ ವರೆಗೆ ಬಂದಿದ್ದರಲ್ಲದೆ ಕಾಶ್ಮೀರ ಕಣಿವೆಗೆಲ್ಲ ವಿದ್ಯುತ್ ಶಕ್ತಿಯನ್ನು ಪೂರೈಸುವ ಮಹೂರಾ ಎಂಬ ವಿದ್ಯುತ್ ಕೇಂದ್ರವನ್ನು ಸಂಪೂರ್ಣ ನಾಶ ಮಾಡಿದ್ದರು. ಇಂತಹ ಪರಿಸ್ಥಿತಿಯಲ್ಲಿ ಹಿಂದಿ ಸೈನಿಕರು ವಿಮಾನದಿಂದ ಶ್ರೀನಗರಕ್ಕೆ ಕಳುಹಿಸಲ್ಪಟ್ಟರು. ಸಲಕರಣೆಗಳೂ ಹೆಚ್ಚು ಸೈನಿಕರೂ ಬರುವವರೆಗೆ ದಾಳಿಗಾರರ ಮೇಲೆ ಏರಿ ಹೋಗುವದಾಗಲಿಲ್ಲ. ನವೆಂಬರ ೮ ನೇ ತಾ. ನಿಂದ ಹಿಂದೀ ಸೈನಿಕರು ಒಂದೊಂದಾಗಿ ಕಳೆದುಕೊಂಡ ಸ್ಥಳಗಳನ್ನು ಕೈವಶ ಮಾಡಿಕೊಳ್ಳ ತೊಡಗಿದರು. ಮಾರ್ಗ ಸೌಕರ್ಯ ಇರದ್ದಕ್ಕೆ ಇವರ ಪ್ರಗತಿ ನಿಧಾನವಾಯಿತು. ಈಗ ಕೋಟ್ಲಿ, ನೌಶೇರಾ ಈ ಕೋಟೆಗಳನ್ನು ಮರಳಿ ವಶಪಡಿಸಿಕೊಳ್ಳಲಾಯಿತು. ಈಗ ದಾಳಿಗಾರರನ್ನು ಹೊರದೂಡಿಸುವ ಕಾರ್ಯ ನಡೆದಿದೆ. ದಾಳಿಗಾರರ ಸಂಖ್ಯೆ ಸದ್ಯಕ್ಕೆ ೧೯ ಸಾವಿರದಷ್ಟಿದ್ದು ಪಾಕಿಸ್ತಾನದ ಬೇರೆ ಬೇರೆ ಜಿಲ್ಲೆಗಳಲ್ಲಿ ಕೂಡ ೬೫ ಸಾವಿರ ಜನರು ಮುಸಲ್ಲಕರಾಗಿ ದಾಳಿಗೆ ಸಿದ್ಧರಾಗಿ ಶಿಬಿರಗಳಲ್ಲಿದ್ದಾರೆಂಬುದು ತಿಳಿದು ಬರುತ್ತದೆ.

ಕಾಶ್ಮೀರಕ್ಕೆ ಕಳುಹಿದ ಹಿಂದಿ ಸೈನಿಕರಲ್ಲಿ ಕೇವಲ ಸಿಖರೇ ಇಲ್ಲ. ಮರಾಠಾ, ಮದ್ರಾಸಿ, ಘರವಾಲಿ, ಪಂಜಾಬ್, ರಜಪೂತ ಮೊದಲಾದ ಎಲ್ಲ ಪಳಗಳಿಂದಲೂ ಸೈನಿಕರನ್ನು ಕಳುಹಲಾಗಿದೆ.

ಕಾಶ್ಮೀರ ದಾಳಿಯಲ್ಲಿ ಪಾಕಿಸ್ತಾನದ ಅಂಗವಿದ್ದೇ ಇದೆ

ಕಾಶ್ಮೀರದ ದಾಳಿಯು ಸಂಘಟನೆ ಮಾಡಿ ದಾಳಿಗಾರರಿಗೆ ಸರ್ವವಿಧ ಸಹಾಯವನ್ನು ಪಾಕಿಸ್ತಾನವೇ ನೀಡುತ್ತಿದೆ ಎಂಬ ಬಗ್ಗೆ ಸಾಕಷ್ಟು ಪ್ರಮಾಣಗಳಿವೆ. ಗಡಿನಾಡಿನ ಮುಖ್ಯ ಮಂತ್ರಿಗಳು ಗುಡ್ಡಗಾಡು ಜನರನ್ನು ಕಾಶ್ಮೀರದಲ್ಲಿ ಧರ್ಮಯುದ್ಧಕ್ಕೆ ಹೋಗಲು ಪ್ರತ್ಯಕ್ಷವಾಗಿ ಪ್ರೋತ್ಸಾಹಿಸಿದ್ದ ಬಗ್ಗೆ ಸಾಕಷ್ಟು ಆಧಾರಗಳಿವೆ. ಪಾಕಿಸ್ತಾನದ ವಿದೇಶ ಮಂತ್ರಿ ಶ್ರೀ ಜಾಫರುಲ್ಲಾ ಖಾನರು ಭದ್ರತಾ ಮಂಡಲದಲ್ಲಿ, ದಾಳಿಗಾರರನ್ನು ತಡೆಯುವ ಶಕ್ತಿ ಪಾಕಿಸ್ತಾನಕ್ಕಿಲ್ಲವೆಂದು ಹೇಳಿದ್ದರಲ್ಲಿ ಒಂದಿಷ್ಟೂ ಹುರುಳಿಲ್ಲ. ಅಲ್ಲದೆ ಮಂತ್ರಿ ಶರೀಫ ಪೀರರು ಗಡಿನಾಡ ಮುಖ್ಯ ಮಂತ್ರಿಗಳ ಏಜಂಟರಾಗಿ ಗುಡ್ಡಗಾಡ ಜನರನ್ನು ದಾಳಿಗೆ ಕಳಿಸಿ ಹಾಕುತ್ತಿದ್ದಾರೆ. ವಾನಾದ ಪೀರರು ಗುಡ್ಡಗಾಡ ಪಠಾಣರ ಸಭೆಯಲ್ಲಿ ಭಾಷಣ ಮಾಡಿ ಅವರಿಗೆ ಮೇಜವಾನಿ ಕೊಡಿಸಿ ಅವರನ್ನು ಡೇರಾ ಇಸ್ಮಾಯಿಲಖಾನ ಜಿಲ್ಲೆಯ ಪೋಲೀಸ ಸಬ ಇನ್ಸ್‌ಪೆಕ್ಟರ ಬಳಿ ಒಯ್ದು ಎಲ್ಲರಿಗೂ ರಾಯ ಫಲ್ ಕೊಡಿಸಿ ಲೂಟಿ, ಕೊಲೆ, ಸ್ತ್ರೀ ಅಪಹಾರ ಇವುಗಳ ಸವಲತ್ತು ಇವೆಯೆಂದು ದಾಳಿಗಾರರಿಗೆ ಹುರಿದುಂಬಿಸಿ ಮೋಟಾರಿನಲ್ಲಿ ಕೂಡಿಸಿ ಅವರನ್ನು ಶಿಬಿರಗಳಿಗೆ ಕಳುಹಿಸುತ್ತಿದ್ದಾನೆ. ಅಲ್ಲದೆ ಮುಸ್ಲಿಂ ಲೀಗ ಪ್ರಮುಖರು ಪ್ರತ್ಯಕ್ಷವಾಗಿ ದಾಳಿಗಾರರಿಗೆ ಸಹಾಯ ನೀಡಲು ಪ್ರಚಾರ ನಡೆಸುತ್ತಿದ್ದಾರೆಂದು ಅಮೇರಿಕನ್ ಹಾಗೂ ಬ್ರಿಟಿಶ್ ಪತ್ರಿಕಾ ಪ್ರತಿನಿಧಿಗಳ ವರದಿಯಿಂದ ಕಂಡು ಬರುತ್ತದೆ.

ಗಡಿನಾಡಿನ ಮುಖ್ಯ ಮಂತ್ರಿಗಳಾದ ಅಬ್ದುಲ ಕೈಯಾಮಖಾನರು ನವಂಬರ ೧ನೇ ತಾ. ದಿನ ಪತ್ರಿಕಾ ಪರಿಷತ್ತಿನಲ್ಲಿ ಮಾತನಾಡುತ್ತ, ಕಾಶ್ಮೀರವು ಹಿಂದುಸ್ತಾನ ಒಕ್ಕೂಟದಲ್ಲಿ ಸೇರಿದ್ದರಿಂದ ಇಸ್ಲಾಮಕ್ಕೆ ಗಂಡಾಂತರ ಬಂದಿದೆಯೆಂದೂ ಇದಕ್ಕಾಗಿ ಇಸ್ಲಾಮ ರಾಷ್ಟ್ರಗಳ ಪರಿಷತ್ತು ಕೂಡಿಸಬೇಕೆಂದೂ ಇಸ್ಲಾಮಕ್ಕೆ ಬಂದ ಈ ಗಂಡಾಂತರವನ್ನು ಇಸ್ಲಾಮ ರಾಷ್ಟ್ರಗಳೆಲ್ಲ ಕೂಡಿಯೇ ಎದುರಿಸಬೇಕೆಂದೂ ಪಾಕಿಸ್ತಾನವು ಕಾಶ್ಮೀರದ ಅಧುನ ಸರಕಾರವನ್ನು ಮನ್ನಿಸತಕ್ಕದೆಂದೂ ಹೇಳಿದ್ದಾರೆ. ಕಾಶ್ಮೀರವನ್ನು ಪಾಕಿಸ್ತಾನದಲ್ಲಿ ಸೇರಿಸಿಕೊಳ್ಳುವ ಬಗ್ಗೆ ಪಠಾಣರು ಕೊನೆಯ ಮುಸಲ್ಮಾನನಿರುವವರೆಗೆ ಹೋರಾಡಲು ನಿರ್ಧರಿಸಿದ್ದಾರೆಂದೂ ಅವರು ಒಂದು ಹೇಳಿಕೆಯಲ್ಲಿ ನುಡಿದಿದ್ದಾರೆ.

ಆಜಾದ ಕಾಶ್ಮೀರ ಸರಕಾರದ ಪ್ರಕಟನೆಗಳನ್ನು ಪಾಕಿಸ್ತಾನದ ಆಕಾಶವಾಣಿಯಲ್ಲಿ ಬಿತ್ತರಿಸಲಾಗುತ್ತಿದೆ. ಗಡಿನಾಡಿನಿಂದ ಬರುವ ದಾಳಿಗಾರರಿಗೆ ಪಾಕಿಸ್ತಾನವು ಮೋಟಾರು ವಾಹನ ಒದಗಿಸಿಕೊಡುತ್ತಿದೆ. ಪಾಕಿಸ್ತಾನದ ಮುಖ್ಯ ಸೈನ್ಯ ತಾಣಗಳಾದ ಅಬೋಟಾಬಾದದಲ್ಲಿ ೬ ಸಾವಿರ, ಗೋಡಾದಲ್ಲಿ ೭೫೦೦, ವಜೀರಾಬಾದದಲ್ಲಿ ೫ ಸಾವಿರ, ಜೆಹಲಂದಲ್ಲಿ ೫ ಸಾವಿರ ಹೀಗೆ ದಾಳಿಗಾರರಿದ್ದು ಈ ನಗರಗಳಲ್ಲಿ ಶಿಬಿರ ತೆರೆದು ದಾಳಿಗಾರರಿಗೆ ಸೈನ್ಯ ಶಿಕ್ಷಣ ಕೊಡಲಾಗುತ್ತಿದೆ. ಗಾಯಗೊಂಡ ದಾಳಿಗಾರರಿಗೆ ಈ ನಗರಗಳಲ್ಲಿ ಉಪಚಾರವಾಗುತ್ತದೆ.

ಪಾಕಿಸ್ತಾನದ ಹೊರತು ದಾಳಿಗಾರರಿಗೆ ಮೋಟಾರು ಪೆಟ್ರೋಲು ಮೊದಲಾದ ಯುದ್ಧ ಸಾಮಗ್ರಿಗಳನ್ನು ಇನ್ನಾರು ಕೊಡಬೇಕು? ಪೆಟ್ರೋಲಂತೂ ಸೀದಾ ಪದಾರ್ಥವಿದ್ದು ಸರಕಾರದ ಅನುಮತಿ ಇಲ್ಲದೆ ಅದು ದೊರಕಲಾರದು. ಗಡಿನಾಡಿನಲ್ಲಿ ಸರಕಾರೀ ಮೋಟಾರಲ್ಲದೆ ಬೇರೆ ಮೋಟಾರು ಓಡಾಡಬಾರದೆಂದು ಪ್ರತಿಬಂಧ ಕಾಜ್ಞೆ ಇದೆ. ದಾಳಿಗಾರರು ಉಪಯೋಗಿಸುವ ಮೋಟಾರುಗಳ ಮೇಲೆ ಪಾಕಿಸ್ತಾನ ಪ್ಲೇಟ ನಂಬರುಗಳಿವೆ. ಮುರಿದ ಮೋಟರುಗಳನ್ನು ರಾವಳಪಿಂಡಿಯ ಸರಕಾರಿ ವರ್ಕಶಾಪದಲ್ಲಿ ದುರಸ್ತಿ ಮಾಡಿಕೊಡಲಾಗುತ್ತಿದೆ.

ದಾಳಿಗಾರರು ಉಪಯೋಗಿಸುವ ಶಸ್ತ್ರಾಸ್ತ್ರಗಳು ಅತ್ಯಾಧುನಿಕವಿದ್ದು ದಾಳಿಗಾರರ ಸಂಖ್ಯೆ ಹೆಚ್ಚಾದಂತೆ ಅವರಲ್ಲಿ ಹೊಸ ಹೊಸ ಶಸ್ತ್ರಾಸ್ತ್ರಗಳೂ ಹೊರಬರುತ್ತಿವೆ. ದಾಳಿಗಾರರು ವಾಯರಲೆಸ ಉಪಕರಣವನ್ನು ಬಳಸುವಾಗಿನ ಸಾಂಕೇತಿಕ ಭಾಷೆ ವಿಭಜನೆ ಹೊಂದುವ ಮೊದಲು ಹಿಂದುಸ್ತಾನ ಸೈನ್ಯ ಬಳಸುತ್ತಿದ್ದ ಸಾಂಕೇತಿಕ ಭಾಷೆಯೇ ಆಗಿದೆ. ಗುಡ್ಡಗಾಡ ಜನರಿಗೆ ವಾಯರಲೆಸ್ ಯಂತ್ರಗಳನ್ನು ಪಾಕಿಸ್ತಾನವಲ್ಲದೆ ಬೇರೆಯಾರು ಪೂರೈಸುವರು? ದಾಳಿಗಾರರಲ್ಲಿ ಪಾಕಿಸ್ತಾನದ ಸೈನ್ಯಾಧಿಕಾರಿಗಳಿದ್ದಾರೆ. ಅವರು ರಜೆಯ ಮೇಲಿರುವರೆಂದೂ ದಾಳಿಯಲ್ಲಿ ಭಾಗವಹಿಸಲು ಇಚ್ಛಿಸಿದವರಿಗೆ ರಜೆ ಕೊಟ್ಟು ಕಳಿಸಲಾಗುತ್ತಿದೆಯೆಂದೂ ಗೊತ್ತಾಗಿದೆ. ಇವೆಲ್ಲವುಗಳ ಮೂಲಕ ಈ ದಾಳಿಯಲ್ಲಿ ಪಾಕಿಸ್ತಾನದ ಅಂಗವಿದ್ದೇ ಇದೆಯೆಂದು ಸ್ಪಷ್ಟವಾಗಿ ಕಂಡು ಬರುತ್ತದೆ.

ಹಿಂದುಸ್ತಾನದ ಧೋರಣೆ

ಕಾಶ್ಮೀರದ ಮಹಾರಾಜರು ಹಿಂದುಸ್ತಾನ ಒಕ್ಕೂಟದ ಸೇರ್ಪಡೆ ಪತ್ರಕ್ಕೆ ಅಂಕಿತ ಹಾಕಿದ್ದರೂ ಕಾಶ್ಮೀರ ಪ್ರಜೆಗಳು ಅದನ್ನು ಬಹುಮತದಿಂದ ಮನ್ನಿಸದಿದ್ದರೆ ಅದು ರದ್ದಾಗುವದೆಂದು ಹಿಂದುಸ್ತಾನ ಸರಕಾರವು ಮೊದಲಿನಿಂದಲೂ ಹೇಳುತ್ತ ಬಂದಿದೆ. ಅದ್ದರಿಂದ ಕಾಶ್ಮೀರವು ಹಿಂದೀ ಒಕ್ಕೂಟದಲ್ಲಿ ಸೇರ್ಪಡೆ ಹೊಂದುವ ಬಗ್ಗೆ ಕಾಶ್ಮೀರ ಪ್ರಜೆಗಳ ನಿರ್ಣಯವೇ ಕೊನೆಯದು. ಜನಮತಗಣನೆ ಜರುಗಲು ಸಂಸ್ಥಾನದಲ್ಲಿ ಶಾಂತ ವಾತಾವರಣ ಉಂಟಾಗುವದು ಅತ್ಯಗತ್ಯ. ಮೊದಲು ದಾಳಿಗಾರರು ಸಂಸ್ಥಾನದಿಂದ ಹೊರಟುಹೋಗಿ ಜನರಿಗೆ ದಾಳಿಯ ಭೀತಿಯನ್ನು ತಪ್ಪಿಸಬೇಕು. ಅಂತಹ ಶಾಂತ ಪರಿಸ್ಥಿತಿಯು ಉಂಟಾಗುವ ವರೆಗೆ ಹಿಂದೀ ಸೈನಿಕರು ಕಾಶ್ಮೀರದಲ್ಲಿದ್ದು ಅಲ್ಲಿಯ ಜನರ ರಕ್ಷಣೆಯ ಭಾರ ಹೊರುವ ಹಾಗೆ ವ್ಯವಸ್ಥೆ ಮಾಡಬೇಕಾದುದು ಹಿಂದುಸ್ತಾನ ಸರಕಾರದ ನೈತಿಕ ಹೊಣೆಯಾಗಿದೆ. ಪಾಕಿಸ್ತಾನ ಸರಕಾರದೊಡನೆ ಈ ಬಗ್ಗೆ ಅನೇಕ ಸಲ ಚರ್ಚೆ ನಡೆಯಿಸಿ ದಾಳಿಗಾರರನ್ನು ಪಾಕಿಸ್ತಾನ ಸೀಮೆಯಲ್ಲಿ ಹಾದುಗೊಡಬೇಡಿರೆಂದೂ, ಅವರಿಗೆ ಯಾವದೇ ಬಗೆಯ ಆಶ್ರಯ ಉತ್ತೇಜನ ಕೊಡಬೇಡಿರೆಂದೂ ಅದಷ್ಟೋ ಬೇಡಿಕೊಂಡಾಯಿತು. ಆದರೆ ಇದರಿಂದ ಯಾವ ಪರಿಣಾಮವೂ ಆಗಲಿಲ್ಲ. ಇನ್ನು ಈ ದಾಳಿಗಾರರಿಂದ ಹಿಂದುಸ್ತಾನದ ಶಾಂತಿಗೇ ಭಂಗಬರಬಹುದೆಂದು ಕಂಡು ಬಂದದ್ದರಿಂದ ಈ ಪ್ರಕರಣವನ್ನು ಭದ್ರತಾ ಮಂಡಲದೆದುರು ಮಂಡಿಸಲಾಯಿತು.

ಈ ಶ್ವೇತಪತ್ರದಲ್ಲಿ ಹೇಳಲಾದ ಎಲ್ಲ ಮಾತುಗಳಿಗೂ ಆಧಾರಭೂತವಾದ ಅನೇಕ ಕಾಗದಪತ್ರಗಳನ್ನು ಶ್ವೇತಪತ್ರದ ಪರಿಶಿಷ್ಟದಲ್ಲಿ ಕೊಡಲಾಗಿದೆ.

ಸುದ್ದಿಗಾರರ ಸಭೆಯಲ್ಲಿ ಶ್ರೀ ಶೇಖ ಅಬ್ದುಲ್ಲಾರ ಹೇಳಿಕೆ

ಶ್ರೀ. ಶೇಖ ಅಬ್ದುಲ್ಲಾರು ಕಾಶ್ಮೀರದ ಮುಖ್ಯ ಮಂತ್ರಿಪದದ ಹೊಣೆಗಾರಿಕೆಯನ್ನು ಸ್ವೀಕರಿಸಿದ ನಂತರ ಸೇರಿದ ಸುದ್ದಿಗಾರರ ಪ್ರಥಮ ಸಭೆಯಲ್ಲಿ ಕಾಶ್ಮೀರದ ವಿಷಯಕ್ಕೆ ಹೀಗೆ ನುಡಿದರು.

ದಾಳಿಗಾರರನ್ನು ಜಮ್ಮು ಕಾಶ್ಮೀರಗಳಿಂದ ಹೊಡೆದಟ್ಟುವ ನಮ್ಮ ಜನರ ನಿರ್ಧಾರವು ಅಚಲದಾಗಿದೆ ನಾವು ಹಿಂದುಸ್ತಾನದೊಡನೆಯೇ ಬದುಕಿ ಬಾಳಬೇಕೆಂದಿದ್ದೇವೆ. ಕಾಶ್ಮೀರಿಗಳಲ್ಲಿ ಪಾಕಿಸ್ತಾನದ ಬಗ್ಗೆ ಅಲ್ಪಸ್ವಲ್ಪ ಆಕರ್ಷಣೆ ಮತ್ತು ಮೋಹವಿದ್ದವರಿಗೆ ಈಗ ಭ್ರಮ ನಿರಸನವಾಗಿದೆ. ಕೊಳ್ಳೆ ಸುಲಿಗೆ ಕೊಲೆ ಸ್ತ್ರೀಯರ ಮಾನಭಂಗ ಸ್ತ್ರೀ ಅಪಹರಣ ಮುಂತಾದ ಪಾಕಿಸ್ತಾನದವರ ಅವಿವೇಕದ ಅನಾಚಾರಗಳನ್ನು ಕಾಶ್ಮೀರದ ಪಾಕಿಸ್ತಾನ ಪಕ್ಷಪಾತಿಗಳು ಕಣ್ಣಾರೆ ಕಂಡಿದ್ದಾರೆ.

ಕಾಶ್ಮೀರ ಮಹಾರಾಜರ ಹೊಸ ಧೋರಣೆಯನ್ನು ಸ್ವಾಗತಿಸುವದಕ್ಕಾಗಿ ಕಾಶ್ಮೀರದಲ್ಲಿ ಸಂತೋಷ ಸಪ್ತಾಹ ನಡೆಯುವದು.

ಕಾಶ್ಮೀರದ ಬಗ್ಗೆ ಭದ್ರತಾ ಮಂಡಲದಲ್ಲಿ ನಡೆದಿರುವ ಚರ್ಚೆಯಿಂದ ನಾವು ಎದೆಗುಂದಬೇಕಾಗಿಲ್ಲ. ನಮ್ಮ ಧ್ಯೇಯವೂ ಮಾರ್ಗವೂ ನ್ಯಾಯವಾಗಿರುವದರಿಂದ ನಮಗೆ ಒಂದಿಷ್ಟೂ ಹೆದರಿಕೆಯಿಲ್ಲ ಹಾಗೂ ಯಶಸ್ಸು ನಮಗೆ ಕಟ್ಟಿಟ್ಟದ್ದೇ. ಈ ಎಲ್ಲ ಅನಾಯುತಕ್ಕೆ ಮೊದಲಿನ ಪ್ರಭುಗಳಾದ ಬ್ರಿಟಿಶರು ಭಾರತದ ಚಿತ್ರವನ್ನು ವಿಕಾರವಾಗಿ ಚಿತ್ರಿಸಿದ್ದೇ ಕಾರಣ. ಬ್ರಿಟಿಶರ ಕೈವಾಡದಿಂದಲೇ ಹಿಂದು ಮುಸಲ್ಮಾನರು ಪರಸ್ಪರ ಕೂಡಿ ಬಾಳಲಾರರೆಂಬ ಭಾವನೆ ಉಂಟಾಗಿದೆ. ಆದರೆ ಹಿಂದುಸ್ತಾನದಲ್ಲಿ ಇನ್ನೂ ೫ ಕೋಟಿ ಮುಸಲ್ಮಾನರಿದ್ದಾರೆಂಬುದನ್ನು ಮರೆಯ ಕೂಡದು. ಹಿಂದು ಮುಸಲ್ಮಾನರ ಬಾಂಧವ್ಯಕ್ಕೆ ಕಾಶ್ಮೀರವು ತವರೂರಂತಿದೆ ಎಂಬುದನ್ನು ಮೊದಮೊದಲು ಹಿಂದುಸ್ತಾನದ ಜನ ಕೂಡ ನಂಬಿರಲಿಲ್ಲ. ಕಾಶ್ಮೀರದ ಸ್ವಾತಂತ್ರ್ಯಕ್ಕಾಗಿ ಎಲ್ಲ ಜಾತಿಯ ಜನರೂ ಹೋರಾಡಲು ಸಿದ್ಧರಾಗಿದ್ದಾರೆ.

ಹಿಂದುಗಳಲ್ಲಿಯ ಭೇದಭಾವವನ್ನು ಕೊನೆಗಾಣಿಸಲು ಕಟ್ಟಳೆ ಮಾಡಬೇಕೆಂಬ ಗೊತ್ತುವಳಿಯು ಮಧ್ಯಪ್ರಾಂತ ಶಾಸನ ಸಭೆಯಲ್ಲಿ ಮಂಡಿಸಲ್ಪಟ್ಟಾಗ, ಶ್ರೀ. ಧನಜಿತ ಅಲಿಯವರು, ಅಂತರ್ಜಾತೀಯ ವಿವಾಹಗಳಿಗೆ ಅಸ್ಪದ ಕೊಡುವ ಹೊಸ ಕಾನೂನು ಕಾರ್ಯಕಾರಿಯಾಗಲು ಶಾಸ್ತ್ರ ಬಹಾಯುವೆಂದು ಹೇಳಿದರು.

ಹಿರಿಯೋಲಗದ ಚಟುವಟಿಕೆಗಳು

ತಾ ೩ ರಂದು ಶ್ರೀ ರೋಹಿಣಿ ಕುಮಾರ ಚೌಧರಿಯವರು ಮುಂಗಡ ಪತ್ರಿಕೆಯ ಬಗ್ಗೆ ಟೀಕೆ ಮಾಡುತ್ತ ಬಡವರ ಮತ್ತು ಶ್ರೀಮಂತರ ನ್ಯಾಯ ತೀರಿಸುವ ಕೆಲಸದಲ್ಲಿ ಅರ್ಥ ಮಂತ್ರಿಗಳು ಬೆಕ್ಕುಗಳಿಗೆ ಚಿಕ್ಕಿಯನ್ನು ಹಂಚಿಕೊಟ್ಟ ಮಂಗನಂತೆ ವರ್ತಿಸಿದ್ದಾರೆ ಎಂದು ಹೇಳಿ ಬಹು ದೊಡ್ಡ ಭಾಗವನ್ನು ತಮ್ಮ ಸಲುವಾಗಿ (ಸರಕಾರ) ಅಪಹರಿಸಿದ್ದಾರೆ ಎಂದು ಸಭೆಯವರನ್ನು ನಗೆಗಡಲಲ್ಲಿ ತೇಲಿಸಿದರು.

ತಾ ೪ ರಂದು ಶ್ರೀ ಮೋಹನಲಾಲ ಸಾಟಿ ಅವರು ಈ ಮುಂಗಡ ಪತ್ರಿಕೆಯೆಂದರೆ ಹಳೆಯ ಹೆಂಡತಿಗೆ ಹೊಸ ಸೀರೆ ಉಡಿಸಿ ಮುಂದೆ ತಂದಂತಿದೆ ಎಂದು ನುಡಿದರು. ಇದಕ್ಕೆ ಅರ್ಥಸಚಿವರು ಹೊಸ ಹುಡುಗಿಗಿಂತ ಹೊಸ ಸೀರೆಯ ಉಟ್ಟ ಸುಂದರ ಹಳೆಯ ಹೆಂಡತಿಯೇ ಲೇಸೆಂದು ಉತ್ತರಿಸಿದರು.

ಮುಂಗಡ ಪತ್ರಿಕೆಯ ಟೀಕೆಗೂ ಚರ್ಚೆಗೂ ಅರ್ಥಸಚಿವರು ಕೊಟ್ಟ ಉತ್ತರದ ಸಾರವು ಹೀಗಿದೆ.

ಅರ್ಥ ಸಚಿವರ ಉತ್ತರ

ಮುಂಗಡ ಪತ್ರಿಕೆಯ ಬಗ್ಗೆ ಅನೇಕರು ನನ್ನನ್ನು ಅಭಿನಂದಿಸಿದ್ದಾರೆ. ಅಭಿನಂದನೆಗಿಂತ ಸಹಾನುಭೂತಿಯ ಅವಶ್ಯಕತೆಯು ಹೆಚ್ಚಾಗಿದೆ. ಹೋದ ವರ್ಷದ ಮುಂಗಡ ಪತ್ರಿಕೆಯಿಂದ ಹೋದ ವಿಶ್ವಾಸವನ್ನು ಪುನಃ ಈ ಸಲ ದೊರಕಿಸಬೇಕಾಗಿದೆ. ಅಲ್ಲದೆ ವಿಭಜನೆಯಿಂದ ಉಂಟಾಗಿರುವ ಅಸ್ತವ್ಯಸ್ತತೆಯನ್ನೂ ನಾನು ಎದುರಿಸಬೇಕಾಗಿದೆ. ಈ ಮುಂಗಡಪತ್ರಿಕೆಯಲ್ಲಿ ಬಡವರಿಗಾಗಲಿ ಬಂಡವಲಗಾರರಿಗಾಗಲೀ ಪ್ರತ್ಯಕ್ಷಾಪ್ರತ್ಯಕ್ಷವಾಗಿ ಏನೂ ಲಾಭ ಕಂಡುಬಾರದಿರಬಹುದು. ಸ್ವತಂತ್ರ ಭಾರತದ ಪ್ರಥಮ ಮುಂಗಡ ಪತ್ರಿಕೆಯು ಇದಾಗಿರುವದರಿಂದ ನಾನು ಇದನ್ನು ಭದ್ರವಾದ ಆರ್ಥಿಕ ತಳಹದಿಯ ಮೇಲೆ ನಿಲ್ಲಿಸಲು ಪ್ರಯತ್ನಪಟ್ಟಿದ್ದೇನೆ. ಇನ್ನು ೨೦ ವರ್ಷಗಳ ಮೇಲೆ ಫಲಪ್ರದವಾಗುವ ಯೋಜನೆಗಳ ಬೆನ್ನು ಹತ್ತಲು ನಾನು ಹೋಗಿಲ್ಲ. ಇಂದಿನ ಮತ್ತು ನಾಳಿನ ಆರ್ಥಿಕ ಅಗತ್ಯತೆಯನ್ನಷ್ಟೇ ಗಮನಿಸಿದ್ದೇನೆ. ಪ್ರತಿಯೊಬ್ಬ ಪ್ರಾಮಾಣಿಕ ಮನುಷ್ಯನಿಗೂ ಪ್ರಾಮಾಣಿಕ ಕೆಲಸ ಸಿಕ್ಕು ದೇಶದಲ್ಲಿ ಹಸಿವು, ಬಡತನ, ರೋಗ ಇಲ್ಲದಂತಾದರೆ ಸಾಕು. ಇದು ಹೇಗಾದರೆ ಸಾಧಿಸಬಹುದೋ ಅದೇ ನಿಜವಾದ ಸಮತಾವಾದ. ಕೇವಲ ತಾತ್ವಿಕ ಆಡಂಬರಕ್ಕಾಗಿ ಉದ್ಯೋಗಗಳ ರಾಷ್ಟ್ರೀಕರಣವಾಗಿ ಶ್ರೀಮಂತರ ಸೊತ್ತಿನ ಸುಲಿಗೆಯಾಗುವದಾದರೆ ಅದು ನಮಗೆ ಬೇಡ. ಈ ಮಾತಿಗೆ ಒಪ್ಪಿದರೆ ದೇಶದ ಉತ್ಪಾದನೆ ಹೆಚ್ಚಲು ಪರ್ಯಾಯವಾಗಿ ಪ್ರೋತ್ಸಾಹ ಕೊಟ್ಟಂತೆಯೇ.

ಮಧ್ಯಮ ವರ್ಗದವರಿಗೆ ಪರಿಹಾರ

ಕೊಲ್ಲುವದಕ್ಕಾಗಿಯೇ ಬಂಡವಲದಾರರನ್ನು ಕೊಬ್ಬಿಸಲಾಗುತ್ತಿದೆಯೆಂದು ಟೀಕೆಯಾಗಿದೆ. ಆದರೆ ಆಕಳವು ಹೆಚ್ಚು ಹಾಲು ಕೊಡಲೆಂದು ಅದನ್ನು ಮೇಯಿಸುತ್ತೇನೆ. ಅದನ್ನು ಕೊಲ್ಲುವ ಇಚ್ಛೆ ನನಗಿಲ್ಲ. (ನಗು) ಬಂಡವಲದಾರರಿಗೆ ಕೊಟ್ಟ ಸವಲತ್ತುಗಳಿಂದ ಉತ್ಪಾದನೆ ಹೆಚ್ಚಾಗದಿದ್ದರೆ ಮತ್ತು ಕರ ವಸೂಲಿ ಹೆಚ್ಚಾಗದಿದ್ದರೆ ಕೊಟ್ಟ ಸವಲತ್ತುಗಳನ್ನೆಲ್ಲ ವರ್ಷಾಂತ್ಯಕ್ಕೆ ಹಿಂತೆಗೆದುಕೊಳ್ಳಬೇಕಾಗುವದು. (ಕೇಳಿರಿ ಕೇಳಿರಿ)

ನನ್ನ ಕರಹೇರುವ ಪದ್ಧತಿಯಿಂದ ಉತ್ಪಾದನೆ ಹೆಚ್ಚಾಗುವದೆಂದು ನನಗೆ ಭರವಸೆಯಿದೆ. ಇದರಿಂದ ದೊಡ್ಡ ಬಂಡವಲಗಾರರಿಗಷ್ಟೇ ಅಲ್ಲದೆ ಸಣ್ಣ ಮತ್ತು ಮಧ್ಯಮ ವರ್ಗದ ಬಂಡವಲಗಾರರಿಗೂ ಲಾಭವಿದೆ. ಮಧ್ಯಮ ವರ್ಗದವರೇ ನಮ್ಮ ಸಮಾಜದ ಆಧಾರಸ್ತಂಭ. ಆದ್ದರಿಂದ ತಜ್ಞ ಸಮಿತಿಯ ಪರಿಶೀಲನೆಯ ಕಾಲಕ್ಕೆ ಮಧ್ಯಮ ವರ್ಗದವರಿಗೆ ಪರಿಹಾರ ಕಲ್ಪಿಸುವಂಥ ಸೂಚನೆಗಳನ್ನು ಸಹಾನುಭೂತಿ ಪೂರ್ವಕವಾಗಿ ವಿಚಾರಿಸುತ್ತೇನೆ.

ಆಹಾರಕ್ಕಾಗಿ ೧೪ ಕೋಟಿ

ವಿದೇಶದಿಂದ ತರಿಸುವ ಆಹಾರ ಧಾನ್ಯದ ಬಗ್ಗೆ ೧೪ ಕೋಟಿ ರೂ. ಗಳನ್ನು ತೆಗೆದಿಡಲಾಗಿದೆ. ಈ ಸಾರೆ ಚಿಕ್ಯಾಗೋ ಕಾಳಿನ ಪೇಟೆಯಲ್ಲಿ ದರಗಳು ಇಳಿದಿರುವದರಿಂದ ನಮಗೆ ಈ ಬಗ್ಗೆ ಬಹಳ ಹಣ ತೆತ್ತುವ ಅವಶ್ಯಕತೆಯಿಲ್ಲವೆಂದು ತಿಳಿದಿದ್ದೇನೆ. ಎಲ್ಲ ಸುಗಮವಾಗಿ ಸಾಗಿದಾದರೆ ನಿರಾಶ್ರಿತರಿಗಾಗಿ ಕಾದಿಟ್ಟ ಹಣದಲ್ಲಿಯೂ ಉಳಿತಾಯವಾಗಬಹುದು.

ಬೇಗಂ ಐಝಾಜ ರಸೂಲರು ವಿವಾಹ ಕರ ಹೇರಬೇಕೆಂದು ಸೂಚಿಸಿದರು. ಇವರೊಡನೆ ಮೊದಲೇ ವಿಚಾರವಿನಿಮಯವಾಗಿದ್ದರೆ ನಾನು ಜನನ ಕರ ಹಾಗೂ ಮರಣ ಕರ ಎರಡನ್ನೂ ಹೇರುತ್ತಿದ್ದೆ. (ನಗು) ಆದರೆ ವಿವಾಹಿತರ ಮೇಲೆ ಕರ ಹೇರುತ್ತಿತ್ತೋ ಅವಿವಾಹಿತರ ಮೇಲೋ ಹೇಳಲಾರೆ. (ನಗು) (ಒಂದು ಧ್ವನಿ ಪಾಪ ಭಾಭಾ ಅವಿವಾಹಿತರು ಎಂದಿತು)

ಬಡವರಿಗೆ ಪರಿಹಾರ

ಬಡವರ ಮೇಲೆ ಭಾರ ಬೀಳದಂತಹ ಹೊಸ ಕರಗಳನ್ನು ಹುಡುಕುತ್ತಿದ್ದೇನೆ. ಉಪ್ಪಿನ ಕರ ರದ್ದಾಗಿರುವದರಿಂದ ಕೇಂದ್ರದ ಯಾವ ಕರವನ್ನು ತೆಗೆದು ಬಡವರಿಗೆ ಪರಿಹಾರ ಒದಗಿಸಬಹುದು? ಹೆಚ್ಚು ಆದಾಯದ ಕೆಲಸಗಳನ್ನು ಕೊಟ್ಟು ಅವರಿಗೆ ನೆರವು ನೀಡಬಹುದಾಗಿದೆ. ಈ ದೃಷ್ಟಿಯಿಂದ ನೋಡಿದರೆ ನಾನು ಬಡವರನ್ನು ಕಡೆಗಣಿಸಿಲ್ಲ. ಬಡವರಿಗೆ ಪರಿಹಾರ ಸಿಕ್ಕಿದೆಯೋ ಇಲ್ಲವೋ ಎಂಬುದನ್ನು ನೋಡಬೇಕಾದರೆ ಮೂಲಧನ ಮುಂಗಡ ಪತ್ರಿಕೆಯನ್ನು ನೋಡಬೇಕು. ಪುನರ್ರಚನೆಯ ಕೆಲಸಕ್ಕಾಗಿಯೇ ೧೩೩ ಕೋಟಿ ೫೦ ಲಕ್ಷ ರೂಪಾಯಿಗಳ ಮೂಲಧನ ಕೊಡಲಾಗಿದೆ. ಇನ್ನು ಪರಿಜನರ ಉದ್ಧಾರದ ಕಾರ್ಯವು ಪ್ರಾಂತಗಳಿಗೆ ಸಂಬಂಧಿಸಿದ್ದು. ಇದಕ್ಕಾಗಿ ಪ್ರಾಂತಗಳಿಗೆ ೩೦ ಕೋಟಿ ರೂಪಾಯಿಗಳ ಧನ ಸಹಾಯವನ್ನು ಅನಿರ್ಬಂಧವಾಗಿ ಕೊಡಲಾಗಿದೆ. ಇನ್ನು ಹೊಸ ಘಟನೆಯು ಅಮಲಿನಲ್ಲಿ ಬರಲಿದೆ. ನಾವು ನಮ್ಮ ಮುಂದಿನವರಿಗೆ ಆಡಳಿತೆಯ ಮತ್ತು ಹಣಕಾಸಿನ ಅತ್ಯುತ್ತಮ ಯಂತ್ರವನ್ನು ರಚಿಸಿಕೊಡಬೇಡವೆ? ನಾಳೆ ನನ್ನ ಸ್ಥಳಕ್ಕೆ ಬರತಕ್ಕವರಿಗೆ ಕಾರ್ಯಕ್ಷಮ ಪದ್ಧತಿಯನ್ನು ಒಪ್ಪಿಸಬಲ್ಲೆನಾದರೆ ಮಾತ್ರ ನಾನು ಕೃತಾರ್ಥನಾಗುತ್ತೇನೆ. (ಹರ್ಷೋದ್ಗಾರ)

ಕಾಶ್ಮೀರದ ಬಗ್ಗೆ ಪಂಡಿತ ನೆಹರು ಅವರ ಹೇಳಿಕೆ

ತಾ, ೫ರಂದು ಪಂ. ಜವಾಹರಲಾಲರು ಕಾಶ್ಮೀರದ ಬಗ್ಗೆ ಕೆಲ ಮಾತುಗಳನ್ನು ಹೇಳುತ್ತ ಹಿಂದಿ ಸೈನ್ಯ ಪಡೆಯ ಶೌರ್ಯ ಸಾಹಸವನ್ನೂ ಸಹನಶೀಲತೆ ಶಿಸ್ತುಗಳನ್ನೂ ಕೊಂಡಾಡಿದರು. ಕಾಶ್ಮೀರದ ಮಹಾರಾಜರು ಅಂದೇ ಹೊರಡಿಸಿದ ಜಾಹೀರನಾಮೆಯ ವಿಷಯವನ್ನೂ ಅರುಹಿದರು. ಮಹಾರಾಜರು ಶೇಖ ಅಬ್ದುಲ್ಲಾರ ನೇತೃತ್ವದಲ್ಲಿ ಜನಾದರಣೀಯ ನಡುಗಾಲ ಸರಕಾರ ಸ್ಥಾಪಿಸಿದ ಸುದ್ದಿಯನ್ನೂ, ಸಂಸ್ಥಾನದಲ್ಲಿಯ ಪರಿಸ್ಥಿತಿಯು ಸ್ತಿಮಿತಕ್ಕೆ ಬರುತ್ತಲೇ ಪ್ರೌಢ ಮತದಾನ ಪದ್ಧತಿಯ ತಳಹದಿಯ ಮೇಲೆ ಒಂದು ರಾಷ್ಟ್ರೀಯ ಸಭೆ ಕರೆದು ಈ ಸಭೆಯು ಮುಂದೆ ಸಂಸ್ಥಾನದ ರಾಜ್ಯಘಟನೆಯನ್ನು ಸಿದ್ಧಪಡಿಸುವದೆಂದೂ ಮಹಾರಾಜರು ಸಾರಿದ್ದಾರಾಗಿ ಪಂ. ಜವಾಹರರು ತಿಳಿಸಲು ಸಭೆಯು ಹರ್ಷೋದ್ಗಾರಗಳನ್ನು ಮೊಳಗಿಸಿತು.

ಭಾರತದ ಉಪಮುಖ್ಯಮಂತ್ರಿಗಳಾದ ಸರದಾರ ಪಟೇಲರು ಸಂಸ್ಥಾನಗಳಂಥ ಜಟಿಲ ಸಮಸ್ಯೆಯನ್ನು ಅತ್ಯಂತ ಕುಶಲತೆಯಿಂದ ಬಿಡಿಸಿದ್ದಕ್ಕೆ ಅವರನ್ನು [illegible] ಕೊಂಡಾಡುವಾಗ [illegible] ಜಯ ಜಯಕಾರಗಳಿಂದ ಅದನ್ನು ಸ್ವಾಗತಿಸಿತು.

ಹಿಂದುಸ್ಥಾನದ ವಿದೇಶ ಧೋರಣ

ಪ್ರೊ. ರಂಗಾ ಮತ್ತು ಸೇಠ ಗೋವಿಂದದಾಸರು ಕಡಿತದ ಸೂಚನೆಗಳನ್ನು ಮುಂದಿಟ್ಟು ಹಿಂದುಸ್ಥಾನದ ವಿದೇಶ ಧೋರಣವನ್ನು ಕಾಮನವೆಲ್ಥ ದೇಶಗಳಲ್ಲಿಯ ಹಿಂದೀಯರ ಸ್ಥಿತಿಗತಿಗಳನ್ನೂ ಚರ್ಚಿಸಿದರು. ಪಂ. ಕುಂಝ್ರು ಅವರು, ವಿದೇಶದ ಬಗ್ಗೆ ಹಿಂದುಸ್ಥಾನವು ಯಾವ ನಿಶ್ಚಿತ ಧೋರಣವನ್ನೂ ತಳೆದಿಲ್ಲವಾದ್ದರಿಂದ ವಿದೇಶದಲ್ಲಿದ್ದ ಭಾರತದ ಪ್ರತಿನಿಧಿಗಳು ಸಿಕ್ಕ ಹಾಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾರಾಗಿ ಹೇಳಿ ನಮ್ಮ ವಿದೇಶಿ ಧೋರಣವು ವಸ್ತುಸ್ಥಿತಿಗೆ ಅನುಗುಣವಾಗಿರಬೇಕೆಂದು ನುಡಿದರು. ಶ್ರೀ. ಕೆ. ಸಂತಾನಂರು ಮಾತನಾಡುತ್ತ ಹಿಂದುಸ್ಥಾನದೊಡನೆ ವೈರ ಬೆಳೆಸಿದರೆ ಅದು ಅನಿಷ್ಟಕಾರಕವೆಂದು ಪಾಕಿಸ್ತಾನಕ್ಕೆ ಮನದಟ್ಟಾದರೆ ಮಾತ್ರ ಅದು ಸ್ನೇಹಹಸ್ತ ನೀಡುವದೆಂದೂ ಹಿಂದುಸ್ಥಾನವು ವಾಣಿಜ್ಯ ಮತ್ತು ಮಿಲಿಟರಿ ಸಾಮರ್ಥ್ಯ ಪಡೆದ ಹೊರತು ಅದರ ವಿದೇಶ ಧೋರಣವು ಫಲದಾಯಕವಾಗದೆಂದೂ ಹೇಳಿ ಹಿಂದುಸ್ಥಾನದ ಪ್ರತಿನಿಧಿಗಳು ಯುಕ್ತರಾಷ್ಟ್ರ ಸಂಘದಲ್ಲಿ ಪ್ರತಿಷೇಧಾಧಿಕಾರದ ವಿಷಯಕ್ಕೆ ಸಂದಿಗ್ಧ ಧೋರಣ ವಹಿಸಿದರೆಂದೂ ಆರೋಪಿಸಿದರು. ಅವರ ಭಾಷಣ ಮುಗಿದ ಮೇಲೆ ಹರ್ಷೋದ್ಗಾರವಾಯಿತು.

ಜಗತ್ತಿನ ಪ್ರಜಾಪ್ರಭುತ್ವದ ರಾಷ್ಟ್ರಗಳ ಗುಂಪಿಗೆ ಹಿಂದುಸ್ಥಾನವು ಸೇರಬೇಕೆಂದು ನಾಝೀರುದ್ದೀನ ಅಹಮ್ಮದರು ಪ್ರತಿಪಾದಿಸಿದರು.

ಶ್ರೀ. ಬಿ. ಶಿವರಾವರವರು, ಭದ್ರತಾ ಮಂಡಳಿಯಲ್ಲಿ ಹಿಂದುಸ್ಥಾನದ ಪ್ರತಿನಿಧಿಗಳ ಆಯ್ಕೆ ಯಾವ ಗುಂಪಿಗೂ ಸಂಬಂಧವಿಲ್ಲದಂತಾಗಿದೆಯೆಂದು ಹೇಳಿದರು. ಪ್ರಸಿದ್ಧ ಪಾಪೆಯ ಸರಕಾರದಿಂದ ಅಮೇರಿಕದಲ್ಲಿ ಪಾಕಿಸ್ತಾನದ ಬಗ್ಗೆ ಪ್ರಚಾರ ನಡೆದಿದೆಯೆಂದೂ ಅಮೇರಿಕೆಯಲ್ಲಿ ಪಾಕಿಸ್ತಾನವು ಪ್ರೀತಿಯ ಹುಡುಗನಂತಿದೆಯೆಂದೂ [illegible]. ಅಮೇಲೆ ಧೋರಣ ರಾಜಿಯೊಂದನ್ನು ಮುಖ್ಯ ಮಂತ್ರಿಗಳು ಪ್ರಾರಂಭಿಸಬೇಕೆಂದು ಸೂಚಿಸಿದರು.

ಪಂ. ಜವಾಹರಲಾಲರ ಉತ್ತರ

ವಿದೇಶ ಮಂತ್ರಿಗಳಾದ ಪಂ. ಜವಾಹರರು ಮೇಲಿನ ಮಾತುಗಳಿಗೆ ಉತ್ತರ ಕೊಡುತ್ತ ಹೀಗೆ ಹೇಳಿದರು.

ಇಂಗ್ಲಂಡದಲ್ಲಿಯ ಕೆಲ ವೃತ್ತಪತ್ರಿಕೆಗಳು ಬುದ್ಧಿಪೂರ್ವಕವಾಗಿ ಹಿಂದುಸ್ಥಾನದ ಬಗ್ಗೆ ದ್ವೇಷಪೂರಿತ ಅಪಪ್ರಚಾರ ಮಾಡುತ್ತಿವೆ. ಈ ದೇಶದಲ್ಲಿದ್ದ ಓರ್ವ ಸುದ್ದಿಗಾರನು ಲಂಡನದ ತನ್ನ ಪತ್ರಿಕೆಗೆ ಕಳಿಸಿದ ವರದಿಯೊಂದು ನನ್ನ ಕಡೆಗಿದೆ. ಇಷ್ಟು ದ್ವೇಷಭರಿತ ಮತ್ತು ಸುಳ್ಳಿನಿಂದ ಕೂಡಿದ ವರದಿಯನ್ನು ನಾನೆಂದೂ ನೋಡಿದ್ದಿಲ್ಲ.

ವಿದೇಶ ಸಂಬಂಧದಲ್ಲಿ ನಮ್ಮ ಮೂಲ ಧೋರಣವೇನೆಂದು ವಿವರಿಸಿ ನೋಡಹೋದರೆ ಅದು ಹೆಚ್ಚು ಹೆಚ್ಚು [illegible]ವಾಗಿ ಕಾಣುವದು. ಈಗಿನ ಪರಿಸ್ಥಿತಿಯಲ್ಲಿ ಸುಸ್ಪಷ್ಟ ವಿದೇಶ ಧೋರಣವು ಕಠಿಣವಿದೆ. ಸಂಧಿಸಾಧಿಸುವ ದೃಷ್ಟಿಯಿಂದ ವಿಚಾರಿಸಿದರೂ ಧೀರವಾದ ಪ್ರಾಮಾಣಿಕತನದ ಮತ್ತು ಸ್ವಾತಂತ್ರ್ಯವಾದ ವಿದೇಶ ಧೋರಣ ಉತ್ತಮ. ದಿನದಿನಕ್ಕೆ ಪರಿಸ್ಥಿತಿಯು ಬದಲಾಗುತ್ತಿರುವದರಿಂದ ಇಂತಹದೇ ಧೋರಣ ಎಂದು ಸ್ಪಷ್ಟಪಡಿಸಲು ಬರುವಂತಿಲ್ಲ. ಕಡವೆ ಅನಿಷ್ಟವಾದ ಧೋರಣ ಅನುಸರಿಸಬಹುದು, ಅಷ್ಟೇ.

ಬ್ರಿಟಿಶ ಕಾಮನವೆಲ್ಥದೊಡನೆ ಹಿಂದುಸ್ಥಾನವು ಎಂಥ ಸಂಬಂಧ ಇಟ್ಟುಕೊಳ್ಳಬೇಕೆಂಬ ಬಗ್ಗೆ ಘಟನಾ ಸಮಿತಿಯೇ ಖಚಿತವಾಗಿ ನಿರ್ಣಯಿಸಬಲ್ಲದು. ವಿದೇಶದ ಬಗ್ಗೆ ಸಾಮಾನ್ಯ ಧೋರಣವನ್ನು ಘಟನಾ ಸಮಿತಿಯು ಈಗಾಗಲೇ ಹಾಕಿಕೊಟ್ಟಿದೆ. ಕೊನೆಯ ನಿರ್ಣಯವೇನೇ ಆದರೂ ಹಿಂದುಸ್ಥಾನವು ಸರ್ವತಂತ್ರ ಸ್ವತಂತ್ರ ಪ್ರಜಾರಾಜ್ಯ ಇಲ್ಲವೆ ಕಾಮನವೆಲ್ಥ ರಾಷ್ಟ್ರವಾಗುವದೆಂಬುದು ಖಚಿತ. ಹಿಂದುಸ್ಥಾನವು ಇಂಗ್ಲಂಡ ಅಥವಾ ಕಾಮನವೆಲ್ಥದೊಡನೆ ಯಾವ ಸಂಬಂಧವನ್ನು ಇಟ್ಟುಕೊಳ್ಳಬೇಕೆಂಬುದು ಮಹತ್ವದ್ದಿದೆ. ವಿಶೇಷತಃ ಬ್ರಿಟಿಶ ವಸಾಹತುಗಳಲ್ಲಿದ್ದ ಹಿಂದೀಯರ ನಾಗರಿಕತೆಯ ಪ್ರಶ್ನೆಯು ಅದರ ಮೇಲೆ ಅವಲಂಬಿಸಿದೆ— ಮುಂತಾಗಿ ಹೇಳಿದರು. ಕಡಿತದ ಸೂಚನೆಗಳು ಹಿಂತೆಗೆದುಕೊಳ್ಳಲ್ಪಟ್ಟವು.

ರಾಷ್ಟ್ರೀಯ ಮಜದೂರ ಸಂಘ ಮತ್ತು ಔದ್ಯೋಗಿಕ ಒಪ್ಪಂದ

ಸರಕಾರ, ಉದ್ದಿಮೆದಾರ ಮತ್ತು ಕೂಲಿಕಾರ ಹೀಗೆ ತ್ರಿಪಕ್ಷದವರು ದಿಲ್ಲಿಯಲ್ಲಿ ಮಾಡಿಕೊಂಡ ಒಪ್ಪಂದವನ್ನು ಹಿಂದುಸ್ಥಾನ ರಾಷ್ಟ್ರೀಯ ಮಜದೂರ ಸಂಘದ ಕಾರ್ಯಸಮಿತಿಯು ಸ್ವಾಗತಿಸಿದೆ. ಆದರೆ ತ್ರಿಪಕ್ಷದವರ ಒಪ್ಪಂದದಂತೆ ಕೆಲಸ ಮಾತ್ರ ಸಾಕಷ್ಟು ವೇಗವಾಗಿ ಸಾಗಿಲ್ಲವೆಂದು ಅಸಮಾಧಾನವನ್ನು ವ್ಯಕ್ತಪಡಿಸಿದೆ.

ಕೂಲಿಕಾರರನ್ನು ಉದ್ಯೋಗದ ಆಡಳಿತದಲ್ಲಿ ಸೇರಿಸಿದಾಗಲೇ ದೇಶದ ಉತ್ಪಾದನೆಯು ಹೆಚ್ಚುತ್ತದೆಯೆಂದು ಈ ಕಾರ್ಯಸಮಿತಿಯು ಅಭಿಪ್ರಾಯಪಟ್ಟಿದೆ.

ಕೂಲಿಕಾರರಿಗೆ ಮನೆಗಳನ್ನು ಒದಗಿಸಲು ಸರಕಾರವು ಕೂಡಲೇ ಉಪಾಯ ಕೈಕೊಳ್ಳಬೇಕೆಂದೂ ಮಧ್ಯಸ್ಥ ಮಂಡಲ ಅಥವಾ ಕೂಲಿಕಾರ ನ್ಯಾಯಾಲಯಗಳಿಂದ ಬೇಗ ನ್ಯಾಯ ದೊರಕುವಂತೆ ಹಾಗೂ ವರ್ಕ್ಸ ಕಮಿಟಿ ಮತ್ತು ಉತ್ಪಾದನಾ ಸಮಿತಿಗಳಲ್ಲಿ ಕೂಲಿಕಾರರನ್ನು ಸೇರಿಸಿಕೊಳ್ಳಬೇಕೆಂದೂ ಸಮಿತಿಯು ಅದೇ ಗೊತ್ತುವಳಿಯಲ್ಲಿ ಕಾಣಿಸಿದೆ.

ನ್ಯಾಯಮಂಡಲದೆದುರು ವ್ಯಾಜ್ಯ ನಡೆದಾಗ ಕೂಲಿಕಾರರನ್ನು ಕೆಲಸದಿಂದ ತೆಗೆದುಹಾಕುವದು ಮತ್ತು ಒಡೆಯರು ನ್ಯಾಯ ಮಂಡಲದ ತೀರ್ಪನ್ನು ಕಾರ್ಯಕಾರಿ ಮಾಡುವಲ್ಲಿ ಅಡ್ಡ ಆತಂಕಗಳನ್ನೊಡ್ಡುವದು ಮುಂತಾದವುಗಳನ್ನು ಕಾಯದೆಯಿಂದ ಪ್ರತಿಬಂಧಿಸಬೇಕೆಂದೂ ಸೂಚಿಸಲಾಗಿದೆ.

ಟ್ರೇಡ ಯೂನಿಯನ್ ಸಂಸ್ಥೆಯು ಔದ್ಯೋಗಿಕ ಒಪ್ಪಂದಕ್ಕೆ ಬೆಂಬಲ ಕೊಟ್ಟಿದ್ದರೂ ಕೆಲವು ಮುಂದಾಳುಗಳು ಪ್ರತ್ಯಕ್ಷ ಹೋರಾಟದಿಂದ ಶಾಂತಿಗೆ ಭಂಗ ತರುತ್ತಿರುವದನ್ನು ಈ ಸಮಿತಿಯು ನಿಷೇಧಿಸಿದೆ. ಕಲಕತ್ತಾ, ಕಾನಪೂರ, ಮುಂಬಯಿ, ಮಲಬಾರ ಮೊದಲಾದಲ್ಲಿ ನಡೆದ ಸಂಪುಗಳು ಕೇವಲ ಆರ್ಥಿಕ ಮರ್ಯಾದೆ [illegible]ವಾದವೆಂದೂ ಕೂಲಿಕಾರರ ಪ್ರಜಾಸತ್ತಾತ್ಮಕ ಸಂಘಟನೆಯನ್ನು ನಾಶಗೊಳಿಸತಕ್ಕಂಥವೆಂದೂ ಈ ಸಮಿತಿಯು ಎಚ್ಚರಿಕೆ ಹೇಳಿದೆ.

ರಾಷ್ಟ್ರೀಯ ಮಜದೂರ ಸಂಘದ ಪ್ರತಿನಿಧಿಗಳಾಗಿ ಏಪ್ರಿಲ ಮಧ್ಯದಲ್ಲಿ ದಿಲ್ಲಿಯಲ್ಲಿ ನಡೆಯುವ ತ್ರಿಪಕ್ಷ ಪರಿಷತ್ತಿಗೆ ಬಂಗಾಲದ ಡಾ. ಸುರೇಶ ಚಂದ್ರ ಬ್ಯಾನರ್ಜಿ ಶ್ರೀಮತಿ ಮೈತ್ರೇಯಿಬೋಸ, ಅಹಮದಾಬಾದ ಶ್ರೀ ಖಂಡುಭಾಯಿ ದೇಸಾಯಿ, ಮುಂಬಯಿಯ ಶ್ರೀ. ಶಾಂತಿಲಾಲ ಶಹಾ ಇವರು ಹೋಗಬೇಕೆಂದು ನಿರ್ಧರಿಸಲಾಯ್ತು.

ನಮ್ಮ ದೇಶದಲ್ಲಿ ಕೂಲಿಕಾರ ಚಳವಳಿಯ ಪ್ರವರ್ತಕರಾದ ಮಹಾತ್ಮಾ ಗಾಂಧೀಜಿಯವರ [illegible] ಗೊತ್ತುವಳಿಯನ್ನು ಈ ಮಜದೂರ ಸಂಘದ ಕಾರ್ಯ ಸಮಿತಿಯು [illegible] ಸಿತು.

ರೇಲ್ವೆ ಕೆಲಸಗಾರರ ತಂಟೆ

ಡಾ. ರಾಜಾಧ್ಯಕ್ಷರ ವರದಿ

ರೇಲ್ವೆ ಕೆಲಸಗಾರರ ಕೆಲಸದ ಅವಧಿ, ವಿಶ್ರಾಂತಿ, ರಜೆಗಳು ಮತ್ತು [illegible] ಕೆಲಸಗಾರರ ರಜೆ ಹಾಗೂ ರಜೆಯ [illegible] ವಿಷಯದಲ್ಲಿ ಒಪ್ಪಿಸಿದ ತಂಟೆಗಳನ್ನು ಹಿಂದುಸ್ಥಾನ ಸರಕಾರದವರು ನ್ಯಾಯನಿರ್ಣಯಕ್ಕಾಗಿ ಡಾ. ರಾಜಾಧ್ಯಕ್ಷರ [illegible]. ಈ ವರದಿಯ ಮೊದಲನೆಯ ಭಾಗವು [illegible] ಪ್ರಸಿದ್ಧಪಡಿಸಲ್ಪಟ್ಟಿದ್ದು ಅದು [illegible] ಆಫ್ ಪಬ್ಲಿಕೇಶನ್ಸ, ಸಿವ್ಹಿಲ್ ಲೈನ್ಸ, ದಿಲ್ಲಿ, ಇವರಲ್ಲಿ ದೊರೆಯುತ್ತದೆ.

ರೇಲ್ವೆ ಕೆಲಸಗಾರರ ನ್ಯಾಯವನ್ನು ಸರಕಾರದವರು ೧೯೪೬ ಏಪ್ರಿಲ ೩೦ಕ್ಕೆ ಒಂದು ಪ್ರಕಟಣೆ ಹೊರಡಿಸಿ ನ್ಯಾ. ರಾಜಾಧ್ಯಕ್ಷರ ಮುಂದಿಟ್ಟಿದ್ದರು. ಅವರು ೧೯೪೭ ಮೇ ೩೧ಕ್ಕೆ ತಮ್ಮ ವರದಿಯನ್ನು ಸಾದರಪಡಿಸಿದ್ದರು. ಇದರಲ್ಲಿಯ ಕೆಲವು ವಿಷಯಗಳ ಬಗ್ಗೆ ಕೇಂದ್ರ ಸಲಹಾ ಸಮಿತಿಯವರೂ ತಮ್ಮ ಮತವನ್ನು ಕೊಟ್ಟಿದ್ದು ಸರಕಾರದವರು ಅದನ್ನು ಪರಿಶೀಲಿಸುತ್ತಿದ್ದಾರೆ.

ಕೆಲಸದ ಅವಧಿ ಕಡಿಮೆಮಾಡಬೇಕೆಂಬ ರೇಲ್ವೆ ಕೆಲಸಗಾರರ ಬೇಡಿಕೆಗೆ ನ್ಯಾ. ರಾಜಾಧ್ಯಕ್ಷರು ಬೆಂಬಲ ಕೊಟ್ಟಿದ್ದಾರೆ. ಸರಕಾರವು ಇದನ್ನು ಸ್ವೀಕರಿಸಿದರೆ ೨೦ ಸಾವಿರ ಕೆಲಸಗಾರರನ್ನು ಹೆಚ್ಚಿಗೆ ಸೇರಿಸಿಕೊಳ್ಳಬೇಕಾಗುತ್ತದೆ. ಇದಕ್ಕೆ ಪ್ರತಿವರ್ಷ ಅರುವರೆ ಕೋಟಿ ರೂ. ವೆಚ್ಚ ತಗಲುವದು.

ಸತತ ಮತ್ತು ಮಧ್ಯಂತರದ ಕೆಲಸ ಮಾಡುವ ಎಲ್ಲ ಕೂಲಿಕಾರರಿಗೆ ಒಂದು ಇಡಿ ರಾತ್ರಿ ಹಾಗೂ ಒಂದು ಇಡಿ ಹಗಲು ವಾರಕ್ಕೊಮ್ಮೆ ವಿಶ್ರಾಂತಿ ದೊರೆಯಬೇಕೆಂದೂ ಉಳಿದವರಿಗೆ [illegible] ವಾರಕ್ಕೊಮ್ಮೆ ೩೦ ತಾಸು ವಿಶ್ರಾಂತಿ ಕೊಡಬೇಕೆಂದೂ ಅವರು ಸೂಚಿಸಿದ್ದಾರೆ. ಕೆಳದರಗತಿಯ ಮತ್ತು ದಿನಗೂಲಿಯ ಕೆಲಸಗಾರರ ರಜೆ ಹಾಗೂ ರಜೆಯ ನಿಯಮಗಳ ಬಗ್ಗೆ ಹೆಚ್ಚು ಉದಾರತೆ ತೋರಿಸಬೇಕೆಂದು ಶಿಫಾರಸು ಮಾಡಿದ್ದಾರೆ.

ಮನರಂಜಕ ಹೇಳಿಕೆಗಳು

ಈ ವಿಚಾರಣೆಯಲ್ಲಿ ಕೊಟ್ಟ ಕೆಲವು ಹೇಳಿಕೆಗಳು ಬಹಳ ಮನರಂಜಕವಿರುತ್ತವೆ.

ಎನ್ ಡಬ್ಲ್ಯು ರೇಲ್ವೆಯ ಓರ್ವ ಗಾರ್ಡನು, ತನ್ನ ಕೆಲಸದ ಪರಿಣಾಮವನ್ನು [illegible], ಕತ್ತೆಯಂತೆ ದುಡಿಯುತ್ತೇನೆ ಒಂಟೆಯಂತೆ ತಿನ್ನುತ್ತೇನೆ ಮತ್ತು ನಾಯಿಯಂತೆ ತಿರುಗುತ್ತೇನೆ ಎಂದು ಹೇಳಿದನು.

ಕೆಲವರ ಬೇಡಿಕೆಗಳಂತೂ ಅತಿಶಯೋಕ್ತಿಯವಿದ್ದವು.

ಎನ್. ಡಬ್ಲ್ಯು. ರೇಲ್ವೆಯ ಓರ್ವ [illegible] ಸ್ಟೇಶನ್ ಮಾಸ್ತರನು [illegible] ಮೂವರ ಬದಲು ೧೩ ಸ್ಟೇಶನ್ ಮಾಸ್ತರರು ಬೇಕೆಂದು ಸೂಚಿಸಿದನು.

ಇಂಥ ಸಾಕ್ಷಿಗಳಿಂದ ವಿಶ್ವಾಸ ಹುಟ್ಟದಿದ್ದರೂ ರೇಲ್ವೆ ಕೆಲಸಗಾರರ ಸಂಘಗಳು ನಿಜವಾದ ಕೆಲವು ಕುಂದುಕೊರತೆಗಳನ್ನು ಸಮರ್ಪಕವಾಗಿ ಎತ್ತಿ ತೋರಿಸಿವೆ.

ಹೊಸದಿಲ್ಲಿಯಲ್ಲಿ ಹಿರಿಯೋಲಗದಲ್ಲಿ ಹಿಂದೀ ಶಾಸನ ಸಭೆಯ ಪ್ರಥಮ ಚುನಾಯಿತ ಅಧ್ಯಕ್ಷರಾದ ದಿ. ಶ್ರೀ. ವಿಠ್ಠಲಭಾಯಿ ಪಟೇಲರ ಭಾವಚಿತ್ರದ ಅನಾವರಣವನ್ನು ತಾ ೫ಕ್ಕೆ ಮಾಡಲಾಯಿತು, [illegible] ಚಂದ [illegible] ಚಿತ್ರವನ್ನು ತಯಾರಿಸಿ ಕಾಣಿಕೆ ಕೊಟ್ಟಿರುವರು, ಹಿರಿಯೋಲಗದ ಅಧ್ಯಕ್ಷ ಪೀಠದ ಎದುರಿಗಿನ ಗೋಡೆಗೆ ಅದನ್ನು ತೂಗುಹಾಕಿದೆ.

ಮುಂಬೈ ಅಸೆಂಬ್ಲಿ ಕಾರ್ಯಕಲಾಪಗಳು

ವಿಲಾಸ ಭೋಗ ವಸ್ತುಗಳ ಮೇಲೆ ಹೆಚ್ಚಿನ ಕರ

ಮುಂಬಯಿ ಶಾಸನ ಸಭೆಯ ಕಾರ್ಯ

[illegible]

ಆರ್ಥಿಕ ತಿದ್ದುಪಡಿ ಮಸೂದೆ

[illegible]

ಸಾಯಕಲ್ ರಿಕ್ಷಾಗಳ ಮೇಲೆ ನಿರ್ಬಂಧ

[illegible]

ಸಾವಕಾರಿಕೆ ಕಾಯಿದೆಯ ಸ್ಪಷ್ಟೀಕರಣ

[illegible]

ಅಕ್ಕಿಯ ವಿತರಣ

[illegible]

ಪೂರಯಿಕೆಗಾರರಿಗೆ ಪ್ರೋತ್ಸಾಹ

[illegible]

ಉತ್ಪಾದನದ ಮುಂದಗತಿ

[illegible]

ಬ್ರಹ್ಮದೇಶದಲ್ಲಿ ನಿರ್ಯಾತಕ್ಕೆ ಸಿಗುವ ಅಕ್ಕಿಯಲ್ಲಿ ಬಹಳ ಸುಧಾರಣೆ ನಡೆದಿದೆ. [illegible] ಪೂರ್ವಾರ್ಧದಲ್ಲಿ ಅದು ೮ ಲಕ್ಷ ಟನ್ ಅಕ್ಕಿಯನ್ನು ಕಳುಹಲಿದೆ; ಯುದ್ಧಕ್ಕೆ ಹಿಂದೆ [illegible] ಅಂದರೆ [illegible] ಸಾವಿರ ಟನ್ ಕಳುಹುತ್ತಿತ್ತು. ಅದರೆ ಇದು [illegible]ರಲ್ಲಿ ಮೊದಲಿನ [illegible] ತಿಂಗಳಲ್ಲಿ ಕಳುಹಿದ್ದಕ್ಕಿಂತ ನೂರಕ್ಕೆ [illegible] ಹೆಚ್ಚಾಗುತ್ತದೆ.

ಸಯಾಮವು ಯುದ್ಧಕ್ಕೆ ಮುಂಚೆ ೬ ತಿಂಗಳಲ್ಲಿ ಸರಾಸರಿ ೬,[illegible] ಟನ್ ಕಳುಹಿದ್ದರೆ, ಈಗ [illegible],೦೦೦ ಕ್ಕಿಂತ ಕಡಿಮೆ ಕಳುಹಲಿದೆ.

ಫ್ರೆಂಚ್ ಇಂಡೋಚೈನ ಮೊದಲು [illegible] ಲಕ್ಷ ಟನ್ ಕಳುಹಿದ್ದರೆ ಈಗ ಕೇವಲ ೧೦ ಸಾವಿರ ಟನ್ ಕಳುಹಬಹುದೆಂದು ನಿರೀಕ್ಷೆ ಮಾಡಲಾಗಿದೆ. [illegible] ಜಾಗತಿಕ ಯುದ್ಧದಿಂದೀಚೆಗೆ ಪಶ್ಚಿಮಾರ್ಧ ಗೋಲದ ದೇಶಗಳಿಂದ ನಿರ್ಯಾತ ಪ್ರಮಾಣ ಬಹಳವಾಗಿ ಹೆಚ್ಚಿದ್ದು ಅದರ ಕೊರತೆಯನ್ನು ತುಂಬಲು ಎಂದೂ ಸಾಕಾಗಲಾರದು.

ಆಯಾತ ಮಾಡಿಕೊಳ್ಳುವ ರಾಷ್ಟ್ರಗಳು

ಅಕ್ಕಿಯನ್ನು ತರಿಸಿಕೊಳ್ಳುವ ೨೧ ರಾಷ್ಟ್ರಗಳಲ್ಲಿ ಭಾರತವು [illegible] ಟನ್ನುಗಳಷ್ಟನ್ನೂ, ಮಲಯವು [illegible] ಟನ್ನುಗಳಷ್ಟನ್ನೂ, ಚೀನವು [illegible] ಲಕ್ಷ ಟನ್ನುಗಳಷ್ಟನ್ನೂ, ಸಿಂಹಳವು [illegible] ಸಾವಿರ ಟನ್ನುಗಳಷ್ಟನ್ನೂ ಬೇಡಿರುತವೆ. [illegible]

[illegible]

(ಜರ್ನಲ್ ಮಾರ್ನಿಂಗನರ ಲೇಖನದ ಆಧಾರದಿಂದ)

ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿ

[illegible]

ಹೈದರಾಬಾದದ ಗೊಂದಲ

ಸರಕಾರವನ್ನೇ ಉರುಳಿಸುವದಾಗಿ ಮುಂಡರ ಬೆದರಿಕೆ

"ರಜಾಕಾರ" ರು ಇತ್ತಿಹಾದ ಮುಸಲ್ಮೀನ ಮಜಲಿಸದ ಖಾಸಗಿ ಸೈನ್ಯ. ಇವರು ಇತ್ತೀಚೆಗೆ [illegible] ಹಳ್ಳಿಗಳಲ್ಲಿ ಕೊಳ್ಳೆ ಲಗ್ಗೆ ನಡೆಸಿ [illegible] ಕೋಟಿ ರೂ. ಗಳ ಆಸ್ತಿಯನ್ನು ನಾಶಮಾಡಿದ್ದಾರೆಂದೂ [illegible] ಹಳ್ಳಿಗಳಲ್ಲಿ ಸುಲಿಗೆ ನಡೆಸಿ ೧೦—[illegible] ಲಕ್ಷ ಬೆಲೆಯ ಆಸ್ತಿ ದೋಚಿದ್ದಾರೆಂದೂ [illegible] ಜನರ ಕೊಲೆ [illegible] ಸ್ತ್ರೀಯರ ಮೇಲೆ ಬಲಾತ್ಕಾರ ಮಾಡಿದ್ದಾರೆಂದೂ ಹಿಂದುಸ್ತಾನದ ಒಕ್ಕೂಟದ ಗಡಿಯ ಹಳ್ಳಿಗಳ ಮೇಲೆ [illegible] ಸಲ ದಾಳಿ ನಡೆಸಿದ್ದಾರೆಂದೂ ಅಧಿಕೃತವಾಗಿ ತಿಳಿದು ಬರುತ್ತದೆ.

ಇತ್ತಿಹಾದ ಮಜಲೀಸದವರು ಮಿರ್ಕೆ[illegible]ಯಾಕ ಅಲಿಯವರಿಗೆ, "ನೀವು ಹಿಂದುಸ್ತಾನ ಒಕ್ಕೂಟದೊಡನೆ ಯುದ್ಧ ಹೂಡಿದರೆ ನಾವು ಬೆಂಬಲಕೊಡುತ್ತೇವೆ. ಹೈದರಾಬಾದದಲ್ಲಿ ಹೊಣೆಗಾರ ಸರಕಾರ ಸ್ಥಾಪಿಸಿದರೆ ನಾವು ಅರಾಜಕತೆಯನ್ನು ಉಂಟುಮಾಡದೆ ಬಿಡೆವು" ಎಂದು ನೇರವಾಗಿ ಎಚ್ಚರಿಕೆ ಕೊಟ್ಟಿರುವರು.

"ರಜಾಕಾರ"ರ ಸೈನ್ಯ

ರಜಾಕಾರ ದಳದಲ್ಲಿ ಈಗ ಒಂದು ಲಕ್ಷ ಜನರಿದ್ದು ೬೦ ಸಾವಿರ ಜನರಿಗೆ ಬಂದೂಕ ಕೊಡಲಾಗಿದೆ. ಮೂರು ಟನ್ನ ಭಾರ ಹೊರುವ [illegible] ಟ್ರಕ್ಕುಗಳು ಒಂದು ಟನ್ನ ಭಾರ ಹೊರುವ [illegible] ಟ್ರಕ್ಕುಗಳೂ ೨೦ ಜೀಪ ಗಾಡಿಗಳೂ ಇವರ ವಶದಲ್ಲಿವೆ. [illegible]

ಇವರ ಹೋರಾಟದ ಕಾರ್ಯಕ್ರಮ

[illegible]

—೧೧ನೇ ಪುಟ ನೋಡಿರಿ

ವ್ಯಾಪಾರ ಪ್ರಪಂಚ

ಮುಂಬಯಿ ಪೇಟೆ ಧಾರಣೆ

ಮುಂಬಯಿ ತಾ. [illegible]

ಟೆಕ್ಸಟಾಯಿಲ್ಸ

ಅಹಮ್ಮದಾಬಾದ ಅಡ್ವಾನ್ಸ	[illegible]
ಮುಂಬಯಿ ಡಾಯಿಂಗ	[illegible]
ಸೆಂಟ್ರಲ ಇಂಡಿಯಾ	[illegible]
ಸೆಂಚುರಿ	[illegible]
[illegible]	[illegible]
[illegible]	[illegible]
ಇಂಡಿಯನ್ [illegible]	[illegible]
[illegible]	[illegible]
[illegible]	[illegible]
[illegible]	[illegible]
ಸ್ವದೇಶಿ	[illegible]
ವಿಷ್ಣು	[illegible]
ಟಾಟಾ ಪವರ	[illegible]
ಟಾಟಾ ಹೈಡ್ರೊ	೧೫೪—೦—೦
ಟಾಟಾ ಸ್ಟೀಲ ಡೆಫರ್ಡ	೧೬೭೭-೮-೦
ಟಾಟಾ ಸ್ಟೀಲ ಆರ್ಡಿನರಿ	೩೪೬-೦-೦
ಪ್ರಿಮಿಯರ ಕನ್‌ಸ್ಟ್ರಕ್ಷನ	೨೦೬—೦—೦
ಇಂಡಿಯನ ಅಯರ್ನ	೩೧—೧೪—೦
ಬರ್ಮಾ ಕಾರ್ಪೋರೇಶನ	೩-೩-೦
ಇಂಡಿಯನ್ ಕಾಪರ	೨-೧೨-೬

ಸಿಮೆಂಟ

ಅಸೋಸಿಯೇಟೆಡ ಸಿಮೆಂಟ್ಸ	೧೬೭-೦-೦

ಇನ್ಶ್ಯುರನ್ಸ

ನ್ಯೂ ಇಂಡಿಯಾ ಇನ್‌ಶುರನ್ಸ	೭೪-೪-೦

ಪ್ರಿಫರನ್ಸ

ಟಾಟಾ ಸ್ಟೀಲ ೧ ನೇ ಪ್ರಿಫರನ್ಸ	೧೯೮-೧೨-೦
,, ೨ ನೇ ,,	೧೪೬-೦-೦

ಬ್ಯಾಂಕುಗಳು

ಸೆಂಟ್ರಲ	೮೯—೦—೦
ಇಂಪಿರಿಯಲ (ಅಂಶತಃ)	೫೧೦—೦—೦
ಇಂಪೀರಿಯಲ (ಪೂರ್ಣ)	೨೦೮೦-೦-೦
ಇಂಡಿಯಾ	೨೫೨—೦—೦
ರಿಜರ್ವ	೧೧೨-೮-೦

ಎಣ್ಣೆ ಕಾಳುಗಳು

ತಾ. [illegible]

ಶಿವಮೊಗ್ಗೆ

ತಾ. ೧೬

ಹುಬ್ಬಳ್ಳಿ

ಹೈದರಾಬಾದದ ಗೊಂದಲ

(೧ನೇ ಪುಟದಿಂದ)

[illegible] ಕೊಡುವದು ಕುರಿಗಿನಾ [illegible] ಎಲ್ಲ ಕಾರ್ಯಗಳ ವಿವರವಿದೆ. ಗೊತ್ತು ಪಡಿಸಿದ ದಿನ ಹೈದರಾಬಾದದ ಮತ್ತು ಜಿಲ್ಲಾ ಸ್ಥಳಗಳ ಸರಕಾರೀ ಕಚೇರಿಗಳನ್ನೆಲ್ಲ ಸುಟ್ಟು [illegible]ವಾಗಿ ಅರಮನೆಗೆ ಹೋಗಿ ಸರಕಾರವನ್ನು ಇತ್ತೆಹಾದ ಮಜಲಿಸದವರಿಗೆ ಒಪ್ಪಿಸಬೇಕೆಂದು ನಿಜಾಮರಿಗೆ ಕೇಳಬೇಕೆಂದೂ ಅದರಲ್ಲಿದೆ. ಅವರು ಅಧಿಕಾರ ಒಪ್ಪಿಸದಿದ್ದರೆ ಸೈನ್ಯ ಬಲದಿಂದ ಬಲಾತ್ಕಾರವಾಗಿ ಅಧಿಕಾರ ಕಸಿಯಬೇಕೆಂದೂ ಕಾಣಿಸಿದೆ.

ಕಚೇರಿಗಳನ್ನು ಸುಡುವ ಮೊದಲಾದ ನಿರ್ದಿಷ್ಟ ದಿನಗಳನ್ನು ಜಿಲ್ಹೆಯ ಅಧ್ಯಕ್ಷರಿಗೆ ಮಾತ್ರ ತಿಳಿಸಲಾಗಿದೆ.

ಮಜಲಿಸದ ಕೆಲಸಕ್ಕೆ ಅಡ್ಡಬರುವ ಮುಸಲ್ಮಾನರ ಯಾದಿಯನ್ನು ಸಿದ್ಧಪಡಿಸಿ ಅವರನ್ನು ಸಂಹರಿಸುವದೆಂದು ಗೊತ್ತಾಗಿದೆ.

ಕ್ರಿಯಾಸಮಿತಿಯ ಪ್ರತ್ಯಕ್ಷ ಹೋರಾಟದ ಕಾರ್ಯಕ್ರಮವು ನಿಜಾಮ ಸರಕಾರದ ಯಮೀನ ಝುಬೇರಿಯವರ ಮನೆಯಲ್ಲಿ ಸಿದ್ಧಗೊಳಿಸಲ್ಪಟ್ಟಿದೆ.

ಮಜಲೀಸ ಪಕ್ಷದ ಚಿನ್ಹವಾದ ಚಂದ್ರಕಲೆ ಧರಿಸಿದ ಹಿಂದು ಮತ್ತು ಹರಿಜನರನ್ನು ರಕ್ಷಿಸಬೇಕೆಂದಿದೆ. ಹಿಂದೂ ಜಮೀನದಾರರ ಹೊಲ ಮನೆಗಳಸಿಸು ಕೊಳ್ಳಬೇಕೆಂದು ಗೊತ್ತಾಗಿದೆ. ಹಿಂದೂ ಬ್ಯಾಂಕುಗಳನ್ನು ಲೂಟಿಮಾಡಿ ಮಜಲಿಸದ ಸ್ವಯಂ ಸೇವಕರಿಗೆ ಹಂಚಬೇಕೆಂದೂ ಇನ್ನೂ ಅನೇಕ ಅರಾಜಕ ಕಾರ್ಯಕ್ರಮಗಳ ವಿವರವನ್ನು ಈ ೩೧ ಅಂಶಗಳ ಯೋಜನೆ ಒಳಗೊಂಡಿದೆ



[illegible] ಲಂಡನಿನಲ್ಲಿ ಹಿಂದೀ ಭವನದಲ್ಲಿ ಸೇರಿದ್ದ ಮಹಾತ್ಮಾ ಗಾಂಧಿಯವರ ಸ್ಮಾರಕ ಸಭೆಯಲ್ಲಿ ಬ್ರಿಟಿಶ [illegible] ಎ. ಹೆಂಡರಸನ್ನರು ಮಾತಾಡುತ್ತಿರುವರು.

ಕಲಾವಿದ ಗೋಂದಕರ

ಶ್ರೀ ಎನ್. ಪಿ. ಗೋಂದಕರ- ಇವರು ಹುಬ್ಬಳ್ಳಿಯ ತರುಣ ಕಲಾವಿದರು. ಕೆಸರಿನಲ್ಲಿ ಕಮಲವೆನ್ನುವಂತೆ ಔದ್ಯೋಗಿಕ ಕೆಲಸಗಾರರಿಂದ ತುಂಬಿದ ಹುಬ್ಬಳ್ಳಿ ನಗರದಲ್ಲಿ ಇವರು ಮೆಲ್ಲನೆ ಬೆಳಕಿಗೆ ಬರುತ್ತಿರುವರು. ಗಾಂಧಿ ಸ್ಮಾರಕದಲ್ಲಿ ಹುಬ್ಬಳ್ಳಿಯಲ್ಲಿ ಇಡಲಾಗಿದ್ದ, ಕೇಶವ ಜೋಶಿ ಗಾಂಧಿ ಆಶ್ರಮಕ್ಕೆ ಕೊಡಲ್ಪಟ್ಟ ಇವರ ಗಾಂಧೀ-ಜವಾಹರಲಾಲರ ತೈಲ ಚಿತ್ರವು ಅನೇಕರ ಮೆಚ್ಚಿಕೆಗೆ ಪಾತ್ರವಾಗಿರುವದು. ಇಲ್ಲಿಯ "ರೂಪಕ" ದಲ್ಲಿ ಕಂಡುಬರುವ ನಯನ ಮನೋಹರ ಚಿತ್ರಗಳೂ ಇವರ ಕುಂಚದಿಂದಲೇ ಹೊರಹೊಮ್ಮಿದವುಗಳು.



ಶಾಂತಿ ನಿಕೇತನದ ಅಭ್ಯಾಸೀಯ ಕೇಂದ್ರ

ಪಂಡಿತ ನೆಹರೂರ ಹೇಳಿಕೆ

ಮುಖ್ಯಮಂತ್ರಿಗಳಾದ ಪಂಡಿತ ಜವಾಹರಲಾಲರು ಅ. ಭಾ. ಕಲಾಸಂಘದವರು ಏರ್ಪಡಿಸಿದ ರವೀಂದ್ರನಾಥ ಠಾಕೂರ [illegible] ನಮ್ಮ ರಾಜಕೀಯ [illegible] ಸಹಿತವಾಗಿ- ಕಲಾಭೂನ [illegible]

[illegible] ಇನ್ನೊಂದು ಗೊತ್ತು [illegible]

ನಾಭಾ ಸಂಸ್ಥಾನದ ೧೦೪೬ ಮುಸ್ಲಿಂ ಸ್ತ್ರೀಯರು ಮತ್ತು ಪುರುಷರು ಪಾಕಿಸ್ತಾನಕ್ಕೆ ಕಳಿಸಲ್ಪಟ್ಟಿದ್ದಾರೆ.



ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ ಮತ್ತು ಶೇಖ ಅಬ್ದುಲ್ಲಾರವರು ಭದ್ರತಾಮಂಡಳದಿಂದ ತಿರುಗಿ ದಿಲ್ಲಿಗೆ ಬಂದಾಗ ವಿಮಾನ ಗೃಹದಲ್ಲಿ ಸ್ವಾಗತಿಸುತ್ತಿದ್ದರ ಚಿತ್ರ.



ಇಂಗ್ಲಂಡದ ಅಬರ್ಡೀನ ಅಂಗಸ್ ದನಗಳ ಪ್ರದರ್ಶನದಲ್ಲಿ [illegible] ರೂಪಾಯಿಗಳಿಗೆ ಮಾರಾಟವಾದ ಅಮೂಲ್ಯ ಹೋರಿ.

ದಕ್ಷಿಣ ಸಂಸ್ಥಾನಗಳ ಲೀನೀಕರಣ

ಮುಂಬಯಿ ಪ್ರಾಂತದಲ್ಲಿ ಸಮಾವೇಶವಾದವು

ಜನವರಿ ತಿಂಗಳಿನ ಎಂಟನೆಯ ತಾರೀಖು ದಕ್ಷಿಣ ಮರಾಠಾ ಸಂಸ್ಥಾನಗಳ ಇತಿಹಾಸದಲ್ಲಿ ಒಂದು ಮಹತ್ವದ ದಿನ. ಅಗಸ್ಟ ೧೫ನೆಯ ತಾರೀಖು ಭಾರತಕ್ಕೆ ಹೇಗೆ ಸಂಸ್ಮರಣೀಯ ದಿನವಾಗಿರುವದೋ ಅದೇ ರೀತಿಯಾಗಿ ಮಾರ್ಚ ೮ನೆಯ ತಾರೀಖು ದಕ್ಷಿಣ ಸಂಸ್ಥಾನಗಳ ಸ್ಮರಣೀಯ ದಿನ. ಅಂದು ಈ ಸಂಸ್ಥಾನ ಪ್ರದೇಶವೆಲ್ಲ ಮುಂಬಯಿ ಪ್ರಾಂತದಲ್ಲಿ ಲೀನ ಹೊಂದಿತು. ದಕ್ಷಿಣ ಸಂಸ್ಥಾನಗಳಲ್ಲಿಯ ಕೊಲ್ಲಾಪುರ ಒಂದನ್ನು ಬಿಟ್ಟು ಉಳಿದ ಕೆಳಗೆ ಬರೆದ ೧೬ ಸಂಸ್ಥಾನಗಳು ಮುಂಬಯಿ ಪ್ರಾಂತದಲ್ಲಿ ಲೀನ ಹೊಂದಿದವು. ಆಯಾ ಜಿಲ್ಲೆಯ ಕಲೆಕ್ಟರರು ಪ್ರಾಂತ ಅಧಿಕಾರಿಗಳು ಮಾಮಲೇದಾರರು ಇಲ್ಲದೆ ಸರಕಾರದಿಂದ ನೇಮಕ ಹೊಂದಿದ ಬೇರೆ ಅಧಿಕಾರಿಗಳು ೮ನೆಯ ತಾರೀಖು ಆಯಾ ಸಂಸ್ಥಾನಗಳ ಮುಖ್ಯ ಸ್ಥಳಗಳಿಗೆ ಹೋಗಿ ಸಂಸ್ಥಾನಿಕರಿಂದ, ಸಂಸ್ಥಾನಾಧಿಕಾರಿಗಳಿಂದ ಅಧಿಕಾರವನ್ನು ಒಪ್ಪಿಸಿಕೊಂಡರು. ಈ ಸಂಬಂಧವಾಗಿ ಮುಂಬಯಿ ಮುಖ್ಯ ಮಂತ್ರಿಗಳಾದ ಶ್ರೀ ಖೇರ ಸಾಹೇಬ ಇವರು ಪ್ರಜೆಗಳಿಗೆ ಸಂದೇಶವನ್ನೀಯುತ್ತ ಜಾತಿಧರ್ಮಗಳ ಭೇದವಿಲ್ಲದೆ ಎಲ್ಲ ಜನರಿಗೂ ಸಮಾನವಾದ ಹಕ್ಕು ದೊರೆಯುವವು. ನ್ಯಾಯವಾಗಿ ನಡೆಸಿಕೊಳ್ಳಲಾಗುವದೆಂದು ಮುಂತಾಗಿ ಆ ಪ್ರಾಂತದ ಸಾರ್ವಜನಿಕ ಅಭಿವೃದ್ಧಿಗಾಗಿ ಎಲ್ಲರೂ ಪ್ರಯತ್ನಿಸಬೇಕೆಂದು ಕೇಳಿಕೊಂಡಿರುವರು. ಈ ಸಂದೇಶವನ್ನು ಅಂದು ಅಲ್ಲಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ಓದಿ ಹೇಳಲಾಯಿತು. ಪ್ರಜೆಗಳು ರಾಷ್ಟ್ರನಿಷ್ಠೆಯ ಪ್ರತಿಜ್ಞೆಯನ್ನು ಕೆಗೆದುಕೊಳ್ಳುವ ಗೊತ್ತುವಳಿಯನ್ನೂ ಸ್ವೀಕರಿಸಿದರು. ಅಧಿಕಾರಿಗಳು ಪ್ರಜಾ ಪ್ರಮುಖರು ಸಮಯೋಚಿತ ಭಾಷಣ ಮಾಡಿ ಹೊಸ ಆಡಳಿತವನ್ನು ಸ್ವಾಗತಿಸಿದ್ದಲ್ಲದೆ ರಾಷ್ಟ್ರನಿಷ್ಠರಾಗಿರಬೇಕೆಂದು ಪ್ರಜೆಗಳಿಗೆ ಉಪದೇಶಿಸಿದರು. ಅದರಿಂದ ಈ ಸಂಸ್ಥಾನಗಳಲ್ಲೆಲ್ಲ ಆನಂದವೇ ಆನಂದ. ಸಂಸ್ಥಾನಗಳಲ್ಲಿನ ಕಾಯಂ ನೌಕರರನ್ನು ಶಕ್ಯವಿದ್ದ ಮಟ್ಟಿಗೆ ಮುಂದೆಯೂ ಕಾಯಂ ಆಗಿ ಇಟ್ಟುಕೊಳ್ಳಲಾಗುವದೆಂದು ತಿಳಿಯುತ್ತದೆ. ಆಯಾ ಸಂಸ್ಥಾನ ಭಾಗಗಳನ್ನು ಕಾಯಂ ಆಗಿ ಯಾವ ಯಾವ ಜಿಲ್ಲೆಗಳಲ್ಲಿ ಕೂಡಿಸಬೇಕೆಂಬುದನ್ನು ನಿರ್ಧರವಾಗಿಲ್ಲ. ತಾತ್ಪೂರ್ತಿಕವಾಗಿ ಕೆಳಗೆ ಬರೆದಂತೆ ಆಯಾ ಜಿಲ್ಲಾಧಿಕಾರಿಗಳ ವಶಕ್ಕೆ ಆಯಾ ಭಾಗಗಳನ್ನು ಒಪ್ಪಿಸಲಾಗಿದೆ.

ಒಪ್ಪಿಸಲ್ಪಟ್ಟ ವಿಭಾಗಗಳು

ಮುಧೋಳ

ಇಡೀ ಮುಧೋಳ ಸಂಸ್ಥಾನವನ್ನು ವಿಜಾಪುರ ಕಲೆಕ್ಟರರ ವಶಕ್ಕೆ ಕೊಡಲಾಗಿದೆ.

ರಾಮದುರ್ಗ

ರಾಮದುರ್ಗ ಸಂಸ್ಥಾನದ ಹೆಬ್ಬಾಳ ಹದ್ಲಿ, ಸುರಕೊಡ, ಮೆಣಸಗಿ, ಅಸೂಟಿ, ಸೋಮನಕಟ್ಟಿ, ಕಾಳಾಪುರ ಹಳ್ಳಿಗಳನ್ನು ಧಾರವಾಡ ಜಿಲ್ಲೆಯ ಕಲೆಕ್ಟರರ ವಶಕ್ಕೆ, ಬಂಡಿಗಾವ ಹಳ್ಳಿಯನ್ನು ಬೆಳಗಾವ ಜಿಲ್ಲೆಗೆ ಮತ್ತು ಸಂಸ್ಥಾನದ ಉಳಿದೆಲ್ಲ ಭಾಗವನ್ನು ವಿಜಾಪುರ ಜಿಲ್ಲೆಯ ಕಲೆಕ್ಟರರ ವಶಕ್ಕೆ ಕೊಡಲಾಗಿದೆ.

ಕುರಂದವಾಡ (ಕಿರಿ)

ಕುರಂದವಾಡದ ಶಿರಗುಪ್ಪಿ ಮಹಾಲಿನ... ಕೊಲ್ಲಾಪುರ ಜಿಲ್ಲೆ ಕಲೆಕ್ಟರರ, ಉಳಿದೆಲ್ಲ ಭಾಗವನ್ನು ಬೆಳಗಾವ ಜಿಲ್ಲೆ ಕಲೆಕ್ಟರರ ವಶಪಡಿಸಲಾಗಿದೆ.

ಕುರಂದವಾಡ [ಹಿರಿ]

ವಾಟೀಗಾವ ಹಳ್ಳಿಯನ್ನು ಸಾತಾರಾ ಜಿಲ್ಲೆ ಕಲೆಕ್ಟರರ ವಶಕ್ಕೆ, ತಿಕೋಟಾ ಸೋಮದೇವರಹಟ್ಟಿ, ಕನಕನಡೇವಹಟ್ಟಿ, ರತನಹಳ, ರಾಮಪುರ ಹತ್ತಾಳಪುರ ಹಳ್ಳಿಗಳನ್ನು ವಿಜಾಪುರ ಜಿಲ್ಲೆ ಕಲೆಕ್ಟರರ ವಶಕ್ಕೆ, ಉಳಿದೆಲ್ಲ ಭಾಗವನ್ನು ಬೆಳಗಾವಿ ಜಿಲ್ಲೆಗೆ ಸೇರಿಸಲಾಗಿದೆ.

ವಾಡೀ ಜಾಗೀರವನ್ನು ಶ್ರೀ. ವಿ. ಈಶ್ವರನ್ನರ ಆಡಳಿತಕ್ಕೊಳಪಡಿಸಲಾಗಿದೆ.

ಸಾಂಗಲಿ

ಸಾಂಗಲಿ ಸಂಸ್ಥಾನದ ಶಿರಹಟ್ಟಿ ತಾಲೂಕು ಧಾರವಾಡ ಜಿಲ್ಲೆಯ ಕಲೆಕ್ಟರರ, ಶಹಾಪುರ ತಾಲೂಕು ಬೆಳಗಾವಿ ಜಿಲ್ಲೆಯ ಕಲೆಕ್ಟರರ, ಮಂಗಳವೇಡೆ ತಾಲೂಕು ಸೊಲ್ಲಾಪುರ ಜಿಲ್ಲೆಯ ಕಲೆಕ್ಟರರ ಮತ್ತು ಸಂಸ್ಥಾನದ ಉಳಿದೆಲ್ಲ ಭಾಗವು ಶ್ರೀ. ಈಶ್ವರನ್ನರ ಆಡಳಿತಕ್ಕೊಳಪಡಿಸಲಾಗಿದೆ.

ಮಿರಜ (ಹಿರಿ)

ಮಿರಜ (ಹಿರಿ) ಲಕ್ಷ್ಮೇಶ್ವರ ತಾಲೂಕು ಧಾರವಾಡ ಜಿಲ್ಲೆ ಕಲೆಕ್ಟರರ, ಮಂಗಸಂಬ ತಾಲೂಕು ಸೊಲ್ಲಾಪುರ ಜಿಲ್ಲೆ ಕಲೆಕ್ಟರರ, ಉಳಿದೆಲ್ಲ ಭಾಗವು ಶ್ರೀ. ಈಶ್ವರನ್ನರ ಆಡಳಿತಕ್ಕೊಳಪಡಿಸಲಾಗಿದೆ.

ಮಿರಜ (ಕಿರಿ)

ಮಿರಜ (ಕಿರಿ) ಸಂಸ್ಥಾನದ ಗುಡಗೇರಿ ತಾಲೂಕನ್ನು ಧಾರವಾಡ ಜಿಲ್ಲೆ ಕಲೆಕ್ಟರರ, ಬುಧಗಾವ ಹಳ್ಳಿಯ ಕಾರ್ಸ್ಟೇಶಿಯನ್ನು ಸೊಲ್ಲಾಪುರ ಜಿಲ್ಲೆ ಕಲೆಕ್ಟರರ, ಮತ್ತು ಉಳಿದೆಲ್ಲ ಭಾಗವನ್ನು ಶ್ರೀ. ಈಶ್ವರನ್ನರ ಆಡಳಿತಕ್ಕೊಳಪಡಿಸಲಾಗಿದೆ.

ಔಂಧ

ಔಂಧ ಸಂಸ್ಥಾನದ ಖರಸುಂಡಿ ತಾಲೂಕು ಅಟಪಾಡಿ ತಾಲೂಕು ಸೊಲ್ಲಾಪುರ ಜಿಲ್ಲೆ ಕಲೆಕ್ಟರರ, ಗುಣದಾಳ ತಾಲೂಕನ್ನು ವಿಜಾಪುರ ಜಿಲ್ಲೆ ಕಲೆಕ್ಟರರ, ಔಂಧ ತಾಲೂಕು ಕುಂದಾಳ ತಾಲೂಕುಗಳನ್ನು ಸಾತಾರಾ ಜಿಲ್ಲೆ ಕಲೆಕ್ಟರರ ವಶಕ್ಕೆ ಕೊಡಲಾಗಿದೆ.

ಫಲ್ಟಣ ಸಂಸ್ಥಾನವನ್ನೆಲ್ಲ ಸಾತಾರಾ ಜಿಲ್ಲಾ ಕಲೆಕ್ಟರರ ವಶಕ್ಕೆ ಕೊಡಲಾಗಿದೆ. ಭೋರ ಸಂಸ್ಥಾನದ ಸುಧಾಗಡ ತಾಲೂಕನ್ನು ಕುಲಾಬಾ ಜಿಲ್ಲೆ ಕಲೆಕ್ಟರರ, ಉಳಿದೆಲ್ಲ ಭಾಗವನ್ನು ಪುಣೆ ಜಿಲ್ಲೆ ಕಲೆಕ್ಟರರ ವಶಕ್ಕೆ ಕೊಡಲಾಗಿದೆ.

ಸವಣೂರು, ಜತ್ತ ಅಕ್ಕಲಕೋಟೆ

ಸವಣೂರ ಸಂಸ್ಥಾನವನ್ನೆಲ್ಲ ಧಾರವಾಡ ಜಿಲ್ಲೆಯ ಕಲೆಕ್ಟರರ ಆಡಳಿತಕ್ಕೊಳಪಡಿಸಲಾಗಿದೆ.

ಅಕ್ಕಲಕೋಟೆ ಸಂಸ್ಥಾನದ ಕರ್ಜಾಹಳ್ಳಿಯನ್ನು ಧಾರವಾಡ ಕಲೆಕ್ಟರರ ಆಡಳಿತಕ್ಕೆ ಉಳಿದೆಲ್ಲ ಭಾಗವನ್ನು ಸೊಲ್ಲಾಪುರ ಕಲೆಕ್ಟರರ ಆಡಳಿತಕ್ಕೆ ಒಳಪಡಿಸಲಾಗಿದೆ.

ಜತ್ತ ಸಂಸ್ಥಾನವನ್ನೆಲ್ಲ ಶ್ರೀ. ಈಶ್ವರನ್ನರ ವಶಕ್ಕೊಳಪಡಿಸಲಾಗಿದೆ.

ಜಮಖಂಡಿ

ಜಮಖಂಡಿ ಸಂಸ್ಥಾನದ ಕುಂದಗೋಳ ತಾಲೂಕು ಧಾರವಾಡ ಜಿಲ್ಲೆಯ ಕಲೆಕ್ಟರರ ವಶಕ್ಕೆ ಹಲ್ಲೂರ ಮತ್ತು ಶಿರೋಳ ಹಳ್ಳಿಗಳನ್ನು ಸಾತಾರಾ ಕಲೆಕ್ಟರರ ವಶಕ್ಕೆ ಪಾಟಲೆ ಮತ್ತು ಮುದಕವಿ ಹಳ್ಳಿಯನ್ನು ಸೊಲ್ಲಾಪುರ ಕಲೆಕ್ಟರರ ವಶಕ್ಕೆ ಮತ್ತು ಉಳಿದೆಲ್ಲ ಭಾಗವನ್ನು ಶ್ರೀ. ಈಶ್ವರನ್ನರ ವಶಕ್ಕೆ ಒಪ್ಪಿಸಲಾಗಿದೆ.

ಸಾವಂತವಾಡಿ ಸಂಸ್ಥಾನವನ್ನೆಲ್ಲ ರತ್ನಾಗಿರಿ ಕಲೆಕ್ಟರರ ವಶಕ್ಕೆ ಒಪ್ಪಿಸಲಾಗಿದೆ.

ಮಿರಜೆಯ ಅಧಿಪತಿಗಳು ತಮ್ಮ ಸಂಸ್ಥಾನದ ಅಧಿಕಾರವನ್ನು ವಹಿಸಿಕೊಡುವಾಗ ೬ ತಿಂಗಳಿಗಿಂತ ಹೆಚ್ಚು ಮತ್ತು ೨ ವರ್ಷಗಳಿಗಿಂತ ಕಡಿಮೆ ಅವಧಿಯನ್ನು ಕರಾರಿಗೆ ೧ ತಿಂಗಳ ಬೋನಸ್ಸು ಉಳಿದವರಿಗೆಲ್ಲ ೧॥ ತಿಂಗಳ ಬೋನಸ್ಸು ಕೊಟ್ಟರು. ಆರು ತಿಂಗಳಿಗಿಂತ ಕಡಿಮೆ ಅವಧಿಯ ಕರಾರಿಗೆ ಅರ್ಧ ತಿಂಗಳ ಸಂಬಳ ಕೊಟ್ಟರು. ಪೆನಶನದಾರರಿಗೆ ಒಂದು ತಿಂಗಳ ಪೆನಶನ ಬೋನಸ್ಸು ದೊರೆಯುವದು.

ಸಾಂಗಲಿ ರಾಜೇಸಾಹೇಬರು ಸಂಸ್ಥಾನವನ್ನು ಮುಂಬಯಿ ಸರಕಾರಕ್ಕೆ ಒಪ್ಪಿಸಿಕೊಡುವಾಗ ನಗರದ ಆರೋಗ್ಯ ಸುಧಾರಣೆ ನೀರಿನ ಪೂರೈಕೆ ದೀಪದ ಸೌಕರ್ಯ ಕಾಯಿಪಲ್ಲೆ ಪೇಟೆ ಮೊದಲಾದ ಕ್ಕಾಗಿ ೧೫ ಲಕ್ಷ ರೂಪಾಯಿಗಳನ್ನು ಕೊಳ್ಳುವದಲ್ಲದೆ ೧೦-೧೧ ಲಕ್ಷ ರೂಪಾಯಿ ಅಧೀಸರಲ್ಲಿ ಒಪ್ಪಿಸಿಕೊಟ್ಟಿರುವರು. ಇದರಿಂದ ಮುನಿಸಿಪಾಲಿಟಿಗೆ ನಗರದ ಸುಧಾರಣೆ ಮಾಡಲು ಅವಕಾಶದೊರೆತಂತಾಗಿದೆ.

ಕೊಲ್ಲಾಪುರವನ್ನೂ ಲೀನಗೊಳಿಸಿರಿ

ಇಲ್ಲದಿದ್ದರೆ ಗಂಭೀರ ಪರಿಸ್ಥಿತಿ ಪ್ರಾಪ್ತವಾಗುವದು

ಶ್ರೀ ಶಂಕರರಾವ ಮೋರೆ ಇವರ ಎಚ್ಚರಿಕೆ

ಕೊಲ್ಲಾಪುರ ಸಂಸ್ಥಾನ ಪ್ರಜಾಪರಿಷತ್ತಿನ ಮಧ್ಯವರ್ತಿ ಮಂಡಳದ ಸಭೆ ಶ್ರೀ ಶಂಕರರಾವ ಮೋರೆಯವರ ಅಧ್ಯಕ್ಷತೆಯಲ್ಲಿ ೯ ನೇ ತಾರೀಕಿಗೆ ಪನ್ಹಾಳದಲ್ಲಿ ಕೂಡಿತ್ತು. ಸಂಸ್ಥಾನದ ಪ್ರಮುಖ ಮಂತ್ರಿಗಳಾದ ಶ್ರೀ ಮಾಧವರಾವ ಬಾಗಲರು ಹೊಸತಾಗಿ ಮಹಾರಾಜರ ಕೃಪಾಛತ್ರದಲ್ಲಿ ರೈತ ಕೂಲಿಕಾರರ ರಾಜ್ಯ ಪ್ರಸ್ಥಾಪಿಸುವರೆ ತಮ್ಮ ನಿರ್ಧಾರವನ್ನು ಒತ್ತಿ ಹೇಳಿದರು. ಸಂಸ್ಥಾನವನ್ನು ಪ್ರಗತಿಪರ ಸಮಾಜವಾದಿ ರಾಜ್ಯವನ್ನು ಮಾಡಬಹುದೆಂಬುದು ನನಗೆ ವಿಶ್ವಾಸವಿದೆ. ದೊಡ್ಡ ಬಂಡವಲುದಾರರಿಗೆ ಕೊಲ್ಲಾಪುರದಲ್ಲಿ ಸ್ಥಾನವಿಲ್ಲ ಯಾವ ಸ್ವಾರ್ಥ ಸಾಧಕರಿಗೂ ಇಲ್ಲಿ ಸ್ಥಾನವಿಲ್ಲೆಂದೂ ಹೇಳಿದರು.

ಶ್ರೀ ಶಂಕರರಾವ ಮೋರೆಯವರು ಮಾತನಾಡುತ್ತ ಕೆಲ ಮಹತ್ವದ ಮಾತುಗಳನ್ನು ಹೇಳಿದರು. ಜನ ಸಾಮಾನ್ಯವೆ ಸಂಸ್ಥಾನದ ಭವಿಷ್ಯವನ್ನು ನಿರ್ಧರಿಸಬಲ್ಲರು. ಭಾವನಾತ್ಮಕವಾಗಿ ಕೊಲ್ಲಾಪುರದಾಯ ಬಗೆಗೆ ಮಾಡುವಿಚಾರ ಮಾಡಲಾರೆ. ಲೀನೀಕರಣದ ಪ್ರಶ್ನೆಯನ್ನು ಹೊಲದಲ್ಲಿ ದುಡಿಯುವ ರೈತರು ಗಿರಣಿಗಳಲ್ಲಿ ದುಡಿಯುವ ಕೂಲಿಕಾರರು ನಿರ್ಧರಿಸಬಲ್ಲವರು. ಈ ಬಗ್ಗೆ ಎರಡು ಪಕ್ಷಗಳಲ್ಲಿ ಮತಭೇದವಿದ್ದುದರಿಂದ ಸಾರ್ವತ್ರಿಕ ಮತಗಣನೆಯಿಂದಲೇ ಬೇಗ ಈ ಪ್ರಶ್ನೆಯನ್ನು ಬಿಡಿಸತಕ್ಕದ್ದು. ಯಾವದೇ ಕಾರಣದಿಂದ ಲೀನೀಕರಣದ ಪ್ರಶ್ನೆಯನ್ನು ಮುಂದೂಡಿದರೆ ಪರಿಸ್ಥಿತಿ ಗಂಭೀರವಾಗುವದು. ಮುಂದೆ ಅದನ್ನು ಬಿಡಿಸಲು ಸರದಾರ ಪಟೇಲ ಮತ್ತು ಸರದಾರ ಬಲದೇವಸಿಂಗರು ಬರಬೇಕಾದೀತು. ಮುಂತಾಗಿ ಹೇಳಿದರು. ಮಹಾತ್ಮರ ನಿಧನದ ನಿಮಿತ್ತ ಸಭೆಯು ದುಃಖವನ್ನು ವ್ಯಕ್ತಪಡಿಸಿತು. ಅನಂತರ ಸಾರ್ವತ್ರಿಕ ಮತಗಣನೆಯಿಂದ ಲೀನೀಕರಣದ ಪ್ರಶ್ನೆಯನ್ನು ನಿರ್ಧರಿಸಬೇಕು, ಬಾಗಲರು ಮತ್ತು ಅವರ ಕಾರ್ಯಕಾರೀ ಮಂಡಲದ ಮೇಲೆ ಸಂಪೂರ್ಣ ವಿಶ್ವಾಸ ವ್ಯಕ್ತಮಾಡುವ ಮೊದಲಾದ ಗೊತ್ತುಗಳು ಸ್ವೀಕೃತವಾದವು. ಅಧಿವೇಶನ ಕೊನೆಗೊಂಡಿತು.

ಶ್ರೀ. ರತ್ನಪ್ಪಾ ಕುಂಬಾರರು ಅಧ್ಯಕ್ಷರು

೭ ನೇ ತಾರೀಕು ಕೋರೆಗಾಂವಕರರ ಕಟ್ಟಡದಲ್ಲಿ ಶ್ರೀ ಶಂಕರರಾವ ಮೋರೆ ಇವರ ಅಧ್ಯಕ್ಷತೆಯಲ್ಲಿ ಸೇರಿ ಕಾರ್ಯಾಧ್ಯಕ್ಷ ಶ್ರೀ ಮಾಧವರಾವ ಬಾಗಲ ಹಾಗು ಅವರ ಕಾರ್ಯಕಾರೀ ಮಂಡಲದಲ್ಲಿ ಅವಿಶ್ವಾಸವನ್ನು ವ್ಯಕ್ತಪಡಿಸುವ ಗೊತ್ತುವಳಿ ಸ್ವೀಕೃತವಾಯಿತು. ಶ್ರೀ ರತ್ನಪ್ಪಾ ಕುಂಬಾರ ಇವರು ತಾತ್ಪೂರ್ತಿಕವಾಗಿ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಕೊಲ್ಲಾಪುರ ಸಂಸ್ಥಾನವು ಮುಂಬಯಿ ಪ್ರಾಂತದಲ್ಲಿ ಲೀನವಾಗಬೇಕೆಂದು ಕೇಳಿಕೊಳ್ಳುವ, ಪನ್ಹಾಳಾ ಅಧಿವೇಶನಕ್ಕೆ ಬಹಿಷ್ಕಾರ ಹಾಕುವ ಪ್ರಜಾಪರಿಷತ್ತಿನ ಅಧಿವೇಶನವನ್ನು ಬೇಗನೆ ಕೂಡಿಸಲು ಹೊಸ ಕಾರ್ಯಕಾರಿ ಮಂಡಳಕ್ಕೆ ಅಧಿಕಾರ ಕೊಡುವ ಮೊದಲಾದ ಗೊತ್ತುಗಳು ಸ್ವೀಕೃತವಾದವು. ಕಾರ್ಯಕಾರೀ ಮಂಡಳದ ಅಧ್ಯಕ್ಷರ ಹೆಸರುಗಳನ್ನು ಅಧ್ಯಕ್ಷರು ಬೇಗ ಜಾಹೀರ ಪಡಿಸಲಿರುವರು. ಈ ಸಭೆಗೆ ೧೫೫ ಸದಸ್ಯರಲ್ಲಿ ೭೨ ಜನ ಬಂದಿದ್ದರು.



ಬಿ. ಎಸ್. ಮುಂಜೆಯವರು ತಮ್ಮ ೭೬ ನೇ ವಯಸ್ಸಿನಲ್ಲಿ ೩ ನೇ ತಾರೀಕು ಮಧ್ಯಾಹ್ನ ೧-೨೦ ಕ್ಕೆ ನಿಧನ ಹೊಂದಿದರು.

ಜುನಾಗಡದ ಬಗ್ಗೆ ಭಾರತ ಪ್ರತಿನಿಧಿಯ ಹೇಳಿಕೆ

ಜುನಾಗಡದ ಪ್ರಶ್ನೆ ಭದ್ರತಾಮಂಡಲದಲ್ಲಿ ಬಂದಾಗ ಭಾರತ ಪ್ರತಿನಿಧಿ ಮಂಡಲದ ಧುರೀಣರಾದ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರರು ಚರ್ಚೆಯಲ್ಲಿ ಭಾಗವಹಿಸಿದರು. ಸಭಾಪತಿಗಳಾದ ಶ್ರೀ ಸಿಯಾಂಗರು (ಚೀನ) ಪ್ರಾರಂಭದಲ್ಲಿ ಶ್ರೀ ಗೋಪಾಲಸ್ವಾಮಿಯವರನ್ನು ಆದರದಿಂದ ಬರಮಾಡಿಕೊಂಡ ಬಳಿಕ ಕಾರ್ಯಕಲಾಪ ಪ್ರಾರಂಭವಾಯಿತು.

ಚರ್ಚೆಯಲ್ಲಿ ಶ್ರೀ ಅಯ್ಯಂಗಾರರು, ಜುನಾಗಡದ ಇತ್ತೀಚಿನ ಸಾರ್ವತ್ರಿಕ ಮತಗಣನೆಯ ಬಗ್ಗೆ 'ಹೇಳಬೇಕಾದರೆ-ಜುನಾಗಡದ ಪ್ರಶ್ನೆಯ ಬಗ್ಗೆ ಭದ್ರತಾಮಂಡಲಕ್ಕಾಗಲಿ ಇತರರಿಗಾಗಲಿ ಯಾವ ಸಂಶಯವೂ ಇಲ್ಲವೆಂದು ತಿಳಿದು ಹಾಗೆ ಮತಗಣನೆ ಮಾಡಿಸಲಾಯಿತು; ಸಂಶಯವಿತ್ತೆಂದು ತಿಳಿದಿದ್ದರೆ, ಸಮಸ್ಯೆ ಇತ್ಯರ್ಥವಾಗುವವರೆಗೆ ಮುಂದೂಡಲಾಗುತ್ತಿತ್ತು,' ಎಂದುದಲ್ಲದೆ—

'ಭಾರತ ಸರಕಾರದ ವರ್ತನೆಯ ಬಗ್ಗೆ ಅಸಮಾಧಾನವಾವುದೂ ಫೆಬ್ರುವರಿ ೧೯ ರ ಶ್ರೀ ಜಾಫರುಲ್ಲಾಖಾನರ ಭಾಷಣದಲ್ಲಿ ಕಂಡುಬಂದುದರಿಂದ ಮತಗಣನೆಯ ಪರಿಣಾಮವನ್ನು ಪ್ರಸಿದ್ಧಿಸಲಾಯಿತು. ಮತ್ತು ಮುಸ್ಲಿಂ ಅಧಿಕಾರಿಗಳ ಬಂಧನ ಇತ್ಯಾದಿ ಆರೋಪ ಸುಳ್ಳು; ಈಗಲೂ ಅಲ್ಲಿ ಮುಸಲ್ಮಾನರು ದೊಡ್ಡ ಹುದ್ದೆಗಳಲ್ಲಿದ್ದಾರೆ' ಎಂದೂ ವಿವರಿಸಿದರು.

ಕಡೆಯಲ್ಲಿ 'ಈ ಮೊದಲು ಕೊಟ್ಟ ಅಭಿವಚನವನ್ನು ಭಾರತ ತಪ್ಪದೆ ಪಾಲಿಸುವದು, ಪುನಃ ಮತಗಣನೆಯಾಗಬೇಕೆಂದರೆ ಅದಕ್ಕೂ ಅದು ಸಿದ್ಧವಿದೆ. ಹಾಗೆ ಮತಗಣನೆ ಪುನಃ ನಡೆಯುವದಾದರೆ, ಭದ್ರತಾಮಂಡಲದ ಇಚ್ಛಾನುಸಾರ ಜುನಾಗಡ ಯಾವ ಅಧಿರಾಜ್ಯದಲ್ಲಿ ಸೇರಬೇಕು? ಸಂಯುಕ್ತ ಸೌರಾಷ್ಟ್ರದಲ್ಲಿ ಸೇರಬೇಕೋ? ನವಾಬರ ಹಿಂದಿರುಗಬೇಕೋ? ಎಂಬ ೩ ಮುದ್ದೆಗಳ ಮೇಲೆ ನಡೆಯಬಹುದು—ಎಂದು ಅಯ್ಯಂಗಾರರು ಮಾತು ಮುಗಿಸಿದರು.

ಆಂಗ್ಲೋ-ಅಮೇರಿಕನ್ನರ ಕುಯುಕ್ತಿ ?

ಆಂಗ್ಲೋ-ಅಮೇರಿಕನ್ ಮುತ್ಸದ್ದಿಗಳು ಕಾಶ್ಮೀರ ಪ್ರಶ್ನೆಯನ್ನು ಬಿಡಿಸಲು ಯೋಜನೆಯನ್ನು ಸಿದ್ಧಪಡಿಸುತ್ತಾರೆಂದು ಲಂಡನ್ನಿನಲ್ಲಿ ಸುದ್ದಿಯಿದೆ. ಕಾಶ್ಮೀರವನ್ನು ಹಿಂದು ಕಾಶ್ಮೀರ ಮತ್ತು ಮುಸ್ಲಿಂ ಕಾಶ್ಮೀರವೆಂದು ವಿಭಜಿಸಬೇಕಂತೆ. ಈ ಯೋಜನೆಯನ್ನು ಅಮೇರಿಕನ್ನರು ಮಧ್ಯಸ್ಥಿಕೆಗಾಗಿ ಮುಂಬರಿಸಿದಲ್ಲಿ ಸ್ವೀಕರಿಸಬೇಕೆಂದು ಬ್ರಿಟ್ನಾರ ಸಲಹೆ ಬಂದಿದೆಯಂತೆ. ಹಿಂದುಸ್ಥಾನದಲ್ಲಿಯ ಬ್ರಿಟಿಶ ಸುದ್ದಿಗಾರರ ವರದಿಗಳು ಸಹ ಕಾಶ್ಮೀರ ವಿಭಜನೆಯ ಒಗಟನ್ನು ದ ಸಂಗತಿಯನ್ನು ಪುಷ್ಟೀಕರಿಸುತ್ತವೆ.

ಇಷ್ಟು ದಿನಗಳ ವರೆಗೆ ಕಾಶ್ಮೀರ ಚರ್ಚೆಯಲ್ಲಿ ಪಾಕಿಸ್ಥಾನ ಧೋರಣ ವಹಿಸಿದ ಸೋಸಿಯೂರ ಸಚಿವಮಂಡಲವು ಹಿಂದುಸ್ಥಾನಕ್ಕೆ ಬೆಂಬಲ ಕೊಡಬೇಕೆಂದು ಸೂಚನೆಗಳು ಬಂದಿವೆಯಂತೆ. ಆದರೆ ಇದರಿಂದ ಹೆಚ್ಚೇನೂ ಫಲವಾಗಲಾರದೆಂದೂ ಈಗ ಆಧ್ಯಕ್ಷತೆ ಹೊಂದಿದ ಸರ್ ಗಿರಿಜಾಶಂಕರ ವಾಜಪೇಯಿಯವರು ಬುದ್ಧಿ ಚಾತುರ್ಯ ತೋರದಿದ್ದರೆ ಕಾಶ್ಮೀರ ವಿಭಜನೆ ಕಟ್ಟಿಟ್ಟದ್ದೇ ಎಂದೂ ಸಂ. ಕರ್ನಾಟಕದ ಪ್ರತಿನಿಧಿ ಅಭಿಪ್ರಾಯ ಪಡುತ್ತಾನೆ.

ಕರ್ನಾಟಕ

ಧಾರವಾಡ

ಕರ್ನಾಟಕ ಸ್ವಾಯತ್ತ ಪ್ರಾಂತವನ್ನು ಕೂಡಲೆ ರಚಿಸಬೇಕೆಂಬುದನ್ನು ಒತ್ತಾಯಪಡಿಸುವದ ಕ್ಕಾಗಿ ಪಂಡಿತ ಜವಾಹರಲಾಲ ಮತ್ತು ಸರದಾರ ವಲ್ಲಭಭಾಯಿ ಡಾ. ರಾಜೇಂದ್ರ ಪ್ರಸಾದ ಮೊದ ಲಾದವರ ಕಡೆಗೆ ಶಿಷ್ಟಮಂಡಲವೊಂದನ್ನು ಕಳಿಸ ಬೇಕೆಂದು ಅ. ಕ. ಮಹಾಮಂಡಲದ ಕಾರ್ಯಕಾರಿ ಮಂಡಲದ ಸಭೆಯಲ್ಲಿ ಗೊತ್ತುವಳಿ ಸ್ವೀಕೃತ ವಾಯಿತು. ವಿಲೀನವಾದ ಕನ್ನಡ ಪ್ರದೇಶ ಗಳನ್ನು ಕೂಡಲೆ ಕನ್ನಡ ಜಿಲ್ಹೆಗಳಲ್ಲಿ ಸೇರಿಸ ಬೇಕೆಂದೂ ಬಿನ್ನವಿಸುವ ಗೊತ್ತುವಳಿ ಸ್ವೀಕೃತ ವಾಯಿತು.

ಗದಗ ತಾಲೂಕ ಕಚೇರಿಗೆ ಅ. ಕಮೀಶನರ ರಾದ ಶ್ರೀ ಸಾಲ್ಡಾಣಾ ಇವರು ೨ನೇ ತಾರೀಕು ಮಧ್ಯಾಹ್ನ ೧೨ ಗಂಟೆಗೆ ಆಕಸ್ಮಿಕವಾಗಿ ಹೋಗಿ ಕೆಲ ಕಾಗದ ಪತ್ರಗಳನ್ನು ತೆಗೆದುಕೊಂಡು ಹೋಗಿದ್ದಾರೆಂದು ತಿಳಿಯುತ್ತದೆ. ಆಗ ಮಾಮ ಲೇದಾರರು ಕಚೇರಿಯಲ್ಲಿ ಇದ್ದಿಲ್ಲವಂತೆ.

ಧಾರವಾಡದಲ್ಲಿ ಕರ್ನಾಟಕ ಸ್ಯಾನಿಟರಿ ಡಿವಿ ಜನ್ ಸ್ಥಾಪಿಸಲಾಗುವದು. ಅದರಂತೆ ನೀರ ಸಾಗರ ಆಣೆಕಟ್ಟಿನ ಕೆಲಸದ ಪೂರೈಕೆಗಾಗಿ ಕಣವಿ ಹೊನ್ನಾಪುರದಲ್ಲಿ ಒಂದು ಮತ್ತು ಹುಬ್ಬ ಳ್ಳಿಯಲ್ಲಿ ಒಂದು ಹೀಗೆ ಎರಡು ಧಾರವಾಡ ಮತ್ತು ಹುಬ್ಬಳ್ಳಿ ವಾಟರ ವರ್ಕ್ಸ ಸಬ್ ಡಿವಿ ಜನಗಳನ್ನು ಸದ್ಯಕ್ಕೆ ಒಂದು ವರ್ಷದವರೆಗೆ ಸ್ಥಾಪಿಸಲಾಗುವದು. ಇವು ಪಬ್ಲಿಕವರ್ಕ್ಸ ಎಂಜಿ ನಿಯರರ ನೇತೃತ್ವದಲ್ಲಿ ಕೆಲಸ ಮಾಡುವವು.

ಕಳೆದ ಮಂಗಳವಾರ ಧಾರವಾಡ ಸಂತೆಯಲ್ಲಿ ಮುಮ್ಮಿಗಟ್ಟಿಯವನೊಬ್ಬನು ಖಾಸಗಿ ದ್ವೇಷ ಕ್ಕಾಗಿ ಒಬ್ಬನನ್ನು ಇರಿದದ್ದರಿಂದ ಗೊಂದಲ ವೆದ್ದು ಜನರೆಲ್ಲ ದಿಕ್ಕುಗೆಟ್ಟು ಓಡಹತ್ತಿದರು. ಅಷ್ಟರಲ್ಲಿ ಪೋಲೀಸ ಅಧಿಕಾರಿಗಳು ಮತ್ತು ಕಾಂಗ್ರೆಸ ಕೆಲಸಗಾರರು ಬಂದು ಧೈರ್ಯ ಹೇಳಿ ಕಾಳುಮಾರಾಟ ಮಾಡಹಚ್ಚಿದರು ಈ ಗೊಂದಲ ದಿಂದ ಅಂದು ಕಾಳು ಕಡಮೆ ದರದಿಂದ ಮಾರ ಲ್ಪಟ್ಟವು. ಹಳ್ಳಿಯ ಮಾರಾಟಗಾರರು ಸಮ ಯಕ್ಕೆ ತಕ್ಕಂತೆ ವರ್ತಿಸಿ ಧಾರಣೆ ಇಳಿಸಿ ಮಾರಾಟ ಮಾಡಿದ್ದರಿಂದ ಅವರನ್ನಭಿನಂದಿಸಲಾಯಿತು.

ಗದುಗಿನ ವಿದ್ಯುತ್ಕಂಪನಿ ಮತ್ತು ನಗರಸಭೆ ಯವರಲ್ಲಿ ಮತ್ತೆ ತಿಕ್ಕಾಟ ನಡೆದದ್ದರಿಂದ ನಗ ರದ ಬೀದಿಗಳಲ್ಲಿ ವಿದ್ಯುದ್ದೀಪಗಳು ಇಲ್ಲದಂತಾ ಗಿವೆ ಸೀಮೆ ಎಣ್ಣೆಯ ಮಿಣಿ ಮಿಣಿ ದೀಪಗಳು ಉರಿಯಹತ್ತಿವೆ.

ನಿಯಂತ್ರಣಗಳನ್ನು ಮತ್ತೆ ಹೇರಿರೆಂದು ಧಾರವಾಡ ಜಿಲ್ಹಾ ಕಲೆಕ್ಟರರ ಕಡೆಗೆ ಅನೇಕ ರಿಂದ ಅರ್ಜಿಗಳು ಬಂದಿವೆ. ಅವರಲ್ಲಿ ನ್ಯಾಯ ಖಾತೆಯ ಒಬ್ಬ ವರಿಷ್ಠಾಧಿಕಾರಿಗಳೂ ಇರುವ ರೆಂದು ತಿಳಿಯುತ್ತದೆ.

ಹಾವೇರಿ ತಾಲೂಕ ಡೆವಲಪಮೆಂಟ ಅಸೋಸಿ ಯೇಶನ ಇವರ ನೇತೃತ್ವದಲ್ಲಿ ಒಕ್ಕಲತನ ಪ್ರದ ರ್ಶನ ಹಾಗೂ ಅಖಿಲ ಭಾರತೀಯ ಅಮೃತ ಮಹಾಲ ದನಗಳ ಪ್ರದರ್ಶನವು ವಿಜೃಂಭ ಣೆಯಿಂದ ಸಾಂಗವಾಯಿತು. ೮ ಸಾವಿರ ದನ ಗಳು ಕೂಡಿದ್ದವು. ನಿಯೋಜಿತ ಅಧ್ಯಕ್ಷರಾದ ಶ್ರೀ ಸಿದ್ದಪ್ಪಾ ಹೊಸಮನಿ ಮತ್ತು ಮುಖ್ಯ ಅತಿಥಿಗಳಾದ ಶ್ರೀ ಸಿದ್ದಪ್ಪಾ ಕಂಬಳಿಯವರು ಸಮಯೋಚಿತ ಭಾಷಣ ಮಾಡಿ ಕಾರ್ಯಕ್ರಮ ವನ್ನು ಪ್ರಾರಂಭಿಸಿದರು. ಸಿ ಕೆ ಕುಲಕರ್ಣಿಯವರು ಸ್ವಾಗತಾಧ್ಯಕ್ಷರಾಗಿದ್ದರು.

ಶಿರಹಟ್ಟಿ ತಾಲೂಕ ಪೈಕಿ ಬೆಳ್ಳಟ್ಟಿ ಯಲ್ಲಿ ಶ್ರೀ ಮುಗಳೂರು ಹಾಲ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಗಾಂಧೀಜಿಯವರ ಸ್ಮಾರಕಾರ್ಥ ಶ್ರೀ ರಾಮಲಿಂ ಗೇಶ್ವರ ಮಠದಲ್ಲಿ ಬಿ ವಿ ಸ್ಕೂಲನ್ನು ಮತ್ತು ಬೋರ್ಡಿಂಗನ್ನು ಸ್ಥಾಪಿಸಬೇಕೆಂದು ನಿರ್ಧರಿ ಸಲಾಯಿತು.

ಬಳ್ಳಾರಿ

ಬಳ್ಳಾರಿಯಲ್ಲಿ ನೀರಿನ ಪೂರೈಕೆ ಮೇಲಿಂದ ಮೇಲೆ ಸಾಕಷ್ಟು ಆಗುವದಿಲ್ಲಾದ್ದರಿಂದ ಸರಕಾ ರದವರು ಕೂಡಲೆ ಅವಶ್ಯಕ ಹಣವನ್ನು ಮಂಜೂರ ಮಾಡಿ ಆ ಕಾರ್ಯ ಬೇಗನೆ ಪ್ರಾರಂಭ ವಾಗುವಂತೆ ನೋಡಿಕೊಳ್ಳಬೇಕೆಂದು ಬಳ್ಳಾ ರಿಯ ಮುನಸಿಪಾಲಟಿಯ ಸಭೆಯಲ್ಲಿ ಬಿನ್ನವಿ ಸುವ ಗೊತ್ತುವಳಿ ಸ್ವೀಕೃತವಾಯಿತು.

ಹೊಸಪೇಟೆಯಲ್ಲಿ ೮ಕ್ಕೆ ಕೂಡಿದ ಪೌರಪಾಲ ಸಂಘದ ಅವಸರದ ಸಭೆಯಲ್ಲಿ ಇಲ್ಲಿಯ ರಸ್ತೆ ಗಳ ದುರವಸ್ಥೆಯನ್ನು ಮದ್ರಾಸ ಸರಕಾರದ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳಲು ಚೇರಮ ನುನ್ ಶ್ರೀ. ಗುರುನಾಥಪ್ಪ ಇವರ ನೇತೃತ್ವ ದಲ್ಲಿ ಒಂದು ಶಿಷ್ಟಮಂಡಳವನ್ನು ಮದ್ರಾಸ ಮಂತ್ರಿ ಮಂಡಳಕ್ಕೆ ಕಳಿಸಿಕೊಡಬೇಕೆಂದು ಗೊತ್ತಾಯಿತು.

ಬೆಳಗಾವಿ

ಬೆಳಗಾವಿಯ ಚಿಂಕಾಮಣಿ ಕಬಾರಾಮ ಬಡಕುಂದ್ರಿ ಎಂಬ ತರುಣನು ಹರಿಹರಕ್ಕೆ ಹೋಗಿ ತುಂಗಭದ್ರಾನದಿಯಲ್ಲಿ ಆತ್ಮಹತ್ಯ ಮಾಡಿಕೊಂಡ ನೆಂದು ವರದಿಯಾಗಿದೆ. ತಾನು ಜೀವ ಕೊಡುವ ನಿರ್ಧಾರವನ್ನು ಅವನು ತನ್ನ ಅಣ್ಣಂದಿರಾದ ಶ್ರೀ ಬಡಕುಂದ್ರಿ ವಕೀಲರಿಗೆ ತಿಳಿಸಿದ್ದನಂತೆ. ವಕೀಲರು ಅಲ್ಲಿಗೆ ಹೋಗಿ ಹುಡುಕಾಡಿದ ಬಳಿಕ ನದಿಯಲ್ಲಿ ಹೆಣ ಸಿಕ್ಕಿತು.

ಬೆಳಗಾವಿ ಸಾರ್ವಜನಿಕ ವಾಚನಾಲಯ ಚುನಾವಣೆಯಾಗಿ ಕೆ. ಬಿ. ಪೋತದಾರ ಮತ್ತು ಕೆ. ಜಿ. ಜೋಶಿ ಇವರು ಕಾರ್ಯದರ್ಶಿಗಳಾಗಿ ಆರಿಸಿ ಬಂದಿದ್ದಾರೆ. ಇವರಿಬ್ಬರೂ ಕನ್ನಡಿಗರು. ಕಾರ್ಯಕಾರಿ ಮಂಡಳದ ಹನ್ನೊಂದು ಸ್ಥಳಗಳಲ್ಲಿ ಎಂಟನ್ನು ಕನ್ನಡಿಗರು ಪಡೆದಿದ್ದಾರೆ. ಶ್ರೀ. ಬೆಳವಿ ದತ್ತರಾಯರು ಈ ಸಲವೂ ಅವಿರೋಧ ಅಧ್ಯಕ್ಷರಾಗಿ ಆರಿಸಿಬಂದಿದ್ದಾರೆ.

ಬೆಳಗಾವಿ ಜಿಲ್ಹೆಯಲ್ಲಿ ಮೊನ್ನೆ ಮೊನ್ನೆ ಸಂಭ ವಿಸಿರುವ ಲೂಟಿ ಮತ್ತು ಕೊಳ್ಳೆಗಳಲ್ಲಿ ಅನೇಕ ಕಾಂಗ್ರೆಸಿಗರು ಪ್ರಮುಖರು ಭಾಗವಹಿಸಿರುವ ರೆಂದು ಬೊಬ್ಬಾಟವಾಗಿತ್ತು. ಇದೀಗ ಭೋಜ ಗ್ರಾಮದ ಶ್ರೀ ಸತ್ತೇಗೌಡ ಪಾಟೀಲ ಮತ್ತು ಮಧುಕರ ಇಬ್ಬರು ಕಾಂಗ್ರೆಸ್ಸಿಗರ ಬಂಧನವಾದ ಸುದ್ದಿ ಬಂದಿದೆ. ಇನ್ನೂ ಹಲವರು ಬಂಧಿಸಲ್ಪ ಡುವ ಸುದ್ದಿ ಇದೆ.

ಇತ್ತೀಚಿನ ವಿಧ್ವಂಸಕ ಚಳವಳಿಯಲ್ಲಿ ಹಾನಿಗೊಂಡವರಿಗೆ ಡಿಸ್ಟ್ರಿಕ್ಟ ಪೋಲೀಸ ಆಕ್ಟ ೨೫ ಅ ಕಲಮಿನ ಪ್ರಕಾರ ಹಾನಿಯನ್ನು ಸರ ಕಾರದವರು ತುಂಬಿ ಕೊಡಬೇಕಾಗುವದು ಆದು ದರಿಂದ ಹಾನಿಹೊಂದಿದವರು ಅದು ಸಂಭವಿಸಿದ ಒಂದು ತಿಂಗಳೊಳಗಾಗಿ ಜಿಲ್ಹಾ ಮ್ಯಾಜಿಸ್ಟ್ರೇಟರ ಕಡೆಗೆ ಅರ್ಜಿ ಕಳಿಸಿ ಕೊಡಬೇಕೆಂದೂ ೧೯೪೧ ರಲ್ಲಿ ಈ ವಿಷಯದಲ್ಲಿ ಕಾಯದೆಯಲ್ಲಿ ತಿದ್ದುಪಡಿ ಆಗಿದೆಯೆಂದೂ ಓರ್ವರು ತಿಳಿಸುತ್ತಾರೆ.

ಅಖಿಲ ಭಾರತ ಪುರೋಗಾಮಿ ಪಕ್ಷದ ಕಾರ್ಯ ಕಾರೀ ಮಂಡಲದ ಸಭೆ ಇದೇ ೧೩ಕ್ಕೆ ಕೂಡದೆ ೨೦ಕ್ಕೆ ಮುಂದುವರಿಸಲಾಗಿದೆಯೆಂದೂ ಅಧ್ಯಕ್ಷರ ಕರ್ನಾಟಕ ಸಂಚಾರವೂ ಸ್ವಾಭಾವಿಕವಾಗಿ ಒಂದು ವಾರ ಮುಂದೆ ಬಿದ್ದಿದೆಯೆಂದೂ ಪ್ರಸಿದ್ಧಿಸಲಾ ಗಿದೆ.

ವಿಜಾಪುರ

ಕೆರೂರ ಹತ್ತರ ಇರುವ ನರೇನೂರ ಲಮಾಣಿ ತಾಂಡೇಕ್ಕೆ ಬೆಂಕಿ ಹತ್ತಿ ಇಡೀ ತಾಂಡೆಯು ಸುಟ್ಟು ಭಸ್ಮವಾಗಿ ಹೋಗಿದೆ. ಒಳಗಿದ್ದ ೧೫೦೦ ಚೀಲ ಆಹಾರಧಾನ್ಯ ನಾಶವಾಗಿ ಹೋಗಿದೆ.

ಮುಧೋಳದ ಶ್ರೀಮಂತ ರಾಜೇಸಾಹೇಬರ ಲಗ್ನದ ಆಮಂತ್ರಣದ ಸಲುವಾಗಿ ಉಮೇದವಾ ರಕ್ಕೆ ಹೊರಟಿದ್ದ ಶ್ರೀಮಂತ ರಾಜೇಸಾಹೇಬರ ಮಾಮಾ ಹಾಗು ಶ್ರೀ. ಬಾಬುರಾವ ಬಕ್ಷಿ ಇವರ ಮೋಟರಿಗೆ ಹನಗಂಡಿಯ ಹತ್ತರ ಅಪಘಾತ ಸಂಭವಿಸಿ ಒಬ್ಬ ಪೋಲೀಸ ತಕ್ಷಣ ಮರಣ ಹೊಂದಿದ್ದಲ್ಲದೆ ಒಬ್ಬನಿಗೆ ಭಯಂಕರ ಗಾಯ ವಾಗಿದೆ. ಬಾಬೂರಾವ ಬಕ್ಷಿ ಹಾಗು ಮಾಮಾ ಸಾಹೇಬರಿಗೆ ಒಳಪೆಟ್ಟು ಹತ್ತಿದೆ.

ಬಾಗಲಕೋಟಿ ತಾಲೂಕು ಮತ್ತು ವಿಜಾಪುರ ತಾಲೂಕಿನ ಮತ್ತೆ ೧೫ ಹಳ್ಳಿಗಳಲ್ಲಿ ದುರ್ಭಿಕ್ಷೆ ಇದೆಯೆಂದು ಸರಕಾರ ಸಾರಿದೆ.

ಉತ್ತರ ಕನ್ನಡ

ಕಲೆಕ್ಟರರ ಅಧ್ಯಕ್ಷತೆಯಲ್ಲಿ ೬ಕ್ಕೆ ಸೇರಿದ ದಲಿತ ವರ್ಗದ ಸಮಿತಿಯು ಪ್ರಾಥಮಿಕ ಶಾಲೆಯ ಹರಿಜನ ವಿದ್ಯಾರ್ಥಿಗಳಿಗೆ ಪುಕ್ಕಟೆ ಪಾಟಿ ಪುಸ್ತ ಕಗಳನ್ನು ಕೊಡಬೇಕೆಂದು ಕೇಳಿಕೊಳ್ಳುವ ಗೊತ್ತುವಳಿ ಸ್ವೀಕರಿಸಿತು. ಹರಿಜನ ವಿದ್ಯಾರ್ಥಿ ಗಳಿಗೆ ಶಿಕ್ಷಣ ಸಂಬಂಧದಲ್ಲಿ ಹೆಚ್ಚು ಧನಸಹಾಯ ಬೇಡಿದ್ದಲ್ಲದೆ ದೇವಾಲಯದಲ್ಲಿ ನಡೆಸಿದ ಶಾಲೆ ಗಳಲ್ಲಿ ಹರಿಜನರಿಗಾಗುವ ತೊಂದರೆಗಳನ್ನು ದೂರ ಪಡಿಸಲು ಕೇಳಿಕೊಳ್ಳಲಾಯಿತು.

ಬರುವ ಎಪ್ರಿಲದಲ್ಲಿ ಗವರ್ನರರಾದ ಶ್ರೀ. ಮಹಾರಾಜಸಿಂಗರವರು ಕಾರವಾರಕ್ಕೆ ಬಂದಾ ಗಲೇ ಲೋಕಲ್ ಬೋರ್ಡಿನ ಪರವಾಗಿ ಅವರಿಗೆ ಮಾನಪತ್ರ ಸಮರ್ಪಿಸಬೇಕು. ಮತ್ತು ಮಹಾತ್ಮಾ ಗಾಂಧಿಯವರ ತೈಲಚಿತ್ರವನ್ನು ಅವರ ಹಸ್ತ ದಿಂದ ಅನಾವರಣ ಮಾಡಬೇಕೆಂಬ ಗೊತ್ತುವಳಿ ಬೋರ್ಡಿನ ಸಭೆಯಲ್ಲಿ ಸ್ವೀಕೃತವಾಗಿದೆ. ಗ್ರಾಮ್ಯ ವೈದ್ಯಕೀಯ ಸಂಸ್ಥೆಗಳಿಗೆ ೩೫೦೦ ರೂ. ಧನ ಸಾಹಾಯ್ಯ ಮಾಡುವ ಬೈತಕಲ್ಲದಲ್ಲಿ ಮರಾಠಿ ಶಾಲೆ ಸ್ಥಾಪಿಸುವ ಗೊತ್ತುವಳಿಯೂ ಸ್ವೀಕೃತವಾ ಯಿತು.

ಕುಮಟೆಯಲ್ಲಿ ಈಗ ಅಕ್ಕಿ ಸಿಕ್ಕುವುದು ಕಷ್ಟ ವಾಗಿದೆ. ಶಿರ್ಶಿ, ಸಿದ್ದಾಪುರ, ಮುಂಡಗೋಡ ಮುಂತಾದ ಅಕ್ಕಿಯ ಪೇಟೆಗಳಲ್ಲಿ ಮೇಲಾಟ ದಿಂದ ಅಕ್ಕಿ ಖರೀದಿ ಮಾಡಿ ಪರ ಗ್ರಾಮಗಳಿಗೆ ಕಳಿಸಿ ಕೊಡಹತ್ತಿದ್ದರಿಂದ ಈಗ ಇಲ್ಲಿ ಅಕ್ಕಿ ಸಿಕ್ಕ ದಂತಾಗಿದೆ. ಅಕ್ಕಿಯ ಧಾರಣೆ ಬೆಸ್ತಗಿ ಅಕ್ಕಿ ಪಾಯಲಿಗೆ ೨ರೂ. ಮತ್ತು ಕುಚಗಿ ಅಕ್ಕಿ ಪಾಯ ಲಿಗೆ ೧—೧೪—೦ಕ್ಕೆ ನಿಂತಿದೆ.

ದಕ್ಷಿಣ ಕನ್ನಡ

ಮಂಗಳೂರಿನ ಡಿಪ್ರೆಸ್ಡ ಕ್ಲಾಸ ಮಿಶನ್ ಸಂಸ್ಥೆಯ ಸುವರ್ಣೋತ್ಸವ ೨೮ಕ್ಕೆ ಸ್ವಾಮಿ ರಮಾನಂದಜಿಯವರ ಅಧ್ಯಕ್ಷತೆಯಲ್ಲಿ ಸಾಂಗವಾ ಯಿತು. ಶ್ರೀ. ಸೇಡಿಯಾಪು ಕೃಷ್ಣಭಟ್ಟ ಮತ್ತು ಎನ್. ಎಸ್. ಕಿಲ್ಲೆ ಇವರು ಹರಿಜನೋದ್ಧಾರದ ಬಗ್ಗೆ ಮಾತಾಡಿದರು. ಪತಿತೋದ್ಧಾರದಲ್ಲಿ ಎಲ್ಲರೂ ಸಹಾಯ ಮಾಡಬೇಕೆಂದು ಅಧ್ಯಕ್ಷರು ಹೇಳಿದರು. ವಿವಿಧ ವಿನೋದಾವಳಿಗಳೊಡನೆ ಸಮಾರಂಭ ಕೊನೆಗಂಡಿತು.

ದಕ್ಷಿಣ ಕನ್ನಡ ರಜಕಕುಲೋದ್ಧಾರಕ ಸಂಘದ ವಾರ್ಷಿಕೋತ್ಸವ ಹಾಗು ವಾರ್ಷಿಕ ಮಹಾಸಭೆ ಪೌರಸಭೆಯ ಉಪಾಧ್ಯಕ್ಷ ಶ್ರೀ. ಬಿ. ಗಂಗಾಧರದಾಸರ ಅಧ್ಯಕ್ಷತೆಯಲ್ಲಿ ನಡೆದು ಗಾಂಧೀಜಿಯ ನಿಧನದ ಬಗ್ಗೆ ದುಃಖವ್ಯಕ್ತ ಮಾಡ ಲಾಯಿತು. ಅವರ ಕೊಲೆಗಡಕನನ್ನು ನಿಷೇಧಿ ಸಲಾಯಿತು. ಅವರ ತತ್ವಗಳಂತೆ ನಡೆವ ನಿರ್ಧಾರ ಮಾಡಲಾಯಿತು. ಸೇವಾ ಪ್ರಮಾಣ ಹೆಚ್ಚಿಸ ಬೇಕು. ರಜಕರಿಗಿದ್ದ ಸೌಕರ್ಯ ಹೆಚ್ಚಿಸ ಬೇಕು ಮೊದಲಾದ ಗೊತ್ತುವಳಿ ಸ್ವೀಕೃತವಾ ದಿತು.

ಮೈಸೂರು ಸಂಸ್ಥಾನ

ಸೊಲ್ಲಾಪುರದ ಡ್ಯಾ. ಎಂ. ಎಸ್. ಸರವಾರ ಇವರು ಮೈಸೂರು ಸಂಸ್ಥಾನದಲ್ಲಿ ಕಳೆದ ೨೦ ದಿನಗಳಿಂದಲೂ ಕರ್ನಾಟಕ ಏಕೀಕರಣದ ಪ್ರಚಾರಕ್ಕಾಗಿ ಸಂಚರಿಸುತಿರುವರು. ಅನೇಕ ಕಡೆ ಸಾರ್ವಜನಿಕ ಭಾಷಣ ಮಾಡುತಿರುವರು. ಹಾಸನಿಗೆ ಅವರು ಬಂದಾಗ ಜಿಲ್ಹಾ ಬೋರ್ಡ ಭವನದಲ್ಲಿ ಅವರಿಗೆ ಸತ್ಕಾರಕೂಟವನ್ನು ಕೊಡ ಲಾಗಿತ್ತು.

ಅರಸೀಕೆರೆ ತಿಪಟೂರುಗಳು ಕಾಯಿ ಕೊಬ್ರಿ ವ್ಯಾಪಾರದ ಕೇಂದ್ರಗಳಾಗಿದ್ದು ಇಲ್ಲಿಂದ ಕಾನ ಪುರ ಮೊದಲಾದ ಕಡೆಗೆ ಕಳಿಸಲು ರೇಲ್ವೆ ಸೌಕರ್ಯ ಚೆನ್ನಾಗಿ ಇಲ್ಲದ್ದರಿಂದ ವ್ಯಾಪಾರಸ್ಥರಿಗೆ ಬಹಳ ತೊಂದರೆಯಾಗಿದೆ. ಇಲ್ಲಿ ಕೊಬ್ರಿ ಧಾರಣೆ ಸಟ್ಟಿ ೧ ಕ್ಕೆ ೧೪೫ ರೂ. ಇದ್ದರೆ ದಿಲ್ಲಿ ಕಾನಪುರ ಪೇಟೆ ಗಳಲ್ಲಿ ೨೬೦ ರೂ. ಮಾರಾಟವಾಗುತ್ತಿದೆ. ಆದು ದರಿಂದ ರೇಲ್ವೆ ಸೌಕರ್ಯಗಳನ್ನೊದವಿಸಿ ಕೊಡುವ ವ್ಯವಸ್ಥೆಯನ್ನು ಸಂಬಂಧಿಸಿದ ಅಧಿಕಾರಿಗಳು ಮಾಡಬೇಕೆಂದು ವ್ಯಾಪಾರಸ್ಥರು ಬಿನ್ನವಿಸು ತ್ತಾರೆ.

ಬೆಂಗಳೂರಿನಲ್ಲಿ ಮುಖ್ಯ ಕಾಫಿ ಮಾರ್ಕೆಟಿಂಗ ಆಫೀಸರರಾದ ಎಂ ಜೆ ಸಾಯಮನ್‌ರು ೬ ನೇ ತಾರೀಕು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ಕೆಲಕಾಲ ಅವರು ಹಾಸಿಗೆ ಹಿಡಿ ದಿದ್ದರು.

ಮೈಸೂರಿಗೆ ಹೊಣೆಗಾರ ಸರಕಾರವನ್ನು ಸಂಪಾ ದಿಸಿದ ಕಳೆದ ಸತ್ಯಾಗ್ರಹದಲ್ಲಿ ಭಾಗ ವಹಿಸಿದ ಹಾಗು ಗಾಯಗೊಂಡ ವೀರರಿಗೆ ಪರಿಹಾರ ಕೊಡಲು ಮೈಸೂರ ಸರಕಾರ ನಿರ್ಧರಿಸಿದೆ.

ಹಿಂದುಸ್ಥಾನ ರಾಷ್ಟ್ರೀಯ ಸೈನ್ಯಪಡೆಯ ಕೆಲ ಸದಿಂದ ದೂರಮಾಡಲ್ಪಟ್ಟ ೪೩ ಜನರಲ್ಲಿ ೧೦ ಜನ ರನ್ನು ಮತ್ತೆ ಸೈನ್ಯ ಶಾಖೆಯಲ್ಲಿ ಅವರವರ ದರ್ಜೆಯಲ್ಲಿ ಕೆಲಸ ಕೊಡಲಾಗಿದೆ. ಉಳಿದವರ ಬಗ್ಗೆಯೂ ವಿಚಾರ ನಡೆದಿದೆ.

ಪ್ರಾಂತೀಕರಣದ ಸಂಬಂಧದಲ್ಲಿ ಮೈಸೂರು ಸಂಸ್ಥಾನದೊಡನೆ ವಿಚಾರವಿನಿಮಯ ಮಾಡುವದ ಕ್ಕಾಗಿ ಪ್ರಾಂತಿಕ ಕಾಂಗ್ರೆಸ ಸಮಿತಿಯ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಸಮಿತಿಯನ್ನು ನೇಮಿಸಿ ದ್ದಾರೆ. ಅದರಲ್ಲಿ ಎಂ. ಪಿ. ಪಾಟೀಲ, ಶ್ರೀ ವಿ. ಕೆ. ಅರ್. ವಿ ರಾವ, ಕೆ ಅರ್ ಕಾರಂತ, ಎ ಬಿ ಶೆಟ್ಟಿ, ರಂಗನಾಥ ದಿವಾಕರ, ವೀರನಗೌಡ ಪಾಟೀಲ, ಎಸ್ ಎನ್ ಅಂಗಡಿ, ಬಿ ಅನಂತಾ ಚಾರ್ಯ ಮತ್ತು ಎಸ್ ನಿಜಲಿಂಗಪ್ಪಾ ಇವರಿರುವರು.

ಮೈಸೂರಿನಲ್ಲಿ ಗಾಂಧಿ ಸ್ಮಾರಕ ನಿಧಿ ಸಮಿತಿ ಯನ್ನು ಸ್ಥಾಪಿಸಲು ೨೬ಕ್ಕೆ ಸಭೆ ಕೂಡುವದಿದೆ ಪೋಷಕರಾಗಲು ಶ್ರೀ ಮಹಾರಾಜರನ್ನು ಕೇಳಿ ಕೊಳ್ಳಬೇಕೆಂದು ಕಾಂಗ್ರೆಸ ಸಮಿತಿಯವರು ವಿಚಾರ ನಡೆಸಿದ್ದಾರೆ.

ಭದ್ರಾವತಿಯ ಮೈಸೂರು ಕಾಗದ ಕಾರ ಖಾನೆಯ ಕುರೂಪು ೬೫೦ ಕೂಲಿಕಾರರು ೪ ನೇ ತಾರೀಕಿನಿಂದ ಸಂಪು ಹೂಡಿರುವರು. ಹಿಂದಿನ ಸಂಪಿನ ಕಾಲದ ೩ ದಿವಸಗಳ ಸಂಬಳ ಕೊಡಬೇಕು, ಸ್ವಾತಂತ್ರ್ಯ ದಿವಸ ನಿಮಿತ್ತ ೨ ತಿಂಗಳ ಬೋನಸ್ಸು ಕೊಡಬೇಕು ಮತ್ತು ದಿನಗೂಲಿ ಕೆಲಸ ಗಾರರ ಕೂಲಿಯನ್ನು ಹೆಚ್ಚಿಸಬೇಕು ಮೊದ ಲಾದವು ಅವರ ಬೇಡಿಕೆಗಳಿವೆ. ಕೂಡಲೆ ಕೆಲಸಕ್ಕೆ ಬರದಿದ್ದರೆ ಕಾರಖಾನೆಗೆ ಹೊರಗೀಲಿ ಹಾಕುವ ದಾಗಿ ವ್ಯಾನೇಜರರು ನೋಟೀಸ ಹಚ್ಚಿರುವ ರೆಂದು ತಿಳಿಯುತ್ತದೆ.

ಶಿವಮೊಗ್ಗೆಯಲ್ಲಿ ಶ್ರೀ ಭೂದಾಲಂ ಚಂದ್ರ ಶೇಖರಯ್ಯನವರು ೬ ನೇ ತಾರೀಕಿನ ದಿವಸ ದಿಲ್ಲಿ ಯಿಂದ ಮರಳಿ ಬಂದ ಅ. ಭಾ. ಅಡಿಕೆ ಸಂಘದ ಶ್ರೀ ಭಿಡೆ ಮತ್ತು ಎಸ್ ಶ್ರೀಕಂಠಯ್ಯನವರ ಸನ್ಮಾ ನಾರ್ಥ ಸಂತೋಷಕೂಟವನ್ನೇರ್ಪಡಿಸಿದ್ದರು. ಅಡಿಕೆಯ ಮೇಲಿನ ಸುಂಕವನ್ನು ತೆಗೆಯಿಸಲು ತಾವು ಮಾಡಿದ ಪ್ರಯತ್ನವನ್ನೆಲ್ಲ ಶ್ರೀ ಭಿಡೆಯ ವರು ವಿವರಿಸಿದರು. ಈ ಕರವನ್ನು ತೆಗೆದು ಹಾಕಿದ್ದಕ್ಕೆ ಹಿಂದುಸ್ತಾನ ಸರಕಾರವನ್ನು ಅಭಿ ನಂದಿಸುವ ಗೊತ್ತುವಳಿ ಸ್ವೀಕೃತವಾಯಿತು.

ಕನ್ನಡ ಸಂಸ್ಥಾನ

ಸಾರಿಗೆ ಇಲ್ಲದ ಮೂಲಕ ಕೊಲ್ಹಾಪುರದಲ್ಲಿ ಒಂಭತ್ತು ಲಕ್ಷ ಬೆಲ್ಲದ ಪೆಂಟಿಗಳು ಕೂಡಿ ದಿದ್ದಿದ್ದು ದಿನವೂ ೨೦ ಸಾವಿರ ಪೆಂಟಿಗಳು ಬರ ಹತ್ತಿವೆ. ಕತ್ಸರಿಣಾಮವಾಗಿ ಧಾರಣೆಯು ಇಳಿದು ೨೪ರಿಂದ ೪೮ ರೂ. ಗೆ ನಿಂತಿದೆ. ಈ ವರ್ಷ ೨೭ ಲಕ್ಷ ಪೆಂಟಿಗಳು ಬರಬಹುದೆಂದು ಅಂದಾಜಿದೆ. ಕಳೆದ ವರ್ಷ ೨೦ ಲಕ್ಷ ಪೆಂಟಿಗಳು ಬಂದಿದ್ದವು.

ಹಿಂದುಸ್ಥಾನ

ಮುಂಬಯಿ

ಮುಂಬಯಿ ಸರಕಾರದ ಉಪಮಂತ್ರಿಗಳಾದ ಶ್ರೀ ಪಿ. ಕೆ. ಸಾವಂತರು ಆರೋಗ್ಯ ಮತ್ತು ಲೋಕೋಪಯೋಗಿ ಖಾತೆಯ ತಮ್ಮ ಉಪಮಂತ್ರಿಪದಕ್ಕೆ ಮಾರ್ಚ ೧ ನೇ ತಾ. ದಿಂದ ರಾಜೀನಾಮೆ ಕೊಟ್ಟಿದ್ದಾರೆ. ಅವರು ಮುಂಬೈ ಸರಕಾರದಲ್ಲಿ ನಿರಾಶ್ರಿತರ ಮುಖ್ಯ ಅಧಿಕಾರಿಗಳಾಗಿದ್ದರು. ಕೂಲಿಕಾರ ಸಂಘಗಳೊಡನೆ ಸಂಬಂಧವಿಟ್ಟುಕೊಂಡಿರುವದರಿಂದ ಅವರು ಇನ್ನು ಮುಂದೆ ತಮ್ಮ ವೇಳೆಯ ಬಹು ಭಾಗವನ್ನು ಸಾರ್ವಜನಿಕ ಕಾರ್ಯಗಳಲ್ಲಿ ಕಳೆಯುವರೆಂದು ತಿಳಿಯುತ್ತದೆ.

ಸಂಯುಕ್ತ ರಾಷ್ಟ್ರ ಸಂಸ್ಥೆಯ ಹಿಂದೀ ಪ್ರತಿನಿಧಿ ಮಂಡಲದ ಧುರೀಣರಾದ ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರರು ಶ್ರೀ ಎ. ಸಿ. ಸೆಟಲವಾಡರೇ ಮೊದಲಾದ ಇತರ ಸದಸ್ಯರೊಡನೆ ತಾ. ೪ ಕ್ಕೆ ವಿಮಾನದಿಂದ ಲೇಕಸಕ್ಸೆಸ್ಸಿಗೆ ತೆರಳಿದರು.

ಈ ಸಲದ ಅಖಿಲ ಭಾರತ ಕಾಂಗ್ರೆಸ ಸಮಿತಿಯ ಅಧಿವೇಶನವು ಮುಂಬಯಿಯಲ್ಲಿ ಗೋವಾಲಿಯಾ ಕೆರೆಯ ಬಯಲಿನಲ್ಲಿ ಎಪ್ರಿಲ ೨೪ ಮತ್ತು ೨೫ ನೇ ತಾ. ಸೇರುವದೆಂದು ತಿಳಿಯುತ್ತದೆ. ಕಾಂಗ್ರೆಸ ಕಾರ್ಯಕಾರೀ ಸಮಿತಿಯ ಸಭೆಯು ದಿಲ್ಲಿಯಲ್ಲಿ ಎಪ್ರಿಲ ೨೧ ಮತ್ತು ೨೨ ನೇ ದಿನಾಂಕಗಳಲ್ಲಿ ಸೇರುವದು. ಈ ಕಾರ್ಯಕಾರೀ ಸಮಿತಿಯ ಸದಸ್ಯರು ನಂತರ ವಿಮಾನದಿಂದ ಮುಂಬಯಿಗೆ ಬರುವರು.

ಮುಂಬಯಿ ಪ್ರಾಂತದಲ್ಲಿ ಎಲ್ಲ ಬಗೆಯ ಲಾಟರಿ ತಿಕೀಟುಗಳ ಮಾರಾಟ, ಪ್ರಸಿದ್ಧಿ ಹಾಗೂ ಜಾಹೀರಾತುಗಳನ್ನು ನಿರ್ಬಂಧಿಸುವ ಬಗ್ಗೆ ಸರಕಾರದವರು ಕಾಯಿದೆ ಮಾಡುವ ವಿಚಾರದಲ್ಲಿರುವರೆಂದು ಶಾಸನಸಭೆಯಲ್ಲಿ ಶ್ರೀ ಆರ್. ಎನ್. ಮಾಂಡಲಿಕರಿಗೆ ಉತ್ತರಿಸುತ್ತ ಶ್ರೀ ಮುರಾರಜಿ ದೇಸಾಯರು ಹೇಳಿದರು. ಈ ಮಸೂದೆ ಪಾಸ ಆಗುವ ವರೆಗೆ ಪ್ರಾಂತದಲ್ಲಿ ಗೋವಾದಿಂದ ಬರುವ ಲಾಟರಿ ತಿಕೀಟುಗಳನ್ನು ತಡೆಯಬೇಕೆಂದು ಪೋಸ್ಟ ಮಾಸ್ತರ ಜನರಲ್ಲರಿಗೂ ಸುಂಕದ ಕಲೆಕ್ಟರರಿಗೂ ಬಿನ್ನವಿಸಲಾಗಿದೆಯೆಂದು ಅರುಹಿದರು.

ಹಿಂದುಸ್ಥಾನ ಸರಕಾರದ ಉದ್ಯೋಗ ಮಂತ್ರಿಗಳಾದ ಡಾ. ಶಾಮಪ್ರಸಾದರು ಇದೇ ತಿಂಗಳ ೩ನೇ ವಾರದಲ್ಲಿ ಸೊಲ್ಲಾಪುರಕ್ಕೆ ಬರುವದರಿಂದ್ದು ನಗರಸಭೆಯವರು ಅವರಿಗೆ ಮಾನಪತ್ರ ಕೊಡಲಿರುವರಾಗಿ ತಿಳಿಯುತ್ತದೆ.

ತಾ. ೫ ರಿಂದ ಸೊಲ್ಲಾಪುರದ ಜವಳಿ ಕೂಲಿಕಾರರು ಸಂಪು ಹೂಡಿದ್ದಾರೆ. ತುಟ್ಟಿ ಭತ್ತೆಯಲ್ಲಿ ೨ ಆಣೆ ಕಡಿತವನ್ನು ಜಾರಿಯಲ್ಲಿ ತಂದದ್ದಕ್ಕೆ ಈ ಸಂಪು ಪ್ರಾರಂಭವಾಗಿದೆ. ಕಳೆದ ವರ್ಷದ ಬೋನಸ್ಸು ಕೊಟ್ಟಿಲ್ಲವೆಂಬುದೂ ಕೂಲಿಕಾರರ ಅತೃಪ್ತಿಗೆ ಮತ್ತೊಂದು ಕಾರಣ. ಆಹಾರ ಪದಾರ್ಥಗಳ ಬೆಲೆ ಏರುತ್ತಿರುವಾಗ ಭತ್ತೆ ಹೆಚ್ಚು ಬೇಕಲ್ಲದೆ ಇಳಿಯಕೂಡದೆಂದು ಅವರ ವಾದ.

ಮುಂಬಯಿ ಪ್ರಾಂತದಲ್ಲಿ ಇದೇ ಎಪ್ರಿಲ ೧ ರಿಂದ ಸಾರ್ವಜನಿಕ ರಿಕ್ಷಾಗಳ ಉಪಯೋಗವನ್ನು ನಿಲ್ಲಿಸಬೇಕು ಎಂಬ ಗೊತ್ತುವಳಿಯನ್ನೂ ಬೇರೆ ಎರಡು ಗೊತ್ತುವಳಿಗಳನ್ನೂ ಮುಂಬೈ ಶಾಸನಸಭೆಯು ತಾ. ೬ ರಂದು ಒಂದು ತಾಸಿನಲ್ಲಿಯೇ ಸ್ವೀಕರಿಸಿತು.

ಹಿಂದುಸ್ಥಾನದ ಎಲ್ಲ ಪ್ರಾಂತಗಳ ಕೂಲಿಕಾರ ಮಂತ್ರಿಗಳ ಪರಿಷತ್ತು ಹೊಸ ದಿಲ್ಲಿಯಲ್ಲಿ ಹಿಂದುಸ್ಥಾನ ಸರಕಾರದ ಕೂಲಿಕಾರ ಮಂತ್ರಿ ಶ್ರೀ ಜಗಜೀವನರಾಮರ ಅಧ್ಯಕ್ಷತೆಯಲ್ಲಿ ಎಪ್ರಿಲ ತಿಂಗಳ ಮಧ್ಯದಲ್ಲಿ ಕೂಡಲಿದೆ. ಕಳೆದ ಡಿಸೆಂಬರದಲ್ಲಿ ಔದ್ಯೋಗಿಕ ಪರಿಷತ್ತು ಸ್ವೀಕರಿಸಿದ ಗೊತ್ತುವಳಿಯನ್ನು ಕಾರ್ಯರೂಪದಲ್ಲಿ ತರುವ ಬಗ್ಗೆ ಈ ಸಭೆಯಲ್ಲಿ ಚರ್ಚಿಸಲಾಗುವದೆಂದು ತಿಳಿಯುತ್ತದೆ.

ಕೂಲಿಕಾರ ಮಂತ್ರಿಗಳಾದ ಶ್ರೀ ಗುಲಝಾರಿಲಾಲ ನಂದಾ ಅವರು ಮುಂಬಯಿ ಸರಕಾರದ ಗೃಹ ಯೋಜನೆಯನ್ನು ವಿವರಿಸುತ್ತ, ೪ ಕೋಟಿ ರೂ. ವೆಚ್ಚ ಮಾಡಿ ಮುಂಬಯಿ ಪ್ರಾಂತದಲ್ಲಿ ೫ ವರ್ಷಗಳಲ್ಲಿ ೧ ಲಕ್ಷ ೨೫ ಸಾವಿರ ಬಾಡಿಗೆ ಮನೆಗಳನ್ನು ಕಟ್ಟಿಸಲಾಗುವದೆಂದು ಹೇಳಿದರು. ಇವುಗಳಲ್ಲಿ ೧೫ ಸಾವಿರ ಮನೆಗಳನ್ನು ಸರಕಾರದವರೂ ಉಳಿದವುಗಳನ್ನು ಸಹಕಾರಿ ಸಮಿತಿಗಳೂ ಖಾಸಗಿ ಸಂಸ್ಥೆಗಳೂ ಒಡೆಯರೂ ಸ್ವತಂತ್ರವಾಗಿ ಇಲ್ಲವೆ ಸಹಾಯ ಪಡೆದು ಕಟ್ಟಿಸುವರೆಂದು ಅರುಹಿದರು. ೧೯೪೮—೪೯ ರಲ್ಲಿ ೧೭೭೧ ಮನೆ ಕಟ್ಟಿಸಬೇಕೆಂದು ಮಾಡಿದ್ದಾರೆ.

ಮುಂಬಯಿ ಪ್ರಾಂತದಲ್ಲಿ ಲೀನವಾದ ಸಂಸ್ಥಾನಗಳಿಂದ ಉದ್ಭವಿಸುವ ಪ್ರಶ್ನೆಗಳನ್ನು ಚರ್ಚಿಸುವ ದಕ್ಷಿಣ ಕರ್ನಾಟಕದ ಶಿಷ್ಟಮಂಡಲ ಒಂದು ಶ್ರೀ ದಾತಾರ ಬಳವಂತರಾಯರ ಧುರೀಣತ್ವದಲ್ಲಿ ಮುಂಬೈ ಮುಖ್ಯಪ್ರಧಾನರಾದ ಬಾಳಾಸಾಹೇಬ ಖೇರರ ಬಳಿಗೆ ಹೋಗಿತ್ತು. ಇವರಿಗೆ ಉತ್ತರ ಕೊಡುತ್ತ ಪ್ರಧಾನರು, ತಾ. ೮ ರಿಂದ ವಿಲೀನ ಸಂಸ್ಥಾನಗಳ ಆಡಳಿತದ ಬಗ್ಗೆ ಸರಕಾರವು ಮಾಡುವ ವ್ಯವಸ್ಥೆಯು ತಾತ್ಪೂರ್ತಿಕವಾಗಿದೆಯೆಂದೂ ಸಮೀಪದ ಜಿಲ್ಲೆಗಳಲ್ಲಿ ಆಯಾ ವಿಲೀನ ಸಂಸ್ಥಾನದ ಭಾಗಗಳನ್ನು ಸೇರಿಸುವ ಬಗ್ಗೆ ಹೊಸ ಎತ್ತುಗಡೆ ಆಗಲಿದೆಯೆಂದೂ ಅದನ್ನು ಬಹಿರಂಗಪಡಿಸಿ ಸಾರ್ವಜನಿಕರ ಅಭಿಪ್ರಾಯವನ್ನು ಅರಿಯಲಾಗುವದೆಂದೂ ಹೇಳಿದರು.

ಮುಂಬಯಿಯಲ್ಲಿ ಕೂಲಿಕಾರರ ವಸತಿಯಾದ ಪಾರ್ಲಿಯಲ್ಲಿ ತಾ. ೪ ಕ್ಕೆ ಮದ್ಯಪಾನ ನಿರೋಧಕ ಆಂದೋಲನವನ್ನು ಉದ್ಘಾಟಿಸುತ್ತ ಮುಂಬಯಿ ಗವ್ಹರ್ನರರಾದ ರಾಜಾ ಸರ ಮಹಾರಾಜಾಸಿಂಗರು, ಮಹಾತ್ಮಾ ಗಾಂಧಿಯವರ ತತ್ವದಂತೆ ವರ್ತಿಸಿ ಕುಡಿಯುವದನ್ನು ತ್ಯಜಿಸಬೇಕೆಂದು ಕೇಳಿಕೊಂಡರು. ಒಬ್ಬ ಕುಡುಕನು ಇನ್ನು ಸೆರೆ ಮುಟ್ಟುವದಿಲ್ಲವೆಂದು ಸಭೆಯಲ್ಲಿಯೇ ಪ್ರತಿಜ್ಞೆ ಮಾಡಿದನು.

ಮುಂಬಯಿ ಸಮೀಪದಲ್ಲಿ ಭಾರತದ ಮುಖ್ಯ ಮಂತ್ರಿ ಪಂ. ಜವಾಹರಲಾಲರು ಬರಲಿದ್ದು ಆ ಸಮಯಕ್ಕೆ ಅವರಿಗೆ ಮಾನಪತ್ರ ಅರ್ಪಿಸುವ ಯೋಜನೆ ಮಾಡ್ತಿರುವದಾಗಿ ಪ್ರಾಂ. ಕಾಂ. ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ಕೆ. ಪಾಟೀಲರು ತಾ. ೫ ರಂದು ಮುಂಬಯಿ ಪ್ರಾಂ. ಕಾಂ. ಸಮಿತಿಯ ಸಭೆಯಲ್ಲಿ ಮಾತಾಡುತ್ತ ಹೇಳಿದರು.

ಲಂಚ ನಿರ್ಮೂಲನ ಶಾಖೆಯವರಿಂದ ಇತ್ತೀಚೆಗೆ ಹಿಡಿಯಲ್ಪಟ್ಟ ೧೬ ಸರಕಾರಿ ನೌಕರರಲ್ಲಿ ಸೊಲ್ಲಾಪುರ ಜಿಲ್ಲೆಯ ಓರ್ವ ರೇಂಜ ಆಫೀಸರರು, ಪೂರ್ವ ಖಾನದೇಶದ ಒಬ್ಬ ಪ್ರೊಬೇಶನರಿ ಪೋಲೀಸ ಸಬ್ ಇನ್ಸ್‌ಪೆಕ್ಟರ, ಎಂ. ಎಸ್. ಎಂ. ರೇಲ್ವೆಯ ಇಬ್ಬರು ಸ್ಟೇಶನ ಮಾಸ್ತರರು, ಸೊಲ್ಲಾಪುರ ಜಿಲ್ಲೆಯ ಒಬ್ಬ ರೆವಿನ್ಯೂ ಸರ್ಕಲ ಇನ್ಸ್‌ಪೆಕ್ಟರ ರತ್ನಾಗಿರಿ ಜಿಲ್ಲೆಯ ಒಬ್ಬ ಸಬ್ ರಜಿಸ್ಟ್ರಾರ ಮೊದಲಾದವರು ಇರುತ್ತಾರೆ. ಹಳೇ ಪ್ರಕರಣಗಳಲ್ಲಿ ಬೆಳಗಾವ ಜಿಲ್ಲೆಯ ಒಬ್ಬ ಪೋಲೀಸನಿಗೆ ಒಂದು ವರ್ಷ ಶಿಕ್ಷೆ ೧೦೦ ರೂಪಾಯಿ ದಂಡ ವಿಧಿಸಲಾಗಿತ್ತು. ಒಬ್ಬ ಆಫೀಸಿಯೇಟಿಂಗ ಪೋಲೀಸ ಸಬ್ ಇನಸ್ಪೆಕ್ಟರ ಹಾಗು ಒಬ್ಬ ಕಾನಸ್ಟೇಬಲನನ್ನು ನೌಕರಿಯಿಂದ ತಳ್ಳಲಾಗಿರುವದು.

ಮದ್ರಾಸ

ಮದ್ರಾಸ ಶಾಸನಮಂಡಲದಲ್ಲಿರುವ ಮುಸ್ಲಿಂ ಲೀಗ ಪಕ್ಷವು ತನ್ನ ವಿರೋಧಿ ಪಕ್ಷದ ಸ್ಥಾನವನ್ನು ಸಂಯುಕ್ತ ಪ್ರಜಾಪ್ರಭುತ್ವವಾದಿಗಳೆಂಬ ಹೊಸ ಪಕ್ಷಕ್ಕೆ ಬಿಟ್ಟುಕೊಟ್ಟಿತು. ಇದು ಜಾತ್ಯತೀತವಿದ್ದು ಇದಕ್ಕೆ ಡಾ. ವ್ಹಿ. ಕೆ. ಜಾನರು ಮುಖಂಡರು. ಇವರು ಮುಸ್ಲಿಂ ಲೀಗದವರನ್ನೊಳಗೊಂಡ ೯ ಜನರ ಯಾದಿಯನ್ನು ತಮ್ಮ ಕಡೆಗೆ ಕೊಟ್ಟಿರುವದಾಗಿ ವಿಧಿಮಂಡಲದ ಅಧ್ಯಕ್ಷರಾದ ಶ್ರೀ ರಾಮಕೃಷ್ಣ ರಾಜು ಅವರು ಹೇಳಿದರು.

ಮದ್ರಾಸ ಕಾರ್ಪೋರೇಶನ್‌ದ ಕೆಲಸಗಾರರು ತಮ್ಮ ಪೇಶನ, ತುಟ್ಟಿಭತ್ತೆ, ಮನೆಭಾಡಿಗೆ, ರಜೆ, ಕಾಳಿನ ಅಂಗಡಿ ಸೌಕರ್ಯ ಮುಂತಾದ ವಿಷಯಗಳ ಬೇಡಿಕೆಯನ್ನು ಒಂದು ತಿಂಗಳಲ್ಲಿ ಕಾರ್ಪೋರೇಶನ್ನು ಮನ್ನಿಸದಿದ್ದರೆ ತಾವು ಸಂಪು ಹೂಡುವದಾಗಿ ಕಾರ್ಪೋರೇಶನ್ನದ ಕಮಿಶನರರಿಗೆ ಮುನ್ನೆಚ್ಚರಿಕೆ ಕೊಟ್ಟಿದ್ದಾರೆ.

ಪುದುಕೋಟೆ ಸಂಸ್ಥಾನವು ಮದ್ರಾಸ ಪ್ರಾಂತದಲ್ಲಿ ಲೀನವಾದುದರಿಂದ ಬರುವ ಎಪ್ರಿಲ ತಾ ೧ ರಿಂದ ಸಂಸ್ಥಾನದ ಹದ್ದಿಯಲ್ಲಿ ಮದ್ಯಪಾನವನ್ನು ಪ್ರತಿಬಂಧಿಸಲಾಗುವದೆಂದು ತಿಳಿದು ಬರುತ್ತದೆ. ಇದರಿಂದ ತ್ರಿಚನಾಪಳ್ಳಿ ಜಿಲ್ಲೆಯಲ್ಲಿ ಮದ್ಯಪಾನವನ್ನು ಸಂಪೂರ್ಣವಾಗಿ ಪ್ರತಿಬಂಧಿಸಿದಂತಾಗುವದು.

ಹೊಸದಿಲ್ಲಿ

ಭಾರತ ಸರಕಾರದ ಉಪ ಮುಖ್ಯಮಂತ್ರಿಗಳಾದ ಶ್ರೀ ವಲ್ಲಭಭಾಯಿ ಪಟೇಲರಿಗೆ ಅಸ್ವಾಸ್ಥ್ಯವಾಗಿತ್ತೆಂದು ಪ್ರಕಟವಾಗಿತ್ತು. ಈಗ ಅವರ ಪ್ರಕೃತಿಯು ಗುಣಮುಖವಾಗಿದೆ. ಸಂಪೂರ್ಣ ವಿಶ್ರಾಂತಿಯ ಸಲಹೆಯನ್ನು ಡಾಕ್ಟರರು ಕೊಟ್ಟಿದ್ದಾರೆ.

ದಪ್ಪಿಗಳ ಕೊರತೆಯಿಂದ ಕಲ್ಲಿದ್ದಿಲಿಯ ಪೂರೈಕೆಯ ಕಡಿತವನ್ನು ದೂರ ಮಾಡಲು ತವರದ ತಗಡುಗಳನ್ನು ತುಂಬಿಕೊಂಡ ೪೦ ವಾಗೀನುಗಳ ಒಂದು ವಿಶೇಷ ಬಂಡಿಯನ್ನು ತಾತಾನಗರದಿಂದ ಮುಂಬಯಿಗೆ ಬಿಡಲಾಗುವದು. ಇದೇ ರೀತಿಯಾಗಿ ಮದ್ರಾಸ ಎರ್ನಾಕುಲಂಗಳಿಗೂ ವಿಶೇಷ ಬಂಡಿಗಳನ್ನು ಬಿಡಲಾಗುವದು.

ದಿಲ್ಲಿಯ ಲಾಯಿಡಬ್ಯಾಂಕಿನ ಚಾಂದಣಿ ಚೌಕ ಶಾಖೆಯ ಕೋಶಾಧಿಕಾರಿಯು ರಿಝರ್ವ ಬ್ಯಾಂಕಿನಲ್ಲಿ ೧ ಲಕ್ಷ ೭೫ ಸಾವಿರ ರೂಪಾಯಿಗಳನ್ನು ಇಡಲು ಹೊರಟಾಗ ಸಶಸ್ತ್ರ ದರೋಡೆಖೋರರು ಬಂದು ಅವರನ್ನು ತಡೆದು ಹಣವನ್ನೆಲ್ಲ ಅಪಹರಿಸಿದರು. ಕೋಶಾಧಿಕಾರಿಯ ಜೊತೆಗೆ ಇಬ್ಬರು ನೌಕರರೂ ಇದ್ದರು. ಇವರು ಟಾಂಗಾದಲ್ಲಿ ಹೊರಟಿದ್ದರು. ಪೋಲೀಸರು ಶೋಧ ನಡೆಸಿದ್ದಾರೆ.

ಭಾರತದ ಆಹಾರ ಮಂತ್ರಿ ಶ್ರೀ ಜಯರಾಮದಾಸ ದೌಲತರಾಮರು ತಾ. ೫ ರಂದು ಒಂದು ಪ್ರಶ್ನೆಗೆ ಉತ್ತರ ಕೊಡುತ್ತ, ಬೆಳೆ ಮತ್ತು ದನಗಳ ವಿಮೆಯನ್ನು ಇಳಿಸಿ ನೋಡುವ ಯೋಜನೆಯೊಂದನ್ನು ಸಿದ್ಧಗೊಳಿಸಲು ಒಬ್ಬ ತಜ್ಞ ಅಧಿಕಾರಿಯನ್ನು ನೇಮಿಸಲಾಗಿದೆ ಎಂದು ತಿಳಿಸಿದರು.

ವ್ಯವಸಾಯ ಖಣಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳಾದ ಶ್ರೀ ಎನ್. ವಿ. ಗಾಡಗೀಳರು, ಮಹಾರಾಷ್ಟ್ರ ಪ್ರಾಂತಿಕ ಕಾಂಗ್ರೆಸದ ಅಧ್ಯಕ್ಷರಾದ ಶ್ರೀ ಜೇಧೆ ಅವರು ಕಾಂಗ್ರೆಸಿನ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಡಲಿದ್ದಾರೆಂದು ಹಲವು ಪತ್ರಿಕೆಗಳಲ್ಲಿ ಬರೆದ ಸುದ್ದಿಯಲ್ಲಿ ಸತ್ಯಾಂಶವಿಲ್ಲವೆಂದು ಹೇಳಿದರು.

ಗಡಿನಾಡ ಗಾಂಧಿ ಖಾನ ಅಬ್ದುಲ್ ಗಫರಖಾನ ಮತ್ತು ಪಶ್ಚಿಮ ಪಾಕಿಸ್ತಾನದ ಏಳು ಜನ ಮುಸ್ಲಿಂ ರಾಜಕಾರಣಿಗಳು ತಾ ೮ ರಂದು ಒಂದು ಘೋಷಣೆ ಹೊರಡಿಸಿ, 'ಅಖಿಲ ಪಾಕಿಸ್ತಾನ ಪ್ರಜಾಪಕ್ಷ' ಸ್ಥಾಪಿಸಲು ಬಿನ್ನವಿಸಿದ್ದಾರೆ. ಪಾಕಿಸ್ತಾನವನ್ನು ಸ್ವತಂತ್ರ ಸಾಮ್ಯವಾದಿ ಪ್ರಜಾರಾಜ್ಯಗಳ ಒಕ್ಕೂಟ ರಾಜ್ಯವಾಗಿ ಸ್ಥಾಪಿಸುವದು ಇದರ ಧ್ಯೇಯವಾಗಿರುವದು. ಇದರಲ್ಲಿ ಪಾಕಿಸ್ತಾನದ ಎಲ್ಲ ನಾಗರಿಕರಿಗೂ ಜಾತಿ ಭೇದವಿಲ್ಲದೆ ಪ್ರವೇಶವಿದೆ. ಈ ವಿಚಾರವನ್ನು ಒಪ್ಪುವ ಜನರು

ಕಲಕತ್ತಾ

ಕರಾಚಿಯಿಂದ ಡಾಕಾಕ್ಕೆ ಹಿಂತಿರುಗುತ್ತಿದ್ದ ಪೂರ್ವ ಬಂಗಾಲದ ಮುಖ್ಯ ಮಂತ್ರಿಗಳಾದ ಖ್ವಾಜಾ ನಾಜೀಮುದ್ದೀನರು ಕಲಕತ್ತೆಯಲ್ಲಿ ಆ. ಪ್ರೆ ವರದಿಗಾರನಿಗೆ, ಪೂರ್ವ ಬಂಗಾಲದ ಸರಕಾರೀ ಭಾಷೆಯೂ ಶಿಕ್ಷಣದ ಮಾಧ್ಯಮವೂ ಬಂಗಾಲಿಯೇ ಆಗುವದೆಂದು ಹೇಳಿದರು.

ಶ್ರೀ. ಕಿರಣಶಂಕರ ರಾಯರು ಪಶ್ಚಿಮ ಬಂಗಾಲದ ಮಂತ್ರಿಗಳಾಗಿ ಸೇವಾಶಪಥ ಕೊಂಡಿದ್ದಾರೆ. ಇವರನ್ನೊಳಗೊಂಡು ಪ. ಬಂಗಾಲದ ಮಂತ್ರಿಮಂಡಲದಲ್ಲಿ ಒಟ್ಟು ೧೩ ಜನ ಸದಸ್ಯರಾದಂತಾಯಿತು.


ಬರ್ಮಾ ಕಮ್ಯುನಿಷ್ಟ ಪಕ್ಷದ ಕಾರ್ಯದರ್ಶಿಗಳೂ ಹಿಂದುಸ್ಥಾನ ಕಮ್ಯುನಿಷ್ಟ ಕಾಂಗ್ರೆಸಿನ ಪ್ರತಿನಿಧಿಗಳೂ ಆದ ಯ. ಥಾನ್ ಟನ್ನರು ಅಧಿವೇಶನದಲ್ಲಿ ಬ್ರಿಟಿಶರ ಆಳಿಕೆಯಿಂದ ಬ್ರಹ್ಮದೇಶದ ಔದ್ಯೋಗಿಕ ಬೆಳವಣಿಗೆ ಕುಗ್ಗಿತ್ತು. ಆದರೆ ಹೊಸ ಘಟನೆಯಲ್ಲಿಯೂ ಬೆಳೆಗೆಯ ಲಕ್ಷಣಗಳಿಲ್ಲ. ಬ್ರಹ್ಮದೇಶದ ಸ್ವಾತಂತ್ರ್ಯ ಕೃತಕವಾಗಿದೆ. ಬ್ರಿಟಿಶರ ಸಾಮ್ರಾಜ್ಯಾಧಿಪತ್ಯವೇ ಹೊಸರೂಪ ತಾಳಿದೆ. ಎಣ್ಣೆಯ ಬಾವಿಗಳು, ಕಣಿಗಳು, ಅಡಿವೆಗಳು ಇನ್ನೂ ಬ್ರಿಟಿಶ ಗುತ್ತಿಗೆದಾರರ ಕೈಯಲ್ಲಿಯೇ ಇವೆ ಎಂದು ನೊಂದವರಾಗಿ ಹೇಳಿದರು.

ಪಶ್ಚಿಮ ಬಂಗಾಲ ಸರಕಾರವು ತಾ. ೨ಕ್ಕೆ ಪ್ರಸಿದ್ಧಪಡಿಸಿದ ಒಂದು ಮಸೂದೆಯು ಮೇರೆಗೆ ಹಿಂದುಗಳ ಎಲ್ಲ ಜಾತಿ ಮತ್ತು ವರ್ಗಗಳಿಗೆ ಸಮಾನ ಹಕ್ಕು ದೊರೆಯುವವು. ಜಾತಿ ಹಾಗು ವರ್ಗಗಳ ಆಧಾರದ ಮೇಲೆ ಯಾವದೆ ವ್ಯಕ್ತಿಯ ಹಕ್ಕುಗಳು ತಡೆಯಲ್ಪಟ್ಟರೆ ಈ ಮಸೂದೆಯನ್ವಯ ೩ ತಿಂಗಳ ಶಿಕ್ಷೆ ಹಾಗೂ ೨೦೦ ರೂ. ಗಳವರೆಗೆ ದಂಡ ವಿಧಿಸಲಾಗುವದು.

ಓಡಿಸಾ

ಓಡಿಸಾ ಶಾಸನ ಸಭೆಯು, ಎಲ್ಲ ಹಿಂದುಗಳಿಗೂ ದೇವಾಲಯಗಳಲ್ಲಿ ಪ್ರವೇಶ ಸಿಗತಕ್ಕದ್ದೆಂದು ಒಂದು ಮಸೂದೆ ಸ್ವೀಕರಿಸಿತು. ಮಂದಿರ ಪ್ರವೇಶದ ಹಕ್ಕನ್ನು ಯಾರಾದರು ತಡೆಹಿಡಿದರೆ ಈ ಕಾಯಿದೆಯ ಮೇರೆಗೆ ೬ ತಿಂಗಳ ಶಿಕ್ಷೆ ೫೦೦ ರೂ. ಗಳ ದಂಡ ಹೇರಲಾಗುವದು. ಓಡಿಸಾದ ಪ್ರಸಿದ್ಧ ದೇವಸ್ಥಾನವಾದ ಪುರಿ ಶ್ರೀ ಜಗನ್ನಾಥ ದೇವಾಲಯದ ಆಡಳಿತವನ್ನು ಸರಕಾರವು ವಶಪಡಿಸಿಕೊಳ್ಳಬೇಕೆಂದು ಮಂಡಿಸಲ್ಪಟ್ಟ ಮಸೂದೆಯ ಬಗ್ಗೆ ಜನಾಭಿಪ್ರಾಯ ಪಡೆಯಬೇಕೆಂದು ಸಭೆಯು ನಿರ್ಧರಿಸಿತು.

ಪರಿಷತ್ತನ್ನು ಕರಾಚಿಯಲ್ಲಿ ಎಪ್ರಿಲ ತಾ. ೧೦-೧೧ ಕ್ಕೆ ಕರೆಯಲಾಗಿದೆ.



ಚಿತ್ರ ಕಥೆ

ಲೇ:— ಅ. ಕ. ಘೋಸಗೆ ವಿಜಾಪುರ

★

ಜಾತೀಯ ದುರಂತಗಳು

ದೇಶದಲ್ಲಿ ಹುಟ್ಟುತ್ತಿರುವ ಜಾತಿಯ ದಂಗೆಗಳನ್ನು ನೋಡಿ ದಯಾಮನು ಮರುಗುತ್ತಿದ್ದ. ಈ ಅನಾಹುತಗಳು ಅಗಲಿಕ್ಕೆ ಕಾರಣಗಳೇನು? ಅವು ಬೆಳೆಯಲಿಕ್ಕೆ ಪೋಷಕ ಪದಾರ್ಥಗಳಾವವು? ಇವುಗಳಿಂದ ಆ ಪುಂಡರಿಗೆ ಆದ ಲಾಭಗಳೇನು? ಇದರಲ್ಲಿ ರಾಜಕೀಯ ದೃಷ್ಟಿಯು ಅಡಕವಾಗಿರಬಹುದೇ? ಹೀಗೆ ರಾಕ್ಷಸೀ ಕೃತ್ಯಗಳನ್ನು ಮಾಡುತ್ತ ಹೋದರೆ ರಾಜಕಾರಣಗಳು ಸಫಲವಾಗಬಲ್ಲವೇ?– ಎಂದೂ ಇಲ್ಲ.

ಇಂಥ ಹಲವು ಪ್ರಶ್ನೋತ್ತರಗಳ ಮಡುವಿನಲ್ಲಿ ಮುಳುಗಿ ಏಳುತ್ತಿದ್ದ ದಯಾಮ ಅಜ್ಞಾನ ಜನರನ್ನು ಕಂಡು ಅವರ ಅನಾಚಾರ ಕೃತ್ಯಗಳನ್ನು ನೋಡಿ ಮರುಗಿ ಕೊರಗುತ್ತಿದ್ದ. ಹಿಂದುಗಳಾರು? ಮುಸಲ್ಮಾನರಾರು? ಸೀಖರಾರು? ಒಂದೇ ದೇಶದವರಲ್ಲವೇ? ಸಕಲರೂ ಭಾರತಾಂಬೆಯ ಉದರದಲ್ಲಿ ಜನಿಸಿದ ಭಾರತೀಯರಲ್ಲವೇ? ಪರಸ್ಪರ ಸಹೋದರರಲ್ಲಿ ಇಂಥ ಅತ್ಯಾಚಾರಗಳಿಂದ ಕೊಲೆ, ಸುಲಿಗೆ, ಕೊಳ್ಳೆಗಳೇಕೆ? ಎಂಬ ಚಿಂತೆಯು ದಯಾಮನ ಕೋಮಲ ಹೃದಯವನ್ನು ಹಗಲಿರುಳೂ ಕೊರೆಯುತ್ತಲಿದ್ದಿತು. ಮುಸಲ್ಮಾನ ಧರ್ಮದಲ್ಲಿಯೇ ಆಗಲಿ. ಹಿಂದು ಧರ್ಮದಲ್ಲಿಯೇ ಆಗಲಿ. ಇಂಥ ನೀಚ ಕೃತ್ಯಗಳಿಗೆ ಕೊಂಚವಾದರೂ ಆಸ್ಪದವಿದೆಯೆ? "ಛೆ" ಎಂದಿಗೂ ಇಲ್ಲ. ಯಾವ ಧರ್ಮದ ತಿರುಳಾದರೂ "ದಯೆಯೇ ಧರ್ಮದಮೂಲ"ವೆಂದೇ ಇರುವದಲ್ಲವೇ?

ಇಮಾಮಬಕ್ಷ ಇವನೊಬ್ಬ ಮುಸಲ್ಮಾನ ಧರ್ಮದ ಬಡಜೀವಿ. ಇವನಿಗೆ ಇಬ್ಬರು ಮಕ್ಕಳು ಒಬ್ಬ ಕ್ರೂರ ಖಾನ, ಇನ್ನೊಬ್ಬ ದಯಾಮ. ಈ ಅಣ್ಣತಮ್ಮಂದಿರ ರೀತಿ ನೀತಿಗಳು ಬೇರೆ ಬೇರೆ. ಕ್ರೂರ ಖಾನ ನಿರುದ್ಯೋಗಿ, ವಿಚಾರ ಶೂನ್ಯ, ಕ್ರೂರ ಹೃದಯಿ. ದಯೆಯು ಲೇಶವೂ ಇರಲಿಲ್ಲ. ಆದರೆ ತಮ್ಮನಾದ ದಯಾಮನ ಹೃದಯದ ಕವಲು ಬೇರೊಂದಡೆ ಹೋಗಿತ್ತು. ಶಾಂತ ಮೂರ್ತಿ, ಸದಾಚಾರಿ ನಿಸ್ವಾರ್ಥ ಮನಸ್ಸಿನ ಸಾಣೆಗೆಯಿಂದ ಅಂತರಾತ್ಮವನ್ನು ಸೋಸುತ್ತಿದ್ದ. ಒಂದೇ ಶರೀರದಿಂದ ಜನಿಸಿದ ಈ ಎರಡು ಜೀವಿಗಳಲ್ಲಿ ಅಂತರವೇಕೆ? ಎಷ್ಟು ಅಂತರ? ಕನ್ಯಾಕುಮಾರಿಯಿಂದ ಹಿಮಾಚಲದ ವರೆಗೆ, ಇರುವಷ್ಟು ಭೂಮಿ ಆಕಾಶಗಳಷ್ಟು. ಹುಟ್ಟುವ ಸ್ಥಾನ ಒಂದೇ ಆದರೂ ಕಟ್ಟುವ ಕಟ್ಟಡಗಳು ಬೇರೆ ಬೇರೆ. ಒಂದೇ ವೃಕ್ಷದಲ್ಲಿ ಬೆಳೆದ ಗುಲಾಬಿ ಪುಷ್ಪಗಳು ಅಲಂಕರಿಸುವ ಸ್ಥಾನಗಳು ಬೇರೆ ಬೇರೆ. ಒಂದು ಪುಷ್ಪವು ಪರಮೇಶ್ವರನ ಪಾದಾಂಬುರುಹಗಳಲ್ಲಿ ಬೆಳಗುತ್ತಿದ್ದರೆ-ಇನ್ನೊಂದು ತನು ವಿಕ್ರಯ ಮಾಡುವ ಪಾಪ ಜೀವಿ ವೇಶ್ಯೆಯ ಹೆರಳಿನಲ್ಲಿ ಹೊಳೆಯುವದು. ಇದಕ್ಕೆ ತನ್ನ ಒಡತಿಯ ಹೆಮ್ಮೆಯನ್ನು ತೋರಿಸುವದರಲ್ಲಿಯೇ ಮಿಗಿಲಾದ ಆನಂದವಿದೆ.

ಇವೆರಡರಲ್ಲಿ ಯಾವದು ಪವಿತ್ರ ಕಾರ್ಯ ಮಾಡುವದು? ಹೀಗಾಗುವದಕ್ಕೆ ಕಾರಣ?

ಜಾತಿಯ ದಂಗೆಯ ಜ್ವಾಲೆಯು ತನ್ನ ರೌದ್ರಾವತಾರದಿಂದ ಕುಣಿಯುತ್ತ ಸುತ್ತಲೂ ಹರಡತೊಡಗಿತು. ಸರಕಾರದವರು ಎಂಥ ತೀಕ್ಷ್ಣವಾದ ಉಪಾಯಗಳನ್ನು ಪ್ರಯೋಗಿಸಿದರೂ ಅವು ಹೊಳೆಯಲ್ಲಿ ಹುಣಸೆಯಹಣ್ಣು, ತೊಳೆದಂತೆ ಆಗುತ್ತಿದ್ದವು. ವರ್ಷಾಕಾಲದ ನದಿಯ ಪ್ರವಾಹದಂತೆ ಗಲಭೆಗಳ ಪರಿಣತಗಳುಂಟಾಗಿ ಶಾಂತತೆಯು ಸಿಕ್ಕದಾಯಿತು. ದೇಶದ ಮುಖಂಡರು ಉಪಾಯಗಳನ್ನು ಶೋಧಿಸಲಾರಂಭಿಸಿದರು.

× × ×

ಕಡೆಗೊಮ್ಮೆ ಯಾವ ದಾರಿಯಿಂದಲೋ ಜಾತಿಯ ದಂಗೆಗಳ ಜ್ವಾಲೆಯ ಕಿಡಿ ದಯಾಮನ ಪುರಪ್ರವೇಶ ಮಾಡಿ ತನ್ನ ಕರ್ತವ್ಯವನ್ನು ಒಳ್ಳೇ ಆಸ್ಥೆಯಿಂದ ಮಾಡತೊಡಗಿತು. ದಿನದಿನಕ್ಕೆ ಪುಂಡರ ಸಂಖ್ಯೆಯು ಬೆಳೆದು ಊರೊಳಗೆ ಅನಾಹುತಗಳು ಅಂಬೇಗಾಲು ಹಾಕಿ, ಊರನ್ನೆಲ್ಲ ಸುತ್ತತೊಡಗಿದವು. ನಗರ ದೃಶ್ಯಗಳು ದಿನದಿನಕ್ಕೆ ಒಳ್ಳೇ ಭಯಾನಕವಾಗಿ ತೋರಹತ್ತಿದವು. ವಾಹನಗಳ ಓಡಾಟ ಮಾಯವಾಗಹತ್ತಿತು. ಉದ್ಯೋಗ ಕಟ್ಟಾಗತೊಡಗಿದವು. ಪುರದಲ್ಲಿಯ ಜನ ಚಿಂತಾಕ್ರಾಂತರಾಗಿ ಒಂದು ನಿಮಿಷವನ್ನು ಯುಗದಂತೆ ಕಳೆಯತೊಡಗಿದರು. ಊರಲ್ಲಿ ಶಾಂತಿಸಭೆಗಳಾಗಿ ಶಾಂತಿಸಂಘಗಳು ಸ್ಥಾಪನೆಯಾದವು. ಜನತೆಯ ಸೇವೆಗಾಗಿ ತಮ್ಮ ಜೀವನನ್ನೇ ಮುಡುಪಿಡುವ ಪಂಥ ತೊಟ್ಟರು.

ಅಗ ದಯಾಮನು ಶಾಂತಿಸಂಘದ ಕಾರ್ಯಕರ್ತನಾಗಿ ನೇಮಿಸಲ್ಪಟ್ಟಿದ್ದ. ಪಟ್ಟಣದ ಪ್ರತಿಯೊಂದು ಬೀದಿಯಲ್ಲಿ ಅಡ್ಡಾಡಿ ಪುಂಡರ ಗುಪ್ತ ಕಾರ್ಯಗಳನ್ನು ಗೊತ್ತುಹಚ್ಚುವದು, ಅಲ್ಲಲ್ಲಿಗೆ ಶಾಂತಿ ಸಭೆಗಳನ್ನು ಏರ್ಪಡಿಸಿ, ಸರ್ವರಿಗೂ ಶಾಂತರಾಗಿ ಧೈರ್ಯದಿಂದ ಇರಲು ಉಪದೇಶಿಸಿಸುವದು, ನಿರಾಶ್ರಿತರಾದವರಿಗೆ ಶಕ್ಯವಾದಷ್ಟು ಸರ್ವ ರೀತಿಯಿಂದ ಸಹಾಯ ಮಾಡುವದು ಇವೇ ಮೊದಲಾದ ಜನಹಿತ ಕಾರ್ಯಗಳು ಆ ಶಾಂತಿ ಸಂಘಗಳ ಗುರಿಯಲ್ಲಿ ಅಡಕವಾಗಿದ್ದವು.

ಪುರದ ಪರಿಸ್ಥಿತಿಯು ಹೆಚ್ಚು ಹದಗೆಟ್ಟಂತೆ ದಯಾಮನ ಹೃದಯವು ಮರುಗಿ ಕೊರಗಹತ್ತಿತು. ಅವನು ಅನ್ನ ನಿದ್ರೆಗಳನ್ನು ಸಹ ತೊರೆದನು. ಆದೇ ಸ್ವಾತಂತ್ರ್ಯದ ಕುಡಿ ಒಡೆದ ದೇಶ, ಜಾತಿಯ ದಂಗೆಗಳು, ಪುಂಡರ ರಾಕ್ಷಸೀ ಕೃತ್ಯಗಳು, ದೇಶದ ಮುಖಂಡರು ಕಳವಳಿಸುವ ಭಾವನೆಗಳು ಇವೇ ವಿಚಾರಗಳಲ್ಲಿ ಯಾವಾಗಲೂ ಮಗ್ನನಾಗಿರುತ್ತಿದ್ದ. ದಂಗೆಗಗಳು ಸಂಭವಿಸಬಹುದಾದ ಬಿಕ್ಕಟ್ಟಿನ ಸ್ಥಳಗಳಲ್ಲಿ ಕಾರ್ಯಕರ್ತರನ್ನು ಕೂಡಿಕೊಂಡು ಅಲೆದಾಡುತ್ತಿದ್ದ.

ಇತ್ತ ದಯಾಮನ ಅಣ್ಣ ಕ್ರೂರ ಖಾನ ಪುಂಡರ ನಾಯಕನಾಗಿ ಕೊಲೆ ಸುಲಿಗೆಗಳನ್ನು ಮಾಡುತ್ತ ಕಾಳಭೈರವನಂತೆ ಸಂಚರಿಸುತ್ತಿದ್ದ. ಮೊಟ್ಟಮೊದಲು ಅಣ್ಣನ ಈ ರೀತಿ ನೀತಿಗಳನ್ನು ನೋಡಿ ಸರ್ವ ವಿಧದಿಂದಲೂ ಅವನ ಮನಸ್ಸನ್ನು ವಿಕಾಸಗೊಳಿಸಲಿಕ್ಕೆ ಪ್ರಯತ್ನಪಟ್ಟ. ಆದರೆ ಆ ಯತ್ನಗಳೆಲ್ಲ ವ್ಯರ್ಥವಾದವು.

ಇತ್ತಿತ್ತಲಾಗಿ ಕ್ರೂರ ಖಾನ ಮನೆಗೆ ಬರುವದನ್ನೇ ಬಿಟ್ಟಿದ್ದ. ಅವನ ಊಟ ಉಪಚಾರಗಳೆಲ್ಲ ಎಲ್ಲಿಯೋ ಜರುಗುತ್ತಿದ್ದವು.

× × ×

ಒಂದು ದಿನ ಮಧ್ಯ ರಾತ್ರಿ. ಆ ಸಮಯಕ್ಕೆ ಊರೊಳಗೆಲ್ಲ ಭಯಾನಕ ವಾತಾವರಣ. ಪುರದ ಜನ ಚಿಂತೆ, ಭೀತಿಗಳ ಮಡುವಿನಲ್ಲಿ ಮುಳುಗಿದ್ದರು. ಪೋಲೀಸರ ತಂಡಗಳು ಸಶಸ್ತ್ರರಾಗಿ ಸಜ್ಜಾಗಿ ಊರನ್ನೆಲ್ಲ ಸುತ್ತ ತೊಡಗಿವೆ. ಶಾಂತಿ ಸಂಘದ ಕಾರ್ಯಕರ್ತರು ಬಿಕ್ಕಟ್ಟಿನ ಸ್ಥಳಗಳಲ್ಲಿ ಅಲೆದಾಡುತ್ತ, ಪುಂಡರ ಗುಪ್ತ ದುರ್ವಿಚಾರಗಳನ್ನು ತಿಳಿದುಕೊಳ್ಳುವದರಲ್ಲಿ ಮಗ್ನರಾಗಿದ್ದರು.

ಶೇಖರನ ಮನೆಯಿರುವದು ಮುಸಲ್ಮಾನರ ಓಣಿಯಲ್ಲಿಯೇ. ಅವನೊಬ್ಬ ದೇಶಭಕ್ತ. ಇದ್ದದರಲ್ಲಿ ತನ್ನ ಉಪಜೀವನವನ್ನು ಸಾಗಿಸಿಕೊಂಡು ನಾಡನುಡಿಗಳ ಸೇವೆ ಮಾಡಲು ಹಾತೊರೆಯುತ್ತಿದ್ದ. ಶೇಖರನು ಈಗ ಶಾಂತಿ ಸಂಘದ ಕಾರ್ಯಕರ್ತನಾಗಿ ಜನಸೇವೆಯನ್ನು ಒಳ್ಳೇ ಅಂತಃಕರಣಪೂರ್ವಕವಾಗಿ ಮಾಡುತ್ತಲಿದ್ದ. ಮನೆಯಲ್ಲಿದ್ದವರು ಇಬ್ಬರೇ. ತಾನು, ತನ್ನ ಅರ್ಧಾಂಗಿ ರಾಧೆ. ತರುಣ ದಂಪತಿಗಳ ಬಾಳಿನ ಹರಗೋಲು ಅದೇ ಮುಂದೆ ಸಾಗಿತ್ತು.

ಶೇಖರನು ಈ ದಿನ ರಾಧೆಯೊಬ್ಬಳನ್ನೇ ಮನೆಯಲ್ಲಿ ಬಿಟ್ಟು ಅನಾಥರ ರಕ್ಷಕನಾಗುವದಕ್ಕೆ ಬೇರೆ ಯಾವ ಓಣಿಗೋ ಹೋಗಿದ್ದಾನೆ. ರಾಧೆಯೊಬ್ಬಳೇ ಹಾಸಿಗೆಯ ಮೇಲೆ ಒರಗಿದ್ದಾಳೆ. ನಾನಾ ತರದ ವಿಚಾರಗಳು ಆಕೆಯ ಮನದಲ್ಲಿ ಚಕ್ರದಂತೆ ಉರುಳುತ್ತಿವೆ. ನಿದ್ರೆಯು ಮಾಯವಾಗಿಬಿಟ್ಟಿದೆ. ಬಿದ್ದಲ್ಲಿಯೇ ಹಲವು ವಿಚಾರಗಳನ್ನು ಮನದಲ್ಲಿ ಸುರಿಸುತ್ತಿರುವಳು. ಊರ ವಾತಾವರಣವು ಹೀಗೆ ದುಸ್ಥಿತಿಯಲ್ಲಿ ಇರುವಾಗ ಇವರೇಕೆ ಮನೆಬಿಟ್ಟು ಅಡ್ಡಾಡುವರು?

ಗಂಡಸರಿಲ್ಲದ ಮನೆಯಲ್ಲಿ ನಾನೊಬ್ಬಳೇ ಇರುವೆನಲ್ಲ! ಸುತ್ತಲೂ ದಂಗೆಗಾರರು ನಡುವೆ ಒಬ್ಬಂಟಿಗರಾದ ನಮ್ಮ ಬಾಳ್ವೆ. ಕೆಲವು ದಿವಸ ಈ ದಂಗೆಗಳು ಶಾಂತವಾಗುವ ವರೆಗೆ ಬೇರೆ ಊರಿಗೆ ಹೋಗಬಾರದೇಕೆ?

ಹಿಂದೆ ಪತಿಯು ಹೇಳಿದ ದಂಗೆಗಾರರ ಅತ್ಯಾಚಾರದ ಕೃತಿಗಳು ಒಂದೊಂದಾಗಿ ಕಣ್ಮುಂದೆ ಬಂದು ಹೋಗತೊಡಗಿದವು. ಅಗ ರಾಧೆಯು "ದೇವರೇ ಆ ಚಿತ್ರ ಮನದಲ್ಲಿ ಮೂಡಿದಾಗ ಹೃದಯ ಒಡೆದು ಚೂರು ಚೂರಾಗುವದು. ದಯಾಘನಾ ನಮ್ಮಿಬ್ಬರನ್ನು ಸಂರಕ್ಷಿಸುವ ಭಾರವು ನಿನ್ನನ್ನೇ ಕೂಡಿದೆ" ಎಂದು ಅಂದರೂ ಮನಸ್ಸಿನಲ್ಲಿ ನಡೆದ ವಿಚಾರಗಳ ಕೋಲಾಹಲವು ಹಾಗಿಯೇ ಮುಂದೆ ಸಾಗಿಯೇ ಇತ್ತು. ಒಮ್ಮೆ ಸಿಟ್ಟು ಬರುವದು. ಮತ್ತೊಮ್ಮೆ ದುಃಖವು ಆವರಿಸುವದು. ಅಂತೂ ವಿಚಾರ ತರಂಗಗಳ ತಾಕಲಾಟ ಪೀಕಲಾಟಗಳಲ್ಲಿ ಕೊಂಚ ಮಟ್ಟಿಗೆ ತನ್ನ ಪತಿಯನ್ನೇ ಅಪರಾಧಿಯನ್ನಾಗಿ ಮಾಡಿ ಕೊನೆಗೊಂಡು ಉದ್ಗಾರನನ್ನೆತ್ತಿದಳು.

"ಗಂಡಸರೂ ಜೊತೆಗಾರರೂ ಇಲ್ಲದ ಮನೆಯಲ್ಲಿ ನನ್ನೊಬ್ಬಳನ್ನೇ ಬಿಟ್ಟು ಹೋಗಿ ಇವರು ಎಂಥ ಜನಸೇವೆ ಮಾಡುವರು? ಅತಿ ನಿರ್ದಯರು. ಬಹು ಕಟುಕರು!

ಹೀಗೆನ್ನುವಷ್ಟರಲ್ಲಿಯೇ ಒಮ್ಮೆಲೆ ಬಲಗಣ್ಣು ಹಾರಿ ಮುಂದೆ ಒದಗಬಹುದಾದ ಕರಾಳ ಸಂಕಟದ ಸೂಚನೆಯನ್ನು ಮಾಡಿತು.

ರಾಧೆ ಭಯಭೀತಿಗಳಿಂದ ವ್ಯಾಕುಲಳಾಗಿ ಮೇಲೆ ನೋಡಿದಳು. ಜೇರುಗಿಂಡಿಯಲ್ಲಿ ಅಷ್ಟಮಿಯ ಚಂದ್ರ ಇಣಿಕಿ ನಗುತ್ತಿದ್ದ. ಆತನ ಶುಭ್ರವಾದ ಬೆಳಕು ತನ್ನ ಹಾಸಿಗೆಯ ಮೇಲೆ ಬಿದ್ದಿತ್ತು. ಹೀಗೆ ನೇತ್ರಗಳು ಶೂನ್ಯ ದೃಷ್ಟಿಯಿಂದ ಚಂದ್ರನನ್ನು ನೋಡುತ್ತಿದ್ದಾಗ ಭಯಪೂರಿತ ಆಕೆಯ ಮನವು ಬೇರೊಂದು ಕಡೆ ನೋಡುತ್ತಿತ್ತು.

ಅಷ್ಟರಲ್ಲಿಯೇ ಹಿತ್ತಲಬಾಗಿಲಿಗೆ ೨ ಮುಷ್ಟಿಗಳಿಂದ ಗುದ್ದುಗಳನ್ನು ಅಪ್ಪಳಿಸಿದ ಸದ್ದಾಯಿತು ರಾಧೆಯು ಗಾಬರಿಯಾಗಿ ಎವೆಯಿಕ್ಕದೆ ಭೀತ ಹೃದಯದಿಂದ ನೋಡಹತ್ತಿದಳು ಆಕೆಯ ಕಂಠವು ಒಣಗಿ ಹೋಯಿತು. ಶ್ವಾಸೋಚ್ಛ್ವಾಸ ಕ್ರಿಯೆಯು ಮಂದವಾಗಹತ್ತಿತು, ಶರೀರದಲ್ಲಿರುವ ಎಲ್ಲ ಜ್ಞಾನತಂತುಗಳು ಹೃದಯದಲ್ಲಿಯೇ ಬಂದು ಕೂಡಿಕೊಂಡವು. ನೈತಣ್ಣಗಾಗಿ ಭಯದಿಂದ ನಡುಗಹತ್ತಿತ್ತು.

ಅಷ್ಟರಲ್ಲಿಯೇ ಇತ್ತ ಬಾಗಿಲುಗಳ ಮೇಲೆ ನೂರಾರು ಮುಷ್ಟಿಗಳ ಹೊಡೆತದ ಸುರಿಮಳೆಯಾಗುತ್ತ ಖೋಲೋ, ಖೋಲೋ, ಎಂಬ ಕರ್ಕಶ ಧ್ವನಿಯು ಕೇಳಬರಹತ್ತಿತು.

ರಾಧೆಯ ಅರ್ಧ ಜೀವ ಹಾರಿಹೋಯಿತು. ಹಾಸಿಗೆಯಿಂದ ಚಟ್ಟನೇ ಎದ್ದು ನಿಂತಳು. ಉಳಿದರ್ಧ ಜೀವಕ್ಕೆ ತನ್ನ ಎಚ್ಚರಿಕೆ ಉಳಿಯಲಿಲ್ಲ. ಕೈಕಾಲುಗಳು ತಮ್ಮ ಸತ್ವವನ್ನು ಕಳೆದುಕೊಂಡವು. ಆದರೂ ಬಲ ಕೇಖರಿಸಿ ಬಿಚ್ಚಿದ ಹೆರಳಿನಿಂದ ಭೈರವೀರೂಪವನ್ನು ಧರಿಸಿದ ರಾಧೆಯು ಹಾಸಿಗೆಯ ಮೇಲೆ ನಿಂತಳು. ಈಗ ತಾನೇನು ಮಾಡುವದು?

'ಅರೇ? ಖೋಲೊ ಕೋಯಿ ನಹಿ?' ಅಂದವನೇ ಒಬ್ಬ ಪುಂಡ ಬಾಗಿಲನ್ನು ಬಲವಾಗಿ ಒದ್ದುಬಿಟ್ಟ. ಇನ್ನೊಬ್ಬ ಒಂದೆರಡು ದೊಡ್ಡ ದೊಡ್ಡ ಕಲ್ಲುಗಳನ್ನು ತಂದು ಬಾಗಿಲ ಮೇಲೆ ಎಸೆದುಬಿಟ್ಟ! ಫಳ್! ಖಟ್! ಎಂಬ ಸಪ್ಪಳವಾಗಿ ಬಾಗಿಲವು ನಾಲ್ಕಾರು ತುಣುಕುಗಳಾಗಿ ನೆಲಕ್ಕೆ ಬಿದ್ದು ಅವರಿಗೆ ಸ್ವಾಗತ ಮಾಡಿತು.

ಅಯ್ಯೋ! ಅಯ್ಯೋ! ಪುಂಡರು, ರಕ್ಷಿಸಿರಿ ಎನ್ನುತ್ತ ಹೊರಬಿದ್ದಳು.

ಅಗ ರಾಧೆ ಪತಿಯನ್ನು ಕಳೆದುಕೊಂಡ ಸಾವಿತ್ರಿ ಯಮನನ್ನು ಬೆನ್ನಟ್ಟಿದಂತೆ ವಾಯುವೇಗದಿಂದ ಬೀದಿ ಹಿಡಿದು ಓಡಲಾರಂಭಿಸಿದಳು.

ಪುಂಡರು ಬಾಗಿಲನ್ನು ಮುರಿದು ಒಳನುಗ್ಗಿದರು. ಕೆಲವರು ಮನೆಯನ್ನು ಸುಲಿದುಕೊಳ್ಳುವ ಕೆಲಸಕ್ಕೆ ತೊಡಗಿದರು. ಕೆಲವರು ಆಕೆಯ ಮಾನಹಾನಿಗಾಗಿ ಬೆನ್ನಟ್ಟಿದರು. ಆಕೆ ಮುಂದೆ, ಇವರು ಹಿಂದೆ. ಇಬ್ಬರಿಗೂ ಅಂತರ ತೀರ ಕೊಂಚ. ರಾಧೆಯೊಮ್ಮೆ ಓಡುತ್ತಲೇ ತಿರುಗಿ ನೋಡಿದಳು. ಉದ್ದವಾದ ಕರಿ ಅಂಗಿ, ತಲೆಗೆ ಕಟ್ಟಿದ ಹಸರು ಕೆಂಪು ಬಣ್ಣದ ಅರಿವೆಗಳು, ಕೈಯಲ್ಲಿ ತೀಕ್ಷ್ಣವಾದ ಹೊಳೆಯುವ ಬಿಳೀ ಆಯುಧಗಳು, ಶುಭ್ರವಾದ ಬೆಳಕಿನಲ್ಲಿ ಇವೆಲ್ಲವೂ ಆಕೆಗೆ ನಿಚ್ಚಳವಾಗಿ ಕಾಣಿಸಿದವು.

ಆಕೆಯ ಎದೆಯೊಡೆದು ನೀರಾಯಿತು. ಗಂಟಲು ಒಣಗಿತು. ನನ್ನ ಜೀವ ನಡುಬೀದಿಯಲ್ಲಿ ಪುಂಡರ ಕೈಯಲ್ಲಿ ಸಿಕ್ಕಿತಲ್ಲ ಎಂದು ದಿಗ್ಭ್ರಾಂತಳಾದಳು. ಅಷ್ಟರಲ್ಲಿ "ಅಕ್ಕಾ? ತಡೆ ತಡೆ ಭಯಪಡಬೇಡ ಬಂದೆವು ಬಂದೆವು" ಎಂಬ ಶಬ್ದಗಳು ಆಕೆ ಓಡುತ್ತಿದ್ದ ಇದಿರಿನ ದಿಕ್ಕಿನಿಂದ ಬಂತು. ಖಾದೀ ವೇಷಧಾರಿ-ದಯೆಯ ಮೂರ್ತಿ-ದಯಾಮನು ಕೈಯಲ್ಲೊಂದು ಕೋಲನ್ನು ಹಿಡಿದುಕೊಂಡು ಒಳ್ಳೇ ವೇಗವಾಗಿ ಧಾವಿಸಿ ಬಂದನು. ಸೆಳವಿನಲ್ಲಿ ಸಿಕ್ಕು ಹೋಗುತ್ತಿದ್ದವರಿಗೆ ಹುಲ್ಲುಕಡ್ಡಿಯ ಆಧಾರ ಸಿಕ್ಕಂತಾಯಿತು. ಮೃತ್ಯುವಿನ ದವಡೆಯಲ್ಲಿ ಸಿಕ್ಕಾಗ ಸಂಜೀವಿನಿಯ ದರ್ಶನವಾದಂತಾಯಿತು. ತನ್ನ ಸಹಾಯಕ್ಕೆ ಬರುತ್ತಿರುವ ವ್ಯಕ್ತಿಯನ್ನು ಕಂಡು ರಾಧೆಗೆ ಹೋದ ಜೀವ ಮರಳಿತು. ಅಗ ಪುನಃ ಹಿಂತಿರುಗಿ ನೋಡಿದಳು. ಯಮನಂತೆ ಇರುವ ನರರಾಕ್ಷಸ ಕೊಲೆಗಾರ ತನ್ನ ಬೆನ್ನ ಹಿಂದೆಯೇ ಇದ್ದಾನೆ. ರಾಧೆಯನ್ನು ಹಿಂದೆ ಹಾಕಿ ಕೊಲೆಪಾತಕನ ಇದಿರಿಗೆ ದಯಾಮ ನಿಂತಿದ್ದಾನೆ. ಅವರಿಬ್ಬರಿಗೂ ಅಂದ ವಾಗ್ವಾದ ಕೇಳಗಿನಂತೆ.

ಎಲೋ ಕೊಲೆಪಾತಕಾ ನೀಚಾ ಅಬಲೆಯರ ಮೇಲೆ ಅತ್ಯಾಚಾರವೆ? ಹಿಂದೆ ಸರಿ ಪಾಪಿ!

ಎಲೋ ಕಾಫಿರನೇ ಸರಿದು ನಿಲ್ಲು-ಆ ಕಡೆ. ಇಲ್ಲವಾದರೆ... ..

ನಾನು ನನ್ನ ಪ್ರಾಣವಿರುವ ವರೆಗೂ ಈ ಸಾಧ್ವಿಯನ್ನು ಮುಟ್ಟಗೊಡಲಾರೆ ತಿಳಿಯಿತೇ?

ಒಂದೇ ಸಮಯಕ್ಕೆ ಎರಡು ಜೀವಗಳು ಬಲಿಯಾದಾವು. ವಿಚಾರ ಮಾಡು...

ಒಮ್ಮೆ ನಾನು ಮಾತಾಡಿಸ್ದು ಧರ್ಮನಾಕ್ಯ. ಒಂದೇ ದೇಶದಲ್ಲಿ ಜನಿಸಿ ಒಂದೇ ಭೂಮಿಯ ಅನ್ನವನ್ನುಂಡು ಒಂದೇ ತಾಯಿಯ ಮಕ್ಕಳಾದ ನಾವು ಇಂಥ ಅತ್ಯಾಚಾರಗಳನ್ನು ಮಾಡುವದೆ? ಹಿಂದುಗಳಾರು? ಮುಸಲ್ಮಾನರಾರು? ಹಿಂದೀ ತರುಣಿಯರು ಮುಸಲ್ಮಾನರಿಗೆ ಸಹೋದರಿಯರಲ್ಲವೇ? ಈ ನೀಚ ಕೆಲಸವನ್ನು ಮಾಡಿ ನೀನು ಗಳಿಸುವದಾದರೂ ಏನು? ನಿನ್ನ ದೇವನ ಮುಂದೆ ಕೊಡುವ ಉತ್ತರವು ಯಾವದು? ವಿಚಾರ ಮಾಡು. ಹೀಗೆ ಅದನುನಂತೆ ಕೆಟ್ಟ ಬುದ್ಧಿಗೆ ಆಸ್ಪದ ಕೊಡಬೇಡ. ನಿನ್ನ ಸಹೋದರಿಯ ಸ್ಥಿತಿಯನ್ನೇ ಈ ರೀತಿ ಪರರು ಮಾಡಿದಲ್ಲಿ ನಿನ್ನ ಮನವು ಏನು ಹೇಳುತ್ತಿತ್ತು? ವಿಚಾರ ಮಾಡು.

ನಾನು ನಿನ್ನ ಉಪದೇಶವನ್ನು ಕೇಳಬಯಸುವದಿಲ್ಲ. ನಾನು ಮಾಡುತ್ತಿರುವ ಕರ್ತವ್ಯವು ನನಗೆ ಪ್ರಿಯಕರವಾಗಿದೆ. ನಾನು ನನ್ನ ಕರ್ತವ್ಯವನ್ನು ಕೊನೆಗಾಣಿಸಲೇ ಬೇಕು. ಆಕೆಯ ಫಲವನ್ನು ನೀನು ಅನುಭವಿಸಬೇಕಾದೀತು !

ನಾನು ನನ್ನ ಧರ್ಮವನ್ನು ಬಿಡಲಾರೆ.

ಹಾಗಾದರೆ ತೆಗೆದುಕೋ ಧರ್ಮವನ್ನು ಎಂದ.

ತೀಕ್ಷ್ಣವಾದ ಚೂರಿಯು ದಯಾನಿಧಿ ದಯಾಮನ ಹೃದಯದಲ್ಲಿ ಒಳ್ಳೇ ಕಸುವಿನಿಂದ ಒಳನುಗ್ಗಿತು. ಹಾಯ್ ಅಲ್ಲಾ! ಎಂದವನೇ ದಯಾಮ ನೆಲಕ್ಕುರುಳಿದ.

ದಯಾಮನ ಹುರಿಯಲ್ಲಿ ನಿಂತಿದ್ದ ರಾಧೆ ಅಯ್ಯೋ ಬಂಧುವೇ! ಎಂದವಳೇ ದಯಾಮನ ಶಿರವನ್ನು ನೆಲಕ್ಕೆ ಮುಟ್ಟಗೊಡದೇ ತನ್ನ ತೊಡೆಯ ಮೇಲೆ ತೆಗೆದುಕೊಂಡು ಕುಳಿತಲ್ಲಿಯೇ ಮೂರ್ಛೆ ಹೋದಳು. ಕೊಲೆಗಡಕನಾದ ಕ್ರೂರ ಖಾನನು ಎವೆಯಿಕ್ಕದೇ ಬಿದ್ದ ಮೂರ್ತಿಯನ್ನು ನೋಡಿದ. ಶಾಂತ ದಿವ್ಯ ತನ್ನ ತಮ್ಮ ದಯಾಮನ ಮುಖಮಂಡಲವು ಬೆಳದಿಂಗಳ ಬೆಳಕಿನಲ್ಲಿ ಸ್ಪಷ್ಟವಾಗಿ ಕಾಣಿಸತೊಡಗಿತು. ಹಾಯ್ "ಮೇರೆ ಭಯ್ಯಾ" ಎಂದವನೇ ಕ್ರೂರಖಾನ ತನ್ನ ತಮ್ಮನ ಮೃತ ಶರೀರದ ಮೇಲೆ ಬಿದ್ದ. ಈಗ ದಯಾಮ ಎಲ್ಲಿರುವನು? ಅವನು ವೀರಸ್ವರ್ಗವನ್ನೇರಿ ಪರಮೇಶ್ವರನ ಬದಿಯಲ್ಲಿ ಕುಳಿತು ಪುಂಡರ ರಾಕ್ಷಸೀ ಕೃತ್ಯಗಳ ವರದಿಯನ್ನು ಒಪ್ಪಿಸುತಿರಬಹುದಲ್ಲವೆ?



ಜ್ಯೋತಿಷಿ— ಕೃಷ್ಣಶಾಸ್ತ್ರಿ ಭಿಡೆ ಭವಿಷ್ಯ ಕಥನ ಆಫೀಸ ಖಡೇಬಜಾರ ಬೆಳಗಾವಿ.

ಮಾರ್ಚ ೧೫ ರಿಂದ ೨೧ ರ ವರೆಗೆ

ಮೇಷ

ಸ್ವತಃ ನಿಮಗೆ ಬಹಳ ಮತ್ತು ಹೆಂಡತಿ ಹಾಗು ಮಕ್ಕಳಿಗೆ ಅಲ್ಪಸ್ವಲ್ಪ ಕಾಯಿಲೆ ಎಲ್ಲ ವಿಷಯ ಗಳಲ್ಲಿ ಪ್ರಾಪಂಚಿಕ ಸುಖ ಕಡಿಮೆ. ಮನೆಮಾರು ಗಳಿಗೆ ಕಳ್ಳರ ಭಯ. ವ್ಯಾಪಾರದಲ್ಲಿ ಬಹಳ ಹಾನಿ. ಮತ್ತು ರೈತರು ಇಲ್ಲವೆ ನೌಕರರಿಂದ ಬಹಳ ಪರಾಟಿಕೆಯು ಧೋರಣ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಸಾಧಾರಣ ಅನುಕೂಲ. ಆದರೆ ಪ್ರತಿಷ್ಠೆಯು ಹಾರಿ ಹೋಗುವ ದುರ್ಧರ ಪ್ರಸಂಗ. ಮಿತ್ರರು ಶತ್ರುಗಳಂತೆ ಶತ್ರುಗಳು ಮಿತ್ರರಂತೆ ವರ್ತಿಸುವರು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಅಶ್ವಿನಿಯ ಕೊನೆಯ ೨ ಮತ್ತು ಭರಣಿಯ ಮೊದಲನೆಯ ೨ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೬, ೧೮, ೧೯ ಅನುಕೂಲ.

ವೃಷಭ

ನಿಮಗೆ ಸ್ವತಃಕ್ಕೆ ಮತ್ತು ಹೆಂಡತಿಗೆ ಅಲ್ಪ ಸ್ವಲ್ಪ ಕಾಯಿಲೆ. ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಕಡಿಮೆ. ಆದರೆ ಲಾಭ ಅನುಕೂಲ. ಜೈನಿಯಲ್ಲಿ ಮತ್ತು ದೊಡ್ಡಸ್ತನ ತೋರಿಸುವಲ್ಲಿ ಬಹಳ ವೆಚ್ಚ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪರಸ್ತ್ರೀ ಬಗೆಗೆ ಪಾಪ ವಿಚಾರ. ಮಿತ್ರಸುಖ ಅನು ಕೂಲ. ಪ್ರವಾಸದಲ್ಲಿ ಧಕ್ಕೆ. ಭೆಟ್ಟಿಯಲ್ಲಿ ತಿಕ್ಕಾಟ ಆದರೆ ಪತ್ರವ್ಯವಹಾರ ಅನುಕೂಲ. ಕೃತ್ತಿಕೆಯ ಕೊನೆಯ ೨ ಮತ್ತು ರೋಹಿಣಿಯ ಮೊದಲನೆ ೨ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೮, ೧೯, ೨೦ ಅನುಕೂಲ.

ಮಿಥುನ

ಪ್ರಕೃತಿ ಮತ್ತು ಸ್ತ್ರೀ ಸುಖ ಅನುಕೂಲ. ಮಕ್ಕಳಲ್ಲಿ ಉನ್ನತಿ, ಆದರೆ ಅವರಲ್ಲಿ ಮತ್ತು ನಿಮ್ಮಲ್ಲಿ ತೀವ್ರ ಮತಭೇದ. ಪ್ರಾಪಂಚಿಕ ವಿಷ ಯಗಳಲ್ಲಿ ಅಕಲ್ಪಿತ ಘಟನೆಗಳಿಂದ ಬಹಳ ತೊಂದರೆ. ಕೆಲ ದುಡ್ಡು ಇಲ್ಲವೆ ವಸ್ತು ಕಳವಾಗಿ ಹೋಗುವ ಅಂಜಿಕೆ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಕಡಿಮೆ. ಆದರೆ ಪ್ರತಿಷ್ಠೆ ಅನು ಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನನು ಕೂಲತೆ. ಆದರೆ ಶತ್ರುಗಳು ಘಂಡ ಫಿತೂರಿಯ ದೊಡ್ಡ ಪ್ರಯತ್ನ ಮಾಡುವರು. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಆರಿದ್ರೆಯ ಕೊನೆಯ ೨ ಮತ್ತು ಪುನರ್ವಸು ವಿನ ಮೊದಲನೆ ೨ ಚರಣಗಳಿಗೆ ಹೆಚ್ಚು ತೊಂದರೆ ತಾ. ೧೫, ೧೮, ೧೯ ಅನುಕೂಲ.

ಕರ್ಕ

ಸ್ವತಃ ಸಹ ಮನೆಯಲ್ಲಿಯ ಬಹುತರ ಎಲ್ಲ ಜನರ ಪ್ರಕೃತಿಯಲ್ಲಿ ಅಲ್ಪಸ್ವಲ್ಪ ಕುರಕುರಿ. ಮತ್ತು ಬಹುತರ ವಿಷಯಗಳಲ್ಲಿ ಪ್ರಾಪಂಚಿಕ ಸಮಾಧಾನ ಕಡಿಮೆ. ಆಪ್ತರು ಮತ್ತು ನೆರೆಯವ ರಿಂದ ಮನಸ್ಸಿಗೆ ಬಂದಂತೆ ಸುದ್ದಿ ಹಬ್ಬಿಸುವರು. ವಾಹನದಲ್ಲಿ ಅಪಘಾತ ಇಲ್ಲವೆ ದನಕರುಗಳಿಗೆ ರೋಗಭಯ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಕಡಿಮೆ. ಹೊಸ್ಸೆಲ್ಲ ಮಣ್ಣಾ ಗುವದು. ಮಿತ್ರರಿಂದ ಬುದ್ಧಿ ಭೇದ. ದೇವಧರ್ಮ ಗಳಲ್ಲಿ ಅಶ್ರದ್ಧೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪ್ರತಿಪಕ್ಷಗಳದು ಜೋರು. ಪ್ರವಾಸಾದಿ ಕೆಲಸ ತೊಂದರೆಯದು. ಪುಷ್ಯದ ಕೊನೆಯ ೨ ಮತ್ತು ಅಶ್ಲೇಷಾದ ಮೊದಲನೆ ೨ ಚರಣಗಳಿಗೆ ತೊಂದರೆ ಹೆಚ್ಚು. ತಾ ೧೬, ೧೭, ೨೦ ಅನುಕೂಲ.

ಸಿಂಹ

ಪ್ರಕೃತಿಗೆ ಬಹಳ ಕ್ಲೇಶ. ಹೆಂಡತಿಗೆ ಅಪಘಾತ ಭಯ. ಮಕ್ಕಳಿಗೆ ಉನ್ನತಿ ಮತ್ತು ಮಿತ್ರ ಸುಖ ಅನುಕೂಲ ಉದ್ಯೋಗದಲ್ಲಿ ಪ್ರಗತಿ ಸಾಧಾರ ಣವೇ. ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಆದರೆ ವೆಚ್ಚ ವಿಪರೀತ ವಾದದಲ್ಲಿ ಮತ್ತು ಸ್ಪರ್ಧೆ ಯಲ್ಲಿ ಹೊಸ ಹೊಸ ಅಡಚಣೆಗಳು ಪ್ರಿಯಜನರ ಭೆಟ್ಟಿ ಸಹವಾಸ. ಲೌಕಿಕ ಬೆಳೆವಂಥ ಕೆಲಸವೊಂದು [illegible] ಮತ್ತು ಪತ್ರ ವ್ಯವಹಾರ ಕೆಲಮಟ್ಟಿಗೆ ಅನುಕೂಲ. ಮಘಾದ ಕೊನೆಯ ೨ ಮತ್ತು ಪೂರ್ವಾದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೭, ೧೮, ೧೯ ಅನುಕೂಲ.

ಕನ್ಯಾ

ಪ್ರಕೃತಿಗೆ ಕ್ಲೇಶ ಸ್ತ್ರೀಸುಖ ಕಡಿಮೆ. ಅದು ಸಿಕ್ಕುವಾಗ ಕೆಲ ಅನಪೇಕ್ಷಿತ ಅಡಚಣೆಗಳು ಉದ್ಯೋಗದಲ್ಲಿ ಲಾಭ ಅನುಕೂಲ ಆದರೆ ಪ್ರಗತಿ ಮತ್ತು ಪ್ರತಿಷ್ಠೆ ಕಡಿಮೆ ನೌಕರಿಮಾಡುವವರಿಗೆ ಬಹಳ ಕಠಿನ ಕೆಲಸಮಾಡಬೇಕಾದ ಪ್ರಸಂಗ ಮಿತ್ರರಲ್ಲಿ ಒಬ್ಬರ ವಿರೋಧದ ಸಂಭವ. ವಾದ ದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಸಜ್ಜನ ಸ್ತ್ರೀಯರ ನಿಂದೆ ಮಾಡಿದ ಲೋಕಾಪವಾದ ಪ್ರವಾಸಾದಿ ಕೆಲಸ ತೊಂದರೆ ಯದು ಉತ್ತರಾದ ಕೊನೆಯ ೩ ಮತ್ತು ಹಸ್ತಾದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಿಮೆ. ತಾ.೧೮–೧೯–೨೦ ಅನುಕೂಲ.

ತುಲಾ

ನಿಮ್ಮ ಪ್ರಕೃತಿ ಅನುಕೂಲ ಆದರೆ ಹೆಂಡತಿ ಮತ್ತು ಮಕ್ಕಳ ಚಿಂತೆ ಹತ್ತುವದರಿಂದ ಕೆಡುವ ಅಂಜಿಕೆ. ಉಳಿದ ವಿಷಯಗಳಲ್ಲಿಯೂ ಪ್ರಾಪಂ ಚಿಕ ತೊಂದರೆ ಹೆಚ್ಚು ಉದ್ಯೋಗದಲ್ಲಿ ಪ್ರಗತಿ ಅನುಕೂಲ. ಆದರೆ ಪ್ರತಿಷ್ಠೆ ಮತ್ತು ಲಾಭ ಬಹಳ ಕಡಿಮೆ. ಮಿತ್ರರಿಂದ ಬಹಳ ದೋಷ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಅನುಕೂಲ. ಸ್ವಾತಿಯ ಕೊನೆಯ ೨ ಮತ್ತು ವಿಶಾಖಾದ ಮೊದಲನೇ ೨ ಚರಣಗಳಿಗೆ ಹೆಚ್ಚು ತೊಂದರೆ ತಾ.೧೯–೨೦–೨೧ ಅನುಕೂಲತೆ.

ವೃಶ್ಚಿಕ

ನಿಮ್ಮ ಮತ್ತು ಹೆಂಡತಿಯ ಆರೋಗ್ಯ ಸಾಧಾ ರಣ ಕೆಡುವದು ಆದರೆ ಮಕ್ಕಳದು ಬಹಳ ಉತ್ತಮ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಮನಸ್ಸಿನಂತೆ ಉದ್ಯೋಗದಲ್ಲಿ ಪ್ರಗತಿ ಕಡಿ ಮೆಯು ಆದರೆ ಪ್ರತಿಷ್ಠೆ ಮತ್ತು ಲಾಭ ಅನು ಕೂಲ. ಮಿತ್ರದಲ್ಲಿ ವಿರೋಧ ಪರಸ್ತ್ರೀ ಬಗ್ಗೆ ಪಾಪ ಬುದ್ಧಿ ಬಂಧು ವರ್ಗದಲ್ಲಿ ವಿರೋಧ ವಾದ ದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಅನುರಾ ಧಾದ ಕೊನೆಯ ೨ ಮತ್ತು ಜ್ಯೇಷ್ಠಾದ ಮೊದ ಲನೆ ೨ ಚರಣಗಳಿಗೆ ಹೆಚ್ಚು ತೊಂದರೆ ತಾ. ೧೬ ೧೭–೨೧ ಅನುಕೂಲ.

ಧನು

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ ಆದರೆ ಮಕ್ಕಳು ಮನಸ್ತಾಪವಾಗುವಂತೆ ಅಪಮಾನ ಮಾಡುವರು. ಉಳಿದ ವಿಷಯಗಳಲ್ಲಿಯೂ ಪ್ರಾಪಂಚಿಕ ತೊಂದರೆಯ ಹೆಚ್ಚಳ ಉದ್ಯೋಗ ದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಅಷ್ಟಕಷ್ಟೆ. ಆದರೆ ಲಾಭ ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆ ಯಲ್ಲಿಯು ಶಿಸ್ತು ಮಿತ್ರ ಸುಖ ಉತ್ತಮ ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಉತ್ತಮ ಮೂಲಾದ ಕೊನೆಯ ೨ ಮತ್ತು ಪೂರ್ವಾಷಾ ಢಾದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಿಮೆ ತಾ. ೧೮–೧೯–೨೧ ಅನುಕೂಲ.

ಮಕರ

ಪ್ರಕೃತಿ ಸಾಧಾರಣ. ಹೆಂಡತಿಗೆ ಕಿರಕಳ ಕಾಯಿಲೆ ಅಲ್ಲದೆ ಅವಳ ಮಾನಸಿಕ ಸ್ಥಿತಿ ಬಹಳ ಕೆಡುವದು. ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ಹೆಚ್ಚು. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಸಾಮಾನ್ಯವಾಗಿ ಅನುಕೂಲ. ಆದರೆ ಪ್ರತಿಷ್ಠೆ ಉತ್ತಮ ಮಿತ್ರರಲ್ಲಿ ಕ್ಲೇಶ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನು ಕೂಲತೆ. ಆದರೆ ನಿಮ್ಮ ಪೈಕಿ ಒಬ್ಬನು ಶತ್ರುಗಳಿಗೆ ಫಿತೂರ ಆಗುವ ಅಂಜಿಕೆ. ಸ್ವಜಾತಿಯವರ ಗೊಡ ವೈಮನಸ್ಸು. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಉತ್ತರಾಷಾಢಾದ ಕೊನೆಯ ೨ ಮತ್ತು ಶ್ರವಣಾದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೬, ೧೭, ೨೦ ಅನುಕೂಲ.

ಕುಂಭ

ಸ್ವತಃ ನಿಮಗೆ ಮತ್ತು ಹೆಂಡತಿಗೆ ಕಿರುಕಳ ಕ್ಲೇಶ. ಪ್ರಾಪಂಚಿಕ ಸುಖ ಅನುಕೂಲ ಮತ್ತು ಮಕ್ಕಳಲ್ಲಿ ಒಬ್ಬರಿಗೆ ವಿಶೇಷ ಉನ್ನತಿ. ಉದ್ಯೋ ಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ. ಆದರೆ ಪ್ರತಿಷ್ಠೆಗಾಗಿ ಅಶಕ್ಯತ್ಯ ಮಾಡಿದ ಆರೋಪ, ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳದು ಬಹಳ ಹಾನಿ ಆದರೆ ನಿಮ್ಮದು ಸ್ವಲ್ಪ ಹಾನಿ. ಮಿತ್ರ ಸುಖ ಅನುಕೂಲ. ಪ್ರವಾಸ ಮತ್ತು ಪತ್ರವ್ಯವ ಹಾರ ಭೆಟ್ಟಿಗಿಂತ ಅನುಕೂಲ. ಶತತಾರಿಕೆಯ ಕೊನೆಯ ೨ ಮತ್ತು ಪೂರ್ವಾಭಾದ್ರಪದದ ಮೊದ ಲನೆ ೨ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೧೮, ೧೯, ೨೦ ಅನುಕೂಲ.

ಮೀನ

ಪ್ರಕೃತಿ ಅನುಕೂಲ. ಆದರೆ ಹೆಂಡತಿ ಮತ್ತು ಮಕ್ಕಳಿಗೆ ಕಿರುಕಳ ಕ್ಲೇಶ. ಉಳಿದ ವಿಷಯ ಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಉದ್ಯೋ ಗದಲ್ಲಿ ಪ್ರಗತಿ ಮತ್ತು ಲಾಭ ಸಾಧಾರಣವೆ. ಆದರೆ ಪ್ರತಿಷ್ಠೆ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಮಿತ್ರರಲ್ಲಿ ಕ್ಲೇಶ ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಉತ್ತಮ. ಉತ್ತರಾಭಾದ್ರಪದದ ಕೊನೆಯ ೨ ಮತ್ತು ರೇವತಿಯ ದೊದಲನೇ ೨ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೧೬, ೧೭, ೨೦ ಅನುಕೂಲ.

ಗಡಿಪ್ರಾಂತದಿಂದ ೨೭ ಸಾವಿರ ಹಿಂದು ನಿರಾ ಶ್ರಿತರ ಸ್ಥಾನಾಂತರವಾಗಬೇಕಾಗಿದ್ದು ಇದೇ ಎಪ್ರಿಲದಲ್ಲಿ ಆ ಕೆಲಸ ಪೂರೈಸಲ್ಪಡುವದೆಂದು ತಿಳಿಯುತ್ತದೆ.

(೩ನೇ ಪುಟದಿಂದ ಬಂದುದು)

ಗೌರವ. ಜಗತ್ತು ತಮ್ಮನ್ನು ಗೌರವಿಸಬೇಕೆಂಬು ಅವರ ಉತ್ಕಟೇಚ್ಛೆ. ಒಂದು ಮಾರ್ಗ ಹಿ[illegible] ದುನಡೆದು ಅಪಜಯ ಹೊಂದಿದಾಗ ನಿರಾಶರಾಗ[illegible] ದೆ, ಛಲಹಿಡಿಯದೆ ಅದನ್ನು ಬಿಡು ಕಂಕ್ರೊಂ[illegible] ದಾರಿಯನ್ನು ಸರಳವಾಗಿ ಅವರು ಹಿಡಿದು ಜ[illegible] ತ್ತಾರೆ.

ಮೇಲಿನ ಸದ್ಗುಣಗಳಿಂದಲೇ ಜಪಾನೀಯರು ಮೊನ್ನಿನ ಮಹಾಯುದ್ಧದ ಕಾಲದ ವರೆಗೆ ಎ[illegible] ದೂ ಪರರಾಳಿಕೆಗೆ ಒಳಪಟ್ಟಿದ್ದಿಲ್ಲ. ಇನ್ನಾದರೂ ಅವರು ತಮ್ಮ ಗುಣ, ಸಂಸ್ಕಾರ ಸಹಜವಾದ ಚಿಗುಟುತನದಿಂದ ಸ್ಥಿತಿಸ್ಥಾಪಕರಾಗಿ ಪೂರ್ವದ ತಮ್ಮ ಸುಸ್ಥಿತಿಯನ್ನು ಅಲ್ಪಕಾಲದಲ್ಲೇ ಮುಟ್ಟದಿರರೆಂದು ಧೈರ್ಯವಾಗಿ ಹೇಳಬಹು ದು.

ಭಾರತೀಯರಿಗಿವು ಮಾದರಿಯಾಗಿವೆ. ಈ ಗುಣಗಳನ್ನು ಕಲಿತ ಹೊರತು ಈ ಕಲಹಗ್ರಸ್ತ ಜಗತ್ತಿನಲ್ಲಿ ಆತ್ಮರಕ್ಷಣೆ ಮಾಡಿಕೊಳ್ಳಲು ಸಾಧ್ಯ ವಾಗದು. ತರುಣ ಲೋಕ ಇತ್ತ ಲಕ್ಷ್ಯಕೊಡು ವುದೇ? ಬ್ರಹ್ಮಚರ್ಯದಿಂದ ಗತಕಾಲದ ಬ್ರಾಹ್ಮೀಶಕ್ತಿಯನ್ನು ಪಡೆದು ತನ್ನನ್ನು ತನ್ನ ತಾಯ್ನಾಡನ್ನೂ ಸದಾ ಸುಸ್ಥಿತಿಯಲ್ಲಿಡುವ ಯೋಜ ನೆಯನ್ನು ಕೈಗೊಳ್ಳುವುದೆ?

ಸಲಗರವಾಡಿಯಲ್ಲಿಯ (ಕೊಲ್ಹಾಪುರ) ಪೋಸ್ಟಮನ್ನನಾದ ಶ್ರೀ ಮಾಧವ ವಿಠಲ [illegible] ವನು ಅಂಚೆ ಕಚೇರಿಯ ೧೮೯–೩–೦ ಹ[illegible] ವನ್ನು ಸ್ವಂತಕ್ಕಾಗಿ ಬಳಸಿಕೊಂಡದ್ದರಿಂದ [illegible] ರೆಂಟ ಮ್ಯಾಜಿಸ್ಟ್ರೇಟರು ಅವನಿಗೆ ೧ ತಿಂಗಳ [illegible] ೧೨೫ ರೂ. ದಂಡ ಇಲ್ಲವೆ ೨ ತಿಂಗಳ ಶಿಕ್ಷೆ [illegible] ದರು.

ಈ ಪತ್ರಿಕೆಯು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ಲೋಕಶಿಕ್ಷಣ ಟ್ರ[illegible] ಪರವಾಗಿ ಹ. ರಾ ಪುರೋಹಿತರಿಂದ ಮುದ್ರಿತ ಪ್ರಕಟಿತವಾಯಿತು.